ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 21 ಶುಕ್ರವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 96 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ಭಾವಪೂರ್ಣ ಶ್ರದ್ಧಾಂಜಲಿ

ಅನೇಕರ ಬದುಕಿಗೆ ಬೆಳಕು ನೀಡಿದ ನಿಸ್ವಾರ್ಥ ಚೇತನಕ್ಕೆ ನಮನಗಳು



ಶ್ರೀ. ಡಿ.ನರೇಂದ್ರನಾಥ್ ಸಿಂಗ್

ಜನನ: 14.11.1947 – ಮರಣ: 19.07.2023

ದಿವಂಗತ ಶ್ರೀಮತಿ ದುರ್ಗಾಬಾಯಿ ಮತ್ತು ಶ್ರೀ ದುರ್ಗಾಸಿಂಗ್ ಅವರ ಪುತ್ರ ಶ್ರೀ ಡಿ.ನರೇಂದ್ರನಾಥ್ ಸಿಂಗ್ ಅವರು ತಮ್ಮ 75ನೇ ವಯಸ್ಸಿನಲ್ಲಿ ಇತ್ತೀಚಿಗೆ ಯು.ಎಸ್.ಎಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ದಿ: 19 ಜುಲೈ 2023ರ ಸಂಜೆ 6:12ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತಿಮ ವಿಧಿ-ವಿಧಾನಗಳನ್ನು ಅಮೇರಿಕಾದ ಮಿಚಿಗನ್‌ನ ಸ್ಟರ್ಲಿಂಗ್ ಹೈಟ್ಸ್‌ನಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಅಮರ್ ಸಿಂಗ್, ನವೀನ್, ನಿಶಾಂತ್ ಮತ್ತು ಕುಟುಂಬ

ಮೊ: 9342312338 / 9845417014 / 9686484510

ಮೈಸೂರು ಮಿತ್ರ

ಕೆ.ಆರ್. ಆಸ್ಪತ್ರೆ ನೆಫ್ರೋ ಯೂರಾಲಜಿ ಘಟಕದಲ್ಲಿ ಹಾಲ್ಮಿಯಂ ಲೇಸರ್ ಯಂತ್ರ ಕಾರ್ಯಾರಂಭ



ಮೈಸೂರು, ಜು.20(ಆರ್‌ಕೆ)–ಶರೀರದಲ್ಲಿ ರಂಧ್ರ ಮಾಡದೇ ಲೇಸರ್ ಕಿರಣಗಳ ಮೂಲಕ ಕಿಡ್ನಿ ಕಲ್ಲುಗಳನ್ನು ತೆಗೆದು ಹಾಕುವ ನೂತನ ತಂತ್ರಜ್ಞಾನದ ಹಾಲ್ಮಿಯಂ ಲೇಸರ್ ಯಂತ್ರವನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಯ ನೆಫ್ರೋ ಯೂರಾಲಜಿ ಘಟಕದಲ್ಲಿ ಅಳವಡಿಸಲಾಗಿದೆ.

ಆಸ್ಪತ್ರೆಯ ಐಪಿಡಿ–ಓಪಿಡಿ ಕಟ್ಟಡದ 4ನೇ ಮಹಡಿಯಲ್ಲಿರುವ 60 ಹಾಸಿಗೆ ಸಾಮರ್ಥ್ಯದ ನೆಫ್ರೋ ಯೂರಾಲಜಿ ಘಟಕದಲ್ಲಿ ಸಂಸ್ಥೆಯ ನಿರ್ದೇಶಕ ಡಾ. ಕೇಶವಮೂರ್ತಿ ಅವರು ಹಾಲ್ಮಿಯಂ ಲೇಸರ್ ಯಂತ್ರವನ್ನು ಉದ್ಘಾಟಿಸುವ ಮೂಲಕ ಕಿಡ್ನಿ ಸ್ಟೋನ್ ತೆಗೆಯುವ ಚಿಕಿತ್ಸೆಗೆ ಬುಧವಾರ ಚಾಲನೆ ನೀಡಿದರು.

ಈ ಯಂತ್ರದಿಂದ ಶರೀರದಲ್ಲಿ ಯಾವುದೇ ರಂಧ್ರ ಮಾಡದೇ ಲೇಸರ್ ಕಿರಣ ಹಾಯಿಸಿ ಕಿಡ್ನಿಯಲ್ಲಿರುವ ಕಲ್ಲುಗಳನ್ನು ತೆಗೆದು ಹಾಕಬಹುದಾಗಿದ್ದು, ಬೆಂಗಳೂರಿನ ನೆಫ್ರೋ ಯೂರಾಲಜಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಇದೇ ಮೊದಲ ಬಾರಿಗೆ ಮೈಸೂರು ನಗರದ ಕೆ.ಅರ್. ಆಸ್ಪತ್ರೆಯ ನೆಫ್ರೋ ಯೂರಾಲಜಿ ಘಟಕದಲ್ಲಿ ಈ ಚಿಕಿತ್ಸಾ ಸೌಲಭ್ಯವನ್ನು ಒದಗಿಸಿದೆ. ಅದರಿಂದಾಗಿ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳಿಂದ ಬರುವ ರೋಗಿಗಳಿಗೆ ಅತ್ಯಾಧುನಿಕ ಚಿಕಿತ್ಸೆ ನೀಡಬಹುದಾಗಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಈ ಚಿಕಿತ್ಸೆಗೆ 60ರಿಂದ 70,000 ರೂ. ವೆಚ್ಚವಾಗಲಿದೆ. ಆದರೆ, ಕೆ.ಅರ್.ಆಸ್ಪತ್ರೆಯಲ್ಲಿ ಬಿಪಿಎಲ್ ಕಾರ್ಡುದಾರರಿಗೆ, ಎಸ್‌ಸಿ, ಎಸ್‌ಟಿ ವರ್ಗಕ್ಕೆ ಸೇರಿದವರಿಗೆ ಸಂಪೂರ್ಣ ಉಚಿತವಾಗಿದ್ದು, ಇತರರಿಗೆ ವೆಚ್ಚದ ಶೇ.30ರಷ್ಟನ್ನು ಸರ್ಕಾರ ಭರಿಸಲಿದೆ.

ಮೈಸೂರಿನ ಘಟಕದಲ್ಲಿ 2018 ರಿಂದೀಚೆಗೆ 46,953 ಹೊರ ರೋಗಿಗಳು, 4,426 ಒಳ ರೋಗಿಗಳು ಚಿಕಿತ್ಸೆ ಪಡೆದಿದ್ದು, 56,075 ಡಯಾಲಿಸಿಸ್, 3,700 ಶಸ್ತ್ರ ಚಿಕಿತ್ಸೆಗಳಾಗಿವೆ. ಶೀಘ್ರ ಮೈಸೂರಿನ ಕೆಅರ್‌ಎಸ್ ರಸ್ತೆಯಲ್ಲಿರುವ ಶ್ರೀ ಜಂಯದೇವ ಆಸ್ಪತ್ರೆ ಮತ್ತು ಸಂಶೋಧನಾ ಸಂಸ್ಥೆ ಹಿಂಭಾಗ ಸ್ವಂತ ಕಟ್ಟಡಕ್ಕೆ ನೆಫ್ರೋ ಯೂರಾಲಜಿ ಘಟಕವನ್ನು ಸ್ಥಳಾಂತರ ಮಾಡುತ್ತಿದ್ದು, ರೋಗಿಗಳು ಈ ಸೌಲಭ್ಯವನ್ನು ಬಳಸಿಕೊಳ್ಳುವಂತೆ ಸಂಸ್ಥೆಯ ಮೈಸೂರು ಶಾಖೆ ಮುಖ್ಯಸ್ಥ ಡಾ.ಜೆ.ಬಿ.ನರೇಂದ್ರ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಗೃಹಲಕ್ಷ್ಮಿ ನೋಂದಣಿ ಕೇಂದ್ರಕ್ಕೆ ಡಿಸಿ ಭೇಟಿ; ಪರಿಶೀಲನೆ

ಮೈಸೂರು,ಜು.20– ಸರ್ಕಾರ ಜಾರಿಗೊಳಿಸಿರುವ ಗೃಹಲಕ್ಷ್ಮಿ ಯೋಜನೆಯನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಅನುಷ್ಠಾನಕ್ಕೆ ತರುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಹಾನಗರ ಪಾಲಿಕೆ ವ್ಯಾಪ್ತಿಯ 6ನೇ ವಲಯ ಕಚೇರಿ ಸೇರಿದಂತೆ ನಗರದ ವಿವಿಧ ನೋಂದಣಿ ಕೇಂದ್ರಗಳಿಗೆ ಗುರುವಾರ ಭೇಟಿ ನೀಡಿ, ಅರ್ಜಿ ಸಲ್ಲಿಕೆ ಕುರಿತು ಪರಿಶೀಲನೆ ನಡೆಸಿದರು.

ವಲಯ ಕಚೇರಿ ಸೇರಿದಂತೆ ಸಿದ್ದಲಿಂಗಪುರದ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿದ ಜಿಲ್ಲಾಧಿಕಾರಿಗಳು, ಸಾರ್ವಜನಿಕರು ಸಹ ಯಾವುದೇ ಆಂತಕಕ್ಕೊಳಗಾಗಬಾರದು. ನೋಂದಣಿಗೆ ಯಾವುದೇ ಅಂತಿಮ ದಿನಾಂಕವಿರುವುದಿಲ್ಲ. ಯಾವುದೇ ದಿನಾಂಕದಂದು ಸಹ ನೋಂದಾಯಿಸಿಕೊಳ್ಳಬಹುದಾಗಿದೆ. ಈ ಯೋಜನೆಯಡಿ ನೋಂದಾಯಿಸಿಕೊಳ್ಳಲು ಪ್ರತಿ ಫಲಾನುಭವಿಗೆ ಸಮಯ ನಿಗದಿಪಡಿಸಲಾಗಿರುತ್ತದೆ. ನಿಗದಿತ ಸಮಯದಲ್ಲಿ ಫಲಾನುಭವಿಗಳು ಸೇವಾ ಕೇಂದ್ರಗಳಿಗೆ ಹೋಗಿ ಯಜಮಾನಿ ಪಡಿತರ ಚೀಟಿ ಸಂಖ್ಯೆ, ಆಧಾರ್ ಕಾರ್ಡ್ ಸಂಖ್ಯೆ ಮತ್ತು ಬ್ಯಾಂಕ್ ಖಾತೆಯ ಪಾಸ್ ಪುಸ್ತಕ ಹಾಗೂ ಯಜಮಾನಿ ಗಂಡನ ಆಧಾರ್ ಕಾರ್ಡ್ ದಾಖಲೆಗಳೊಂದಿಗೆ ಗೃಹಲಕ್ಷ್ಮಿ ಯೋಜನೆಯಡಿ ನೋಂದಾಯಿಸಿಕೊಳ್ಳಬೇಕು ಎಂದು ಹೇಳಿದರು.ಈ ಸಂದರ್ಭದಲ್ಲಿ ನಗರಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.





ಏಕ ಬಳಕೆ ಪ್ಲಾಸ್ಟಿಕ್ ನಿಷೇಧ

ಮೈಸೂರು,ಜು.20–ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಪರಿಸರಕ್ಕೆ ಹಾನಿ ಮತ್ತು ಮಾನವ ಮತ್ತಿತರ ಪ್ರಾಣಿಗಳ ಆರೋಗ್ಯಕ್ಕೆ ಅಪಾಯಕಾರಿಯಾಗಿರುವ ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್, ಬಿತ್ತಿಪತ್ರ, ತೋರಣ, ಬಾವುಟಗಳು, ತಟ್ಟೆ–ಲೋಟ, ಚಮಚಗಳು ಮತ್ತು ಊಟದ ಟೇಬಲ್‌ಗಳಲ್ಲಿ ಬಳಸುವ ಪ್ಲಾಸ್ಟಿಕ್ ಹಾಳೆಗಳು ಥರ್ಮಾಕೋಲ್‌ನಂತಹ ಏಕ ಬಳಕೆ ವಸ್ತುಗಳ ದಾಸ್ತಾನು, ವಿತರಣೆ ಹಾಗೂ ಬಳಕೆಯನ್ನು ನಿಷೇಧಿಸಲಾಗಿದೆ. ನಿಷೇಧಿತ ಪ್ಲಾಸ್ಟಿಕ್ ಸಾಮಗ್ರಿಗಳ ಅಕ್ರಮ ಮಾರಾಟ, ದಾಸ್ತಾನು ಸಂಗ್ರಹಣೆ ಹಾಗೂ ಬಳಕೆ ಕಂಡುಬಂದಲ್ಲಿ ಕಾನೂನಾತ್ಮಕವಾಗಿ ದಂಡ ವಿಧಿಸಲಾಗುವುದು. ಪದೇ–ಪದೆ ನಿಯಮ ಉಲ್ಲಂಘನೆ ಮಾಡಿದಲ್ಲಿ ಉದ್ದಿಮೆ ಪರವಾನಗಿ ರದ್ದುಗೊಳಿಸಲಾಗುವುದು ಮತ್ತು ಕಾನೂನಾತ್ಮಕವಾಗಿ ಕ್ರಮ ಕೈಗೊಳ್ಳುವುದಾಗಿ ರಮ್ಮನಹಳ್ಳಿ ಪಪಂ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನರೇಗಾ ಯೋಜನೆ ಬಗ್ಗೆ ಜನರಿಗೆ ಅರಿವು



ಮೈಸೂರು,ಜು.20–ನರೇಗಾ ಯೋಜನೆ ಸದುಪಯೋಗವನ್ನು ಫಲಾನುಭವಿಗಳು ಪಡೆದುಕೊಳ್ಳಬೇಕು ಎಂದು ಸಾಲಿಗ್ರಾಮ ಗ್ರಾಮ ಪಂಚಾಯಿತಿಯ ಪಿಡಿಓ ಮಂಜುನಾಥ್ ತಿಳಿಸಿದರು.

ಸಾಲಿಗ್ರಾಮ ಗ್ರಾಮ ಪಂಚಾಯಿತಿ ಆವರಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ರೋಜ್‌ಗಾರ್ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನರೇಗಾ ಕೂಲಿ ಕಾರ್ಮಿಕರಿಗೆ ಸಿಗುವ ಸೌಲಭ್ಯಗಳ ಕುರಿತು ಜನರಿಗೆ ಅರಿವು ಮೂಡಿಸಿ ಸಾರ್ವಜನಿಕರು ಕೆಲಸಕ್ಕೆ ಬರುವಂತೆ ಪ್ರೇರೇಪಿಸಿದರು.

ಗ್ರಾಮೀಣ ಜನರು ವಲಸೆ ಹೋಗುವುದನ್ನು ತಡೆಗಟ್ಟಲು ಹಾಗೂ ಗ್ರಾಮೀಣ ಭಾಗದಲ್ಲಿಯೇ ಜೀವನ ನಿರ್ವಹಣೆ ಮಾಡುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದ್ದು, ಆರ್ಥಿಕ ವರ್ಷದಲ್ಲಿ ಒಂದು ಕುಟುಂಬಕ್ಕೆ 100 ದಿನಗಳ ಕೆಲಸ ನೀಡುವ ಮೂಲಕ ತಮ್ಮ ಸ್ವಂತ ಗ್ರಾಮಗಳಲ್ಲಿ ಜನರಿಗೆ ಉದ್ಯೋಗ ಕಲ್ಪಿಸಲಾಗುತ್ತಿದೆ. ಸಾರ್ವಜನಿಕರು ಕೆಲಸಕ್ಕೆ ಹೋಗುವ ಮೂಲಕ ಯೋಜನೆಯ ಲಾಭ ಪಡೆದುಕೊಳ್ಳಬೇಕು ಎಂದು ಹೇಳಿದರು. ನರೇಗಾ ಯೋಜನೆಯಡಿ ದಿನಕ್ಕೆ 316 ರೂ. ಕೂಲಿ ಇದ್ದು, ಸಮಾನ ಕೂಲಿ ಸಮಾನ ವೇತನ, ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ನರೇಗಾ ಯೋಜನೆ ಕೂಲಿ ಕೆಲಸಕ್ಕೆ ಬರಲು ತಿಳಿಸಿದರು. ಕೂಲಿ ಕಾರ್ಮಿಕರು ಸ್ಥಳೀಯ ಗ್ರಾಮ ಪಂಚಾಯಿತಿಗೆ ನಮೂನೆ 06ರಲ್ಲಿ ಕೂಲಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ್ದಲ್ಲಿ ತಕ್ಷಣ ಕೂಲಿ ಕೆಲಸ ನೀಡಲಾಗುವುದು ಎಂದರು. ಕಾರ್ಯ ಕ್ರಮದಲ್ಲಿ ಗ್ರಾಮ ಪಂಚಾಯಿತಿ ಸಿಬ್ಬಂದಿ ಸೇರಿದಂತೆ ಇತರರು ಹಾಜರಿದ್ದರು.

ಜು.23ಕ್ಕೆ ಮಹಿಳೆಯರಿಂದ ಕುರುಕ್ಷೇತ್ರ ನಾಟಕ ಪ್ರದರ್ಶನ

ಮೈಸೂರು,ಜು.20–ನಂಜನಗೂಡು ತಾಲೂಕಿನ ಕುಲಗಣಂನ ಶ್ರೀ ಜಲವಾಸುದೇವ ನಾಟಕ ಸಭಾ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಗಮಕಿ ಎಸ್.ಆರ್. ಗೋವಿಂದರಾಜು ಅವರ 18ನೇ ವರ್ಷದ ಸ್ಮರಣಾರ್ಥ ಜು.23ರಂದು ಬೆಳಗ್ಗೆ 11 ಗಂಟೆಗೆ ಕಲಾಮಂದಿರದಲ್ಲಿ 'ಕುರುಕ್ಷೇತ್ರ' ಎಂಬ ಪೌರಾಣಿಕ ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಸ್ತ್ರೀಯರೇ ಎಲ್ಲಾ ಪಾತ್ರಗಳಲ್ಲಿ ಅಭಿನಯಿಸಲಿದ್ದಾರೆ. ಪ್ರದರ್ಶನಕ್ಕೆ ಮುನ್ನ ನಡೆಯುವ ಸಭಾ ಕಾರ್ಯಕ್ರಮವನ್ನು ಆದಮ್ಯ ಚೇತನ ಪ್ರತಿಷ್ಠಾನದ ತೇಜಸ್ವಿನಿ ಅನಂತ್‌ಕುಮಾರ್ ಉದ್ಘಾಟಿಸಲಿದ್ದಾರೆ. ವಂಗೀಪುರ ನಂಬೀಮಠದ ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಶಾಸಕ ಟಿ.ಎಸ್. ಶ್ರೀವತ್ಸ, ಸ್ತ್ರೀ ರೋಗ ತಜ್ಞೆ ಡಾ.ಪೂರ್ಣಿಮಾ ಮಧುಸೂದನ್, ಮೈಮುಲ್ ನಿರ್ದೇಶಕಿ ನೀಲಾಂಬಿಕೆ ಮಹೇಶ್, ಸಿಂಧುವಳ್ಳಿ ಗ್ರಾಪಂ ಸದಸ್ಯ ಕೆ.ಪಿ. ನಾಗು ಕೆಂಪಣ್ಣ, ಜಲವಾಸುದೇವ ನಾಟಕ ಸಭಾ ಟ್ರಸ್ಟ್ ಅಧ್ಯಕ್ಷ ಓಂ ಶ್ರೀನಿವಾಸ್ ಹಾಗೂ ಹಿನ್ನೆಲೆ ಗಾಯಕಿ ಅನನ್ಯಾ ಭಟ್ ಭಾಗವಹಿಸಲಿದ್ದಾರೆ ಎಂದು ಟ್ರಸ್ಟ್ ಕಾರ್ಯದರ್ಶಿ ರಮಣ ಹಾಗೂ ಸಹ ಕಾರ್ಯದರ್ಶಿ ಕೃಷ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಾಗ್ವಾರ್ ಕಾರು ಹರಿದು 9 ಜನರ ದುರ್ಮರಣ

ಅಹಮದಾಬಾದ್: ನಗರದ ಸರ್ಖೇಜ್–ಗಾಂಧಿನಗರ (ಎಸ್‌ಜಿ) ಹೆದ್ದಾರಿಯ ಇಸ್ಕಾನ್ ದೇವಸ್ಥಾನದ ಬಳಿಯ ಮೇಲ್ಸೇತುವೆಯಲ್ಲಿ ಗುರುವಾರ ಬೆಳಗ್ಗೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ 9 ಮಂದಿ ಮೃತಪಟ್ಟಿದ್ದಾರೆ.

ಐಷಾರಾಮಿ ಜಾಗ್ವಾರ್ ಕಾರು ಅತಿ ವೇಗವಾಗಿ ಮೇಲ್ಸೆತುವೆ ಮೇಲೆ ಹೋಗುತ್ತಿದ್ದ ಜನರ ಗುಂಪಿನ ಮೇಲೆ ಹರಿದಿದೆ. ಘಟನೆಯಲ್ಲಿ 9 ಮಂದಿ ಮೃತಪಟ್ಟಿದ್ದು, 13 ಮಂದಿ ಗಾಯಗೊಂಡಿದ್ದಾರೆ. ಮಧ್ಯಾಹ್ನ 1 ಗಂಟೆ ಸುಮಾರಿಗೆ ಈ ದುರ್ಘಟನೆ ಸಂಭವಿಸಿದೆ. ಜಾಗ್ವಾರ್ ಕಾರಿನ ಚಾಲಕ 19 ವರ್ಷದ ತತ್ಯಾ ಪಟೇಲ್ ಅನ್ನು ಜನರು ಹಿಡಿದು ಥಳಿಸಿದ್ದು, ಆತನನ್ನು ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದಾರೆ. ಘಟನೆಯಲ್ಲಿ ಮೃತಪಟ್ಟವರಿಗೆ ತಲಾ 4 ಲಕ್ಷ ರೂ., ಗಾಯಗೊಂಡವರಿಗೆ ತಲಾ 50 ಸಾವಿರ ಪರಿಹಾರ ಘೋಷಿಸಲಾಗಿದೆ.

ಬಾಳೆ ಕೃಷಿಯಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು ಕುರಿತು ತರಬೇತಿ



ಮೈಸೂರು, ಜು. 20– ಮೈಸೂರಿನ ಇಲವಾಲ ಸಮೀಪದ ಯಲಚಹಳ್ಳಿಯಲ್ಲಿರುವ ತೋಟಗಾರಿಕೆ ಮಹಾವಿದ್ಯಾಲಯದಲ್ಲಿ ಜು.26ರಂದು ಬೆಳಗ್ಗೆ 10.30 ಗಂಟೆಗೆ "ಬಾಳೆ ಕೃಷಿಯಲ್ಲಿ ಸುಧಾರಿತ ಉತ್ಪಾದನಾ ತಾಂತ್ರಿಕತೆಗಳು" ಕುರಿತು ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ನುರಿತ ವಿಜ್ಞಾನಿಗಳು ಹಾಗೂ ಅನುಭವಿ ಕೃಷಿಕರು, ಗುಣಮಟ್ಟದ ಉತ್ಪಾದನೆ, ಸಂಸ್ಕರಣೆ ಮತ್ತು ಮಾರಾಟದಲ್ಲಿ ಎದುರಿಸುವ ಹಲವಾರು ಸಮಸ್ಯೆ ಮತ್ತು ಅದರ ಪರಿಹಾರದ ಕುರಿತು ರೈತರಿಗೆ ಮಾಹಿತಿ ನೀಡಲಿದ್ದಾರೆ. ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಮತ್ತು ಇತರೆ ಜಿಲ್ಲೆಗಳಿಗೆ ಸೇರಿದ ಆಸಕ್ತ ರೈತರು ಕಾರ್ಯಕ್ರಮದಲ್ಲಿ ಭಾಗವಹಿಸಲು ಪೂರ್ವ ನೋಂದಣಿ ಮಾಡಿಸಬಹುದಾಗಿದೆ. ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ನೋಂದಣಿಗಾಗಿ 8147959226/9341997297 ಸಂಪರ್ಕಿಸಬಹುದು.

ವಿಧಾನಸಭೆಯಲ್ಲಿ ಬಹಳಷ್ಟು ರೌಡಿಗಳಿದ್ದಾರೆ; ಬಿಜೆಪಿ ಶಾಸಕರು ಅವರನ್ನು ಮೀರಿಸಿದ್ದಾರೆ

● ಕಾಂಗ್ರೆಸ್ ವಕ್ತಾರ ಲಕ್ಷ್ಮಣ್ ವ್ಯಂಗ್ಯ ● ಬಿಜೆಪಿಯ ಹತ್ತು ಶಾಸಕರನ್ನು ಶಾಶ್ವತವಾಗಿ ಅಮಾನತು ಮಾಡಿ ● ಜೆಡಿಎಸ್‌ನ 9 ಶಾಸಕರು ಕಾಂಗ್ರೆಸ್ ಸೇರಲು ತುದಿಗಾಲಲ್ಲಿ ನಿಂತಿದ್ದಾರೆ; ಈ ಪಕ್ಷ ಮೂರು ಹೋಳಾಗುತ್ತೆ

ಮೈಸೂರು, ಜು.20(ಬಿಎಲ್‌ಯು)– ವಿಧಾನಸಭೆಯಲ್ಲಿ ನಿನ್ನೆ ಕೋಲಾಹಲ ಎಬ್ಬಿಸಿ ದಲಿತ ಸಮುದಾಯದ ಡೆಪ್ಯುಟಿ ಸ್ಪೀಕರ್ ಅಮಾನಿಸಿದ ಬಿಜೆಪಿಯ ಹತ್ತು ಶಾಸಕರನ್ನು ಶಾಶ್ವತವಾಗಿ ಅಮಾನತು ಮಾಡುವಂತೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಆಗ್ರಹಿಸಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಧಾನಸಭೆಯಲ್ಲಿ ಬಹಳಷ್ಟು ರೌಡಿಗಳಿದ್ದಾರೆ. ಬಿಜೆಪಿ ಶಾಸಕರು ರೌಡಿಗಳನ್ನು ಮೀರಿಸುವಂತೆ ವರ್ತಿಸಿದ್ದಾರೆ. ಸದನದಲ್ಲಿ ಅಸಭ್ಯವಾಗಿ ವರ್ತಿಸಿರುವ ಬಿಜೆಪಿಯ ಹತ್ತು ಶಾಸಕರನ್ನು ಶಾಶ್ವತವಾಗಿ ಅಮಾನತು ಮಾಡಬೇಕೆಂದು ಸ್ಪೀಕರ್‌ಗೆ ಮನವಿ ಮಾಡಿದರು.

ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದು 50 ದಿನಗಳಾಗಿಲ್ಲ. ಆಗಲೇ ಬಿಜೆಪಿ ಹಾಗೂ ಜೆಡಿಎಸ್‌ನವರು ಸರ್ಕಾರದ ಮೇಲೆ ಮುಗಿಬೀಳುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳಿಗೆ ಜನರಿಂದ ಉತ್ತಮ ಸ್ಪಂದನೆ ದೊರೆಯುತ್ತಿರುವುದನ್ನು ನೋಡಿ ಹೊಟ್ಟೆ ಉರಿಗೆ ಹೀಗೆ ಮಾತನಾಡುತ್ತಿದ್ದಾರೆ. ಚುನಾವಣೆಯಾಗಿ ಎರಡು ತಿಂಗಳಾದರೂ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಇವರಿಗೆ ಆಗಿಲ್ಲ ಎಂದು ಲಕ್ಷ್ಮಣ್ ಬಿಜೆಪಿಯನ್ನು ಟೀಕಿಸಿದರು.

ಜೆಡಿಎಸ್ ಪಕ್ಷ ಇಷ್ಟರಲ್ಲೇ ಮೂರು ಹೋಳಾಗುತ್ತದೆ. ಹೆಚ್.ಡಿ.ಕುಮಾರಸ್ವಾಮಿ ಒಬ್ಬಂಟಿಯಾಗುತ್ತಾರೆ. ಇತ್ತ ಎನ್‌ಡಿಎನಲ್ಲೂ ಅವಕಾಶವಿಲ್ಲದೆ, ಅತ್ತ ಇಂಡಿಯಾದಲ್ಲೂ ಜಾಗವಿಲ್ಲದೆ ಅತಂತ್ರಾಗಿದ್ದಾರೆ. ಈ ಎಲ್ಲಾ ಬೆಳವಣಿಗೆಗಳ ಮಧ್ಯೆ ಜೆಡಿಎಸ್‌ನ 9 ಶಾಸಕರು ಕಾಂಗ್ರೆಸ್‌ಗೆ ಬರಲು ತುದಿಗಾಲಲ್ಲಿ ನಿಂತಿದ್ದಾರೆ. ಆದರೆ ನಮ್ಮಲ್ಲೇ 136 ಶಾಸಕರು ಇರುವ ಕಾರಣ ಅವರ ಪಕ್ಷ ಸೇರ್ಪಡೆಯನ್ನು ನಾವೇ ವಿಳಂಬ ಮಾಡುತ್ತಿದ್ದೇವೆ. ಆದರೂ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತ ಒಪ್ಪಿ ಅವರು ನಮ್ಮ ಪಕ್ಷಕ್ಕೆ ಬರುವುದಾದರೆ ಸ್ವಾಗತ ಎಂದರು.

ಬೆಂಗಳೂರಿನಲ್ಲಿ ನಡೆದ ಇಂಡಿಯಾ ಒಕ್ಕೂಟದ ಸಭೆಯಲ್ಲಿ 26 ಪಕ್ಷದ ನಾಯಕರು ಭಾಗವಹಿಸಿದ್ದರು. ಇವರಲ್ಲಿ ವಿವಿಧ ರಾಜ್ಯಗಳ 13 ಮುಖ್ಯಮಂತ್ರಿಗಳಿದ್ದರು. ಅದೇ ದಿನ ದೆಹಲಿಯಲ್ಲಿ ಬಿಜೆಪಿ ನೇತೃತ್ವದ 38 ಪಕ್ಷಗಳ ಎನ್‌ಡಿಎ ಸಭೆ ನಡೆದಿದೆ. ಇದರಲ್ಲಿ 27 ಪಕ್ಷಗಳಿಗೆ ಕನಿಷ್ಠ ಒಬ್ಬ ಶಾಸಕ ಹಾಗೂ ಸಂಸದನಿಲ್ಲ ಎಂದರು.

ಸಂಸದ ಪ್ರತಾಪ್ ಸಿಂಹ ತಮಗೆ ಸಂಬಂಧಪಡದ ರಾಜ್ಯ ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾರೆ. ಇನ್ನು ಹಲವು ಯೋಜನೆಗಳ ಡಿಪಿಆರ್ ಸಿದ್ಧವಾಗಿಲ್ಲ. ಆಗಲೇ ಅಧಿಕಾರಿಗಳ ಸಭೆ ನಡೆಸುತ್ತಿದ್ದಾರೆ. ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ದುಬಾರಿ ಟೋಲ್ ಶುಲ್ಕ ವಿಧಿಸಲಾಗಿದೆ. ಜೊತೆಗೆ ಅವೈಜ್ಞಾನಿಕ ರಸ್ತೆ ನಿರ್ಮಾಣದಲ್ಲಿ ಈ ತನಕ 450 ಅಪಘಾತಗಳಾಗಿದ್ದು, 187 ಜನರು ಸಾವನ್ನಪ್ಪಿದ್ದಾರೆ ಎಂದು ತಿಳಿಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಕಾರ್ಪೊರೇಟರ್ ಶಿವಣ್ಣ ಸೇರಿದಂತೆ ಹಲವರು ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರಿಗೆ 54ನೇ ವರ್ಧಂತಿ



ಆದಿಚುಂಚನಗಿರಿ ಮಹಾ ಸಂಸ್ಥಾನದ ಪೀಠಾಧ್ಯಕ್ಷರಾದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರ 54ನೇ ವರ್ಧಂತಿ ಪ್ರಯುಕ್ತ ಅವರಿಗೆ ಗೌರವ ಸಲ್ಲಿಸಲಾಯಿತು. ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುಂದರ್‌ಕುಮಾರ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಹರೀಶ್‌ಕುಮಾರ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಗಿರೀಶ್ ಇದ್ದಾರೆ.


ನಾಳೆಯಿಂದ ಪಾರ್ಶ್ವಸಂಗೀತ ನಾಟಕ ಪ್ರದರ್ಶನ



ಮೈಸೂರು,ಜು.20–ಮೈಸೂರಿನ ರಂಗವಲ್ಲಿ ತಂಡದಿಂದ ಜು.22ರ ಶನಿವಾರ ಹಾಗೂ ಭಾನುವಾರ ಸಂಜೆ 6.30 ಗಂಟೆಗೆ ಮೈಸೂರಿನ ಕಲಾಮಂದಿರ ಆವರಣದಲ್ಲಿನ ಕಿರುರಂಗಮಂದಿರದಲ್ಲಿ ಸಾಹಿತಿ ಶ್ರೀನಿವಾಸ ವೈದ್ಯ ಅವರ ಬರಹಗಳನ್ನಾಧರಿಸಿದ ಪಾರ್ಶ್ವಸಂಗೀತ ನಾಟಕದ ಪ್ರದರ್ಶನ ಏರ್ಪಡಿಸಿದೆ. ರಂಗಾಯಣದ ಹಿರಿಯ ಕಲಾವಿದ ಪ್ರಶಾಂತ್ ಹಿರೇಮಠ ನಿರ್ದೇಶಿಸಿದ್ದಾರೆ. ಯುವ ಸಾಹಿತಿ ಬಿ.ಪಿ.ಅರುಣ್ ರಂಗರೂಪ ಮಾಡಿರುವ ಈ ನಾಟಕದ ರಂಗವಿನ್ಯಾಸ–ಹೆಚ್.ಕೆ.ದ್ವಾರಕಾನಾಥ್, ಸಂಗೀತ ನಿರ್ವಹಣೆ–ವಿಶ್ವಾಸ್‌ಕೃಷ್ಣ ಬೆಳಕಿನ ವಿನ್ಯಾಸ–ಕೃಷ್ಣಕುಮಾರ್ ನಾರ್ಣಕಜೆ, ವಸ್ತ್ರವಿನ್ಯಾಸ–ನಂದಿನಿ ಕೆ.ಆರ್., ಪ್ರಚಾರ ವಿನ್ಯಾಸ–ರವಿಪ್ರಸಾದ್, ನೃತ್ಯಸಂಯೋಜನೆ–ಕಾರ್ತಿಕ್ ಉಪಮನ್ಯು, ಸಹನಿರ್ದೇಶನ–ಮಹೇಶ್‌ಕುಮಾರ್ ಅವರದ್ದು. ಹೆಚ್ಚಿನ ಮಾಹಿತಿಗಾಗಿ ಮೊ:9964656482/ 9448871815 ಸಂಪರ್ಕಿಸಬಹುದು.

ನಿಧನ

ಎಂ. ಮಹದೇವಪ್ಪ



ಮೈಸೂರು, ಜು. 20–ಕೆಪಿಟಿಸಿಎಲ್ ನಿವೃತ್ತ ಕಾರ್ಯನಿರ್ವಾಹಕ ಇಂಜಿನಿಯರ್ ಹಾಗೂ ದಟ್ಟಗಳ್ಳಿ ನಿವಾಸಿ ಎಂ.ಮಹದೇವಪ್ಪ (75) ಗುರುವಾರ ನಿಧನರಾದರು. ಅವರು ನಿವೃತ್ತ ರಾಜ್ಯ ಮಟ್ಟದ ಬ್ಯಾಸ್ಕೆಟ್‌ಬಾಲ್ ಆಟಗಾರರಾಗಿದ್ದರು. ಮೃತರು ಪತ್ನಿ ಬಿ.ಕೆ. ಮನೋರಮಾ, ಪುತ್ರರಾದ–ರಂಗಭೂಮಿ ಕಲಾವಿದ ಎ.ಪ್ರದೀಪ್ ಮತ್ತು ಎಂ.ದಿಲಿಪ್ (ಕೆನಡಾದಲ್ಲಿ ಇಂಜಿನಿಯರ್) ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಜಿ.ಕೊಪ್ಪಲಿನ ರುದ್ರಭೂಮಿಯಲ್ಲಿ ನಾಳೆ (ಜು.21) ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿ.ಮೀರಾದೇವಿ



ಮೈಸೂರು ಅರಮನೆ ಚಿತ್ರ ಕಲಾವಿದ ದಿವಂಗತ ರಾಮನರಸಯ್ಯ ಅವರ ಶಿಷ್ಯೆ ವಿ.ಮೀರಾದೇವಿ (59) ಮಂಗಳವಾರ ನಿಧನರಾದರು. ಮೃತರು ತಾಯಿ, ನಾಲ್ವರು ಸಹೋದರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ (ಜು.19) ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

21.7.2023 ಶುಕ್ರವಾರ, ಮಳೆ ನಕ್ಷತ್ರ: ಆಶ್ಲೇಷ 21.07.2023ರಿಂದ 03.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ,
ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 10.30ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಗೋಲ್ಡನ್ ಕ್ರೀಪರ್ ಎಂಟರ್‌ಪ್ರೈಸಸ್:** ವಿನೂತನ ಆಭರಣ ಪ್ರದರ್ಶನ ಮತ್ತು ಮಾರಾಟ ಮೇಳ 'ದಿ ಜ್ಯುವೆಲರಿ ಶೋ', ಉದ್ಘಾಟನೆ: ಚಿತ್ರನಟಿ ನಿಶ್ವಿಕಾ ನಾಯ್ಡು, ಸ್ಥಳ: ರ‍್ಯಾಡಿಸನ್ ಬ್ಲೂ ಪ್ಲಾಜಾ, ಬೆಳಗ್ಗೆ 10ರಿಂದ.

■ **ಮೈಸೂರು ಯೂನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್:** ಅಮ್ಯೂಸ್ 2ಕೆ23, ಉದ್ಘಾಟನೆ: ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವರಾದ ಶ್ರೀಮತಿ ವಿ.ಆರ್.ಶೈಲಜಾ, ಗೌರವ ಅತಿಥಿಗಳು: ಮೈಸೂರು ವಿವಿ ಫ್ಯಾಕಲ್ಟಿ ಆಫ್ ಇಂಜಿನಿಯರಿಂಗ್ ಡೀನ್ ಪ್ರೊ.ಬಿ.ಶಂಕರ್, ಸ್ಥಳ: ಕೆ.ಎಸ್.ರಂಗಪ್ಪ ಸಭಾಂಗಣ, ಸ್ಕೂಲ್ ಆಫ್ ಪ್ಲಾನಿಂಗ್, ಮೈಸೂರು ವಿವಿ, ಬೆಳಗ್ಗೆ 10ಕ್ಕೆ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು:** ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಯ ಉದ್ಘಾಟನಾ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ. ಕೆ.ಎನ್. ಪಂಚಾಕ್ಷರ ಸ್ವಾಮಿ, ಉದ್ಘಾಟನೆ : ಜಯದೇವ ಹೃದ್ರೋಗ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ, ಮುಖ್ಯ ಅತಿಥಿಗಳು : ಲೇಖಕ ನಿತ್ಯಾನಂದ ವಿವೇಕವಂಶಿ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಶ್ರೀಮತಿ ನಾಗಮ್ಮ, ಕಾಲೇಜು ಪ್ರಾಂಶುಪಾಲರಾದ ಶ್ರೀಮತಿ ಎಂ.ಎಸ್. ವಿಜಯ, ಶೈಕ್ಷಣಿಕ ಅಧಿಕಾರಿ ಶ್ರೀಮತಿ ಮಂಗಳ ಮುದ್ದುಮಾದಪ್ಪ, ಸ್ಥಳ: ಜಗನ್ಮೋಹನ ಅರಮನೆ, ಬೆಳಗ್ಗೆ 10ಕ್ಕೆ.

■ **ಮೈಸೂರು ಹಿಮೋಫಿಲಿಯಾ ಸೊಸೈಟಿ:** ಹಿಮೋಫಿಲಿಯಾ ಚಿಕಿತ್ಸಾ ಶಿಬಿರ, ಸ್ಥಳ: ಮೈಸೂರು ಡಿಸ್ಟ್ರಿಕ್ಟ್ ಆಸ್ಪತ್ರೆ, ಕೆ.ಆರ್.ಎಸ್. ರಸ್ತೆ, ಬೆಳಗ್ಗೆ 9.30ರಿಂದ.

■ **ಸೆಂಟರ್ ಫಾರ್ ಇನ್‌ಕ್ಲೂಸಿವ್ ಗ್ರೋತ್ ಅಂಡ್ ಡೆವಲಪ್‌ಮೆಂಟ್ ರಿಸರ್ಚ್, ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್, ಬಾಸುದೇವ ಸೋಮಾನಿ ಕಾಲೇಜು:** ಆತ್ಮನಿರ್ಭರ ಭಾರತ: ಭಾರತದ ಆದಿವಾಸಿಗಳ ಜನಾಂಗೀಯ, ಪರಿಸರ ಮತ್ತು ಆರ್ಥಿಕ ಪರಿವರ್ತನೆ ಕುರಿತು ವಿಚಾರ ಸಂಕಿರಣ, ಉದ್ಘಾಟನೆ: ಕುವೆಂಪು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ, ಪ್ರಾಸ್ತಾವಿಕ ಭಾಷಣ: ಡೀಡ್ ನಿರ್ದೇಶಕ ಡಾ.ಎಸ್.ಶ್ರೀಕಾಂತ್, ಪುಸ್ತಕ ಬಿಡುಗಡೆ: ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಡಾ.ಎಂ.ಪುಟ್ಟಸ್ವಾಮಿ, ಅತಿಥಿಗಳು: ಕುಬೇರ್ ಪಿ.ಗೌಡ, ಶ್ರೀಮತಿ ಎಸ್. ಪ್ರಭಾ, ಪತ್ರಕರ್ತ ವೀರಭದ್ರಪ್ಪ ಬಿಸ್ಲಳ್ಳಿ, ಡಾ.ಟಿ.ರಮೇಶ್, ಡಾ.ಡಿ.ಸಿ.ನಂಜುಂಡ, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ.ಎಂ. ಮಹದೇವಸ್ವಾಮಿ, ಸ್ಥಳ: ಬಾಸುದೇವ ಸೋಮಾನಿ ಕಾಲೇಜು, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಶಾರದಾ ವಿಲಾಸ ಪದವಿಪೂರ್ವ ಕಾಲೇಜು:** ವಿದ್ಯಾರ್ಥಿ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಪುರಾತತ್ತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು, ಮುಖ್ಯ ಅತಿಥಿಗಳು: ಶಾರದಾ ವಿಲಾಸ ವಿದ್ಯಾಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಗೌರವ ಕಾರ್ಯದರ್ಶಿ ಎನ್. ಚಂದ್ರಶೇಖರ್, ಶೈಕ್ಷಣಿಕ ಸಲಹೆಗಾರ ಶ್ರೀನಿವಾಸ ರಾಘವಾಚಾರ್, ಅಧ್ಯಕ್ಷತೆ: ಕಾಲೇಜು ಪ್ರಾಂಶುಪಾಲ ಸಿ.ಕೆ. ಅಶೋಕ್‌ಕುಮಾರ್, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಬೆಳಗ್ಗೆ 10.30ಕ್ಕೆ.

■ **ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು, ಶ್ರೀ ಶರಣಜ್ಯೋತಿ ಪ್ರಸಾರಾಂಗ:** ಪ್ರತಿಭಾ ಪುರಸ್ಕಾರ, ಸ್ನೇಹ ಸಿಂಚನ, ಪುಸ್ತಕ ಬಿಡುಗಡೆ ಸಮಾರಂಭ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಚಾಮರಾಜನಗರ ವಿವಿ ಕುಲಪತಿ ಪ್ರೊ.ಎಂ.ಆರ್.ಗಂಗಾಧರ್, ಪ್ರತಿಭಾ ಪುರಸ್ಕಾರ ಪ್ರದಾನ: ಪಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕಿ ಎಂ.ಪಿ.ನಾಗಮ್ಮ, ಮುಖ್ಯ ಅತಿಥಿಗಳು: ಶೇಷಾದ್ರಿಪುರಂ ಪಪೂರ್ವ ಕಾಲೇಜು ಪ್ರಾಂಶುಪಾಲರಾದ ಕೆ.ಸೌಮ್ಯ, ಅಧ್ಯಕ್ಷತೆ:ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಉಪಸ್ಥಿತರು: ಎ.ಶಿವಲಿಂಗಪ್ಪ, ಶ್ರೀ ನಟರಾಜ ಮಹಿಳಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಎ.ಡಿ.ಸುನೀತಾ ರಾಣಿ, ಸ್ಥಳ: ಶ್ರೀ ನಟರಾಜ ಸಭಾ ಭವನ, ಬೆಳಗ್ಗೆ 10.30ಕ್ಕೆ

■ **ಆಶ್ರಯ ಪ್ರಗತಿ ಸಂಘಗಳ ಒಕ್ಕೂಟ, ನಯನ ಪ್ರದೇಶ ಮಟ್ಟದ ಸಂಘ :** ಕವಿ, ನಿರ್ದೇಶಕ ನಾಗರಾಜ್ ತಲಕಾಡು ಅವರ 47ನೇ ಹುಟ್ಟುಹಬ್ಬದ ಪ್ರಯುಕ್ತ ಮಂಟೇಸ್ವಾಮಿ ಕಾವ್ಯದ ತಾತ್ವಿಕತೆ ಕುರಿತು ವಿಚಾರ ಸಂಕಿರಣ, ವಿದ್ಯಾರ್ಥಿಗಳಿಗೆ ನೋಟ್ ಬುಕ್ ವಿತರಣಾ ಸಮಾರಂಭ, ಸಾನ್ನಿಧ್ಯ : ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ : ಯುವ ಮುಖಂಡ ಸುನೀಲ್ ಬೋಸ್, ಅಧ್ಯಕ್ಷತೆ : ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಉಪನ್ಯಾಸ : ಪ್ರಾಚಾರ್ಯ ಮಹೇಶ್ ಹರವೆ, ಮುಖ್ಯ ಅತಿಥಿಗಳು : ಚಲನಚಿತ್ರ ನಿರ್ಮಾಪಕ ಬಿ.ಕುಮಾರಸ್ವಾಮಿ, ಉಪಸ್ಥಿತರು : ಡಾ. ಮಹದೇವಸ್ವಾಮಿ ಡಿ. ವಜ್ರಿ, ವಕೀಲ ಹರೀಶ್‌ಗೌಡ, ಒಕ್ಕೂಟದ ಅಧ್ಯಕ್ಷೆ ಶ್ರೀಮತಿ ಚಂದ್ರಮ್ಮ, ಕವಿ ನಾಗರಾಜ್ ತಲಕಾಡು, ಸ್ಥಳ: ಶ್ರೀರಂಗ, ರಂಗಾಯಣ, ಮಧ್ಯಾಹ್ನ 3.30ಕ್ಕೆ.

■ **ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ:** ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ, ಸಾನ್ನಿಧ್ಯ : ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮೈಸೂರು ಶಾಖೆಯ ಮುಖ್ಯಸ್ಥರಾದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಸೊಸೈಟಿ ಅಧ್ಯಕ್ಷ ಮಹಾಲಿಂಗಂ, ಮುಖ್ಯ ಅತಿಥಿಗಳು : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಭಾಷಣಕಾರರು : ವಿಮರ್ಶಕ ಪ್ರೊ. ಮೈಸೂರು ಕೃಷ್ಣಮೂರ್ತಿ, ಸೊಸೈಟಿ ಉಪಾಧ್ಯಕ್ಷ ಗೋವಿಂದೇಗೌಡ, ಸ್ಥಳ: ರಿಯೋ ಮೆರಿಡಿಯನ್ ಸಭಾಂಗಣ, ಹೈವೇ ಸರ್ಕಲ್ ಹತ್ತಿರ, ಸಂಜೆ 5ಕ್ಕೆ

■ **ಶ್ರೀ ವ್ಯಾಸರಾಜ ಮಠ ಸೋಸಲೆ, ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಶ್ರಾವಣ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಜೆ 6ರಿಂದ 7ರವರೆಗೆ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಕೃಷ್ಣಾಚಾರ್ಯ ನಾಗಸಂಪಿಗೆ ಅವರಿಂದ ಸುಂದರಕಾಂಡ ಕುರಿತು ಪ್ರವಚನ, ಸ್ಥಳ: ಶ್ರೀ ಸೋಸಲೆ ವ್ಯಾಸರಾಜ ಮಠ.

■ **ಗಾನಭಾರತೀ:** ವಿದ್ವಾನ್ ದೀಪಕ್‌ಕುಮಾರ್ ಪುತ್ತೂರು ಮತ್ತು ಸಂಗಡಿಗರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಬೆಂಗಳೂರಿನ ಪಯಣ ಸಂಸ್ಥೆ :** ಲೈಂಗಿಕ ಅಲ್ಪಸಂಖ್ಯಾತರೇ ಅಭಿನಯಿಸುತ್ತಿರುವ 'ತಲ್ಕಿ' ನಾಟಕ ಪ್ರದರ್ಶನ, ನಿರ್ದೇಶನ :ಶ್ರೀಜಿತ್ ಸುಂದರಂ, ಕಲಾಮಂದಿರದ ಕಿರುರಂಗ ಮಂದಿರ, ಸಂಜೆ 6.30ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಇಂಜಿನಿಯರಿಂಗ್ ವಿದ್ಯಾವಿಕಾಸ, ಪ್ರಾಯೋಜಕರು– ವಿದ್ಯಾವಿಕಾಸ ಇಂಜಿನಿಯರಿಂಗ್ ಕಾಲೇಜ್, ಮೈಸೂರು, 6.40 ಪದ ಸಂಸ್ಕೃತಿ–ಟಿ.ಎಸ್. ಗೋಪಾಲ್, 7.15 ಬೆಂಗಳೂರಿನ ಹೊಸಮಟ್ ಆಸ್ಪತ್ರೆಯ ಚೀಫ್ ಆಪರೇಟಿಂಗ್ ಆಫೀಸರ್ ಡಾ. ಆರ್.ಸಂದೀಪ್ ಅವರೊಂದಿಗೆ ಸಂದರ್ಶನ–ಪ್ರಾಯೋಜಿತ ಕಾರ್ಯಕ್ರಮ, 9.05 ವಸುದೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 10.00 ಕದ್ರಿ ಗೋಪಾಲನಾಥ್– ಸ್ಯಾಕ್ಸೋಫೋನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಡಾ. ಸುಷ್ಮಾ ಆನಂದ್, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ. ರವೀಂದ್ರಕುಮಾರ್, 3.00ಕರ್ನಾಟಕ ಶಾಸ್ತ್ರೀಯ ಸಂಗೀತ–ಬಿ.ಕೆ. ಪದ್ಮನಾಭರಾಯರ ರಚನೆಗಳು, ನಿರ್ವಹಣೆ– ರಾಜಲಕ್ಷ್ಮಿ ಶ್ರೀಧರ್, 4.00 ಮಹಿಳಾರಂಗ–ಸಾಹಿತ್ಯ ಸಂಚಿಕೆ–ಲೇಖಕಿ ಲೀಲಾ ಸತ್ಯೇಂದ್ರ ಸ್ವಾಮಿ ಅವರೊಂದಿಗೆ ಮಾತುಕತೆ ಹಾಗೂ ಕವನ ವಾಚನ, ಬಿ. ನಾಗರತ್ನ ಅವರಿಂದ ಸಣ್ಣಕಥೆ "ಕೈ ಹಿಡಿದ ಕರುಣಾಳು", 4.30 ವೃತ್ತಿ ಮಾರ್ಗದರ್ಶನ–ಸಕ್ಕರೆ ತಂತ್ರಜ್ಞಾನ ವಿಷಯಗಳಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ಎಂ.ಪಿ. ಮನೋಹರ್ ಅವರೊಂದಿಗೆ ಮಾತುಕತೆ, 6.50ಕೃಷಿರಂಗ–ಕಿಸಾನ್‌ವಾಣಿ–ಕೋಳಿ ಸಾಕಾಣಿಕೆ ಕುರಿತು ಸಂವಾದದಲ್ಲಿ ಭಾಗವಹಿಸುವವರು ಬಿ.ಯೋಗೀಶ್ ಮತ್ತು ಎನ್.ಗಾನವಿ, ಪ್ರಸ್ತುತಿ–ಎನ್. ಕೇಶವಮೂರ್ತಿ, 8.00 ರಸಮಂಜರಿ–ವಿದ್ವಾನ್ ಹೇರಂಬ ಭಟ್ ಹಾಗೂ ಸಂಗಡಿಗ ರಿಂದ ಸಂಸ್ಕೃತ ಕಾರ್ಯಕ್ರಮ ವೈವಿಧ್ಯ, 9.30 ಗಾನ ಲಹರಿ–ಪ್ರಸ್ತುತಿ ಶ್ರೀಕಾಂತ ಕುಲಕರ್ಣಿ ಮತ್ತು ಮಾಯಾ ರಾಮನ್, 10.00 ವಾದ್ಯವೃಂದ, ನಿರ್ದೇಶನ–ಡಾ.ಆರ್.ಎನ್.ಶ್ರೀಲತಾ, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 21 ಶುಕ್ರವಾರ 2023

ಸಂಪುಟ: 44 | ಸಂಚಿಕೆ: 96 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಹತ್ತು ಮಂದಿ ಶಾಸಕರ ಅಮಾನತು ಖಂಡಿಸಿ

ಬಿಜೆಪಿ, ಜೆಡಿಎಸ್ ಸದಸ್ಯರಿಂದ ಕಲಾಪ ಬಹಿಷ್ಕಾರ

● ಏಕಪಕ್ಷೀಯವಾಗಿ ಬಜೆಟ್‌ಗೆ ಅನುಮೋದನೆ ● ಬಿಜೆಪಿ, ಜೆಡಿಎಸ್ ಸದಸ್ಯರಿಂದ ಗಾಂಧಿ ಪ್ರತಿಮೆ ಬಳಿ ಧರಣಿ ● ಸ್ಪೀಕರ್ ಯು.ಟಿ.ಖಾದರ್, ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಲಮಾಣಿ ರಾಜ್ಯಪಾಲರಿಗೆ ದೂರು; ಜೆಡಿಎಸ್, ಬಿಜೆಪಿ ಪರ ಮಾಜಿ ಸಿಎಂಗಳಾದ ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಪ್ರತಿದೂರು ● ಚಳಿಗಾಲದ ಅಧಿವೇಶನ ವೇಳೆಯು ಹೋರಾಟಕ್ಕೆ ಉಭಯ ಪಕ್ಷಗಳ ನಿರ್ಧಾರ

ಬೆಂಗಳೂರು,ಜು.20– ಹತ್ತು ಮಂದಿ ಶಾಸಕರ ಅಮಾನತು ಖಂಡಿಸಿ ಬಿಜೆಪಿ ಹಾಗೂ ಜೆಡಿಎಸ್ ಸದಸ್ಯರು ವಿಧಾನಮಂಡಲದ ಕಲಾಪವನ್ನು ಬಹಿಷ್ಕರಿಸಿದ್ದಾರೆ.

ಪ್ರತಿಪಕ್ಷಗಳ ಬಹಿಷ್ಕಾರದ ನಡುವೆಯೇ ಆಡಳಿತ ಪಕ್ಷ ಉಭಯ ಸದನಗಳಲ್ಲಿ ಮುಂಗಡ ಪತ್ರದ ಮೇಲೆ ಚರ್ಚೆ ನಡೆಸಿ ಏಕಪಕ್ಷೀಯವಾಗಿ ಅನುಮೋದನೆ ಪಡೆದಿದೆ.

ಕಳೆದ ಮೂರು–ನಾಲ್ಕು ದಶಕಗಳಿಂದೀಚೆಗೆ ಪ್ರತಿಪಕ್ಷಗಳ ಸದಸ್ಯರು ವಿಧಾನಮಂಡಲದ ಕಲಾಪ ಬಹಿಷ್ಕರಿಸಿ ಪ್ರತಿಭಟನೆ ನಡೆಸಿರುವುದು ಇದೇ ಮೊದಲಾಗಿದೆ. ಕಲಾಪ ಬಹಿಷ್ಕರಿಸಿರುವ ಸದಸ್ಯರ ಮನವೊಲಿಕೆ ಮತ್ತು ಮಾತುಕತೆಗೆ ಸರ್ಕಾರ ಉತ್ಸಾಹ ತೋರಲಿಲ್ಲ. ಸರ್ಕಾರದ ಧೋರಣೆಯನ್ನು ಪ್ರತಿಭಟಿಸಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಗಾಂಧಿ ಪ್ರತಿಮೆ ಬಳಿ ಇಂದೂ ಧರಣಿ ನಡೆಸಿ, ನಂತರ ರಾಜಭವನಕ್ಕೆ ಮೆರವಣಿಗೆಯಲ್ಲಿ ತೆರಳಿ ರಾಜ್ಯಪಾಲರಿಗೆ ದೂರು ನೀಡಿದರು. ● 9ನೇ ಪುಟಕ್ಕೆ





ಬೆಂಗಳೂರಲ್ಲಿ ಗುರುವಾರ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಗಾಂಧಿ ಪ್ರತಿಮೆ ಬಳಿ ಧರಣಿ ನಡೆಸಿ, ನಂತರ ರಾಜಭವನಕ್ಕೆ ಮೆರವಣಿಗೆಯಲ್ಲಿ ತೆರಳಿ ರಾಜ್ಯಪಾಲರಿಗೆ ದೂರು ನೀಡಿದರು.

ದೇಶದಲ್ಲೇ ನಮ್ಮ 'ಗ್ಯಾರಂಟಿ' ದಾಖಲೆ

● ಬಜೆಟ್ ಕುರಿತ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ತರ ● ಪ್ರತಿ ವರ್ಷ 52,068 ಕೋಟಿ ರೂ.ಗಳ ಮೀಸಲಿಟ್ಟು, 1.30 ಕೋಟಿ ಕುಟುಂಬಕ್ಕೆ ವಾರ್ಷಿಕವಾಗಿ ತಲಾ 48 ರಿಂದ 60 ಸಾವಿರ ಕಲ್ಪಿಸುವ ಗ್ಯಾರಂಟಿ ● ನಮ್ಮ ರೀತಿ ಗ್ಯಾರಂಟಿಗಳ ನೀಡಿದ ರಾಜ್ಯ ದೇಶದಲ್ಲಿ ಮತ್ತೊಂದಿಲ್ಲ: ಸಿಎಂ ಹೆಮ್ಮೆ

ಬೆಂಗಳೂರು, ಜು.20(ಕೆಎಂಶಿ)– ಆರ್ಥಿಕತೆಯ ಚಲನಶೀಲತೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಐದು ಗ್ಯಾರಂಟಿ ಯೋಜನೆಗಳ ಮೂಲಕ ಸಾರ್ವತ್ರಿಕ ಮೂಲ ಆದಾಯದ ಪರಿಕಲ್ಪನೆಯನ್ನು ಪರಿಚಯಿಸುತ್ತಿರುವ ಮೊದಲ ರಾಜ್ಯ ಕರ್ನಾಟಕವಾಗಿದೆ. ಇದು ಕರ್ನಾಟಕ ಮಾದರಿ ಅಭಿವೃದ್ಧಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಅವರು ವಿಧಾನಸಭೆಯಲ್ಲಿ 2023–24ನೇ ಸಾಲಿನ ಆಯವ್ಯಯ ಕುರಿತ ಚರ್ಚೆಗೆ ಉತ್ತರ ನೀಡಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಕಾರ್ಯಕ್ರಮಗಳ ಮೂಲಕ ದೇಶದಲ್ಲಿಯೇ ದೊಡ್ಡ ಮೊತ್ತ ನೀಡುತ್ತಿರುವ ಮೊದಲ ರಾಜ್ಯ ಕರ್ನಾಟಕ ಎಂದ ಅವರು, ವಿರೋಧ ಪಕ್ಷದವರು ಗ್ಯಾರಂಟಿ ಯೋಜನೆಗಳ ಜಾರಿ ಸಾಧ್ಯವಿಲ್ಲ ಎಂದರು. ಆದರೆ ಈಗಾಗಲೇ 3 ಯೋಜನೆಗಳು ಜಾರಿಯಾಗಿವೆ. ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಪ್ರಾರಂಭವಾಗಿದೆ. ಯುವ ನಿಧಿ ಯೋಜನೆ ಬಹುತೇಕ ಡಿಸೆಂಬರ್ ತಿಂಗಳಿನಿಂದ ಪ್ರಾರಂಭವಾಗುವ ನಿರೀಕ್ಷೆ ಇದೆ ಎಂದು ತಿಳಿಸಿದರು. ಈ ಎಲ್ಲ ಯೋಜನೆಗಳಿಗೆ ಆಯವ್ಯಯದಲ್ಲಿ ಅನುದಾನ ಹಂಚಿಕೆ ಮಾಡಲಾಗಿದೆ. ಅನುದಾನ ಕ್ರೋಢೀಕರಣವನ್ನೂ ಆಯವ್ಯಯದಲ್ಲಿ ವಿವರಿಸಲಾಗಿದೆ. ಈ ಕಾರ್ಯಕ್ರಮಗಳಿಗೆ ವಾರ್ಷಿಕ ಒಟ್ಟು 52, 068 ಕೋಟಿ ರೂ.ಗಳು ಅಗತ್ಯವಿದೆ. 1.30 ಕೋಟಿ ಕುಟುಂಬಗಳಿಗೆ ಈ ಗ್ಯಾರಂಟಿ ಯೋಜನೆಗಳ ಸೌಲಭ್ಯ ದೊರೆಯಲಿದೆ. ಪ್ರತಿ ಕುಟುಂಬಕ್ಕೆ ತಿಂಗಳಿಗೆ 4–5 ಸಾವಿರ ರೂ. ಅಂದರೆ ವಾರ್ಷಿಕ 48,000–60000 ರೂ. ದೊರಕುತ್ತಿದೆ. ದೇಶದ ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಗಾತ್ರದ ಮೊತ್ತವನ್ನು ಜಾತಿ, ಧರ್ಮ ನೋಡದೇ ನೀಡಿರುವ ಮೊದಲ ರಾಜ್ಯ ಕರ್ನಾಟಕ ಎಂದರು. ಈ ವರ್ಷ 35,410 ಕೋಟಿಗಳನ್ನು 5 ಗ್ಯಾರಂಟಿಗಳಿಗೆ ಮೀಸಲಿರಿಸಿದ್ದೇವೆ ಎಂದು ವಿವರಿಸಿದರು.



ಜನರು ಬೆಲೆ ಏರಿಕೆ, ಇಂಧನ ಬೆಲೆ ಏರಿಕೆ, ನಿರುದ್ಯೋಗ ಮೊದಲಾದ ಸಮಸ್ಯೆಗಳಿಂದ ತತ್ತರಿಸಿದ್ದು, ಅವರ ಬದುಕು ಸುಧಾರಿಸುವ ಉದ್ದೇಶದಿಂದ ಈ ಯೋಜನೆಗಳನ್ನು ಜಾರಿಗೆ ತರಲಾಗಿದೆ ಎಂದು ತಿಳಿಸಿದರು. ಡಾ: ಬಿ.ಆರ್.ಅಂಬೇಡ್ಕರ್ ಹೇಳಿದಂತೆ ಸಾಮಾಜಿಕ ಪ್ರಭುತ್ವಕ್ಕೆ ಹೆಚ್ಚು ಮಹತ್ವ ನೀಡಬೇಕು ಎಂಬ ಮಾತಿನಲ್ಲಿ ನಮಗೆ ನಂಬಿಕೆ ಇದೆ. ಹಾಗೂ ಇದಕ್ಕೆ ಬದ್ಧವಾಗಿದ್ದೇವೆ. ಬಜೆಟ್ ಸಿದ್ಧ ಮಾಡುವಾಗ ನಮ್ಮ ಕಣ್ಣಿಗೆ ಅಂಬೇಡ್ಕರ್, ಗಾಂಧಿ, ಬುದ್ಧ, ಕುವೆಂಪು, ನಾರಾಯಣ ಗುರು ಅವರ ಆಶಯಗಳು ಕಾಣುತ್ತವೆ. ಕಟ್ಟಕಡೆಯ ವ್ಯಕ್ತಿ ಸಂತುಷ್ಟವಾಗಬೇಕು. ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಭಾಗೀದಾರರಾಗಬೇಕು. ಅದರ ಫಲವನ್ನು ಎಲ್ಲರೂ ಸಮಾನರಾಗಿ ಹಂಚಿಕೊಳ್ಳಬೇಕು. ಇದನ್ನೇ ಕುವೆಂಪು ಸಮಬಾಳು, ಸಮಪಾಲು ಎಂದಿದ್ದು ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ನಾವು ಹಿಂದೆಯೂ ನುಡಿದಂತೆ ನಡೆದಿದ್ದೇವೆ. 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. ಕರ್ನಾಟಕ ರಾಜ್ಯ ನನ್ನ ಕಾಲದಲ್ಲಿ 1ಲಕ್ಷದ 16 ಸಾವಿರ ಕೋಟಿ ರೂ.ಗಳ ಸಾಲವಾಗಿದೆ. 2018 ಮಾರ್ಚ್ ಅಂತ್ಯಕ್ಕೆ 2,45,000 ಕೋಟಿ ಸಾಲ ಇತ್ತು. 2023ಕ್ಕೆ ಇದು 5,20,000 ಕೋಟಿ ರೂ.ಸಾಲವಿದೆ. ನಾವು ಬಡವರ ಪರವಾಗಿದ್ದೇವೆ. ಬೆಲೆ ಏರಿಕೆ ಹಾಗೂ ನಿರುದ್ಯೋಗದಿಂದ ತತ್ತರಿಸಿರುವ ಜನರ ಜೇಬಿಗೆ ಹಣ ತುಂಬುವ ಕೆಲಸ ಮಾಡಿದ್ದೇವೆ. ಸಾರ್ವತ್ರಿಕ ಮೂಲ ಆದಾಯವನ್ನು ಎಲ್ಲಾ ಅಭಿವೃದ್ಧಿಯಾಗಿರುವ ರಾಜ್ಯಗಳು ಮಾಡುತ್ತಿವೆ. ಇದು ಕರ್ನಾಟಕ ಮಾದರಿ ಉದ್ಯೋಗ ಸೃಷ್ಟಿಯಾಗಲು ಆರ್ಥಿಕ ಚಟುವಟಿಕೆಗಳು ಅಗತ್ಯ. ಇಲ್ಲದಿದ್ದರೆ ಹೂಡಿಕೆಗಳು ಆಗುವುದಿಲ್ಲ ಎಂದರು. ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಿದೆ. 32 ಸಾವಿರ ಕೋಟಿ ರೂ.ಗಳು ಒಂದು ವರ್ಷಕ್ಕೆ ಖರ್ಚಾಗುತ್ತದೆ. ಒಂದು ಯೋಜನೆಗೆ ದೊಡ್ಡ ಮೊತ್ತವನ್ನು ವೆಚ್ಚ ಮಾಡುತ್ತಿರುವ ಮೊದಲ ರಾಜ್ಯ ಕರ್ನಾಟಕ. ಇದಕ್ಕಾಗಿ 17500 ಕೋಟಿ ಈ ವರ್ಷ ಮೀಸಲಿಟ್ಟಿದ್ದೇವೆ. ಅನ್ನಭಾಗ್ಯಕ್ಕೆ 10125 ಕೋಟಿ ರೂ. ● 9ನೇ ಪುಟಕ್ಕೆ

ದೇಶದ ಶ್ರೀಮಂತ ಶಾಸಕ ಡಿಕೆಶಿ

ಟಾಪ್–20ರಲ್ಲಿ 12 ಮಂದಿ ಕರ್ನಾಟಕದವರೇ



ಬೆಂಗಳೂರು, ಜು.20– ರಾಜ್ಯ ಕಾಂಗ್ರೆಸ್ ಸರ್ಕಾರದ ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ದೇಶದಲ್ಲೇ ಅತಿ ಶ್ರೀಮಂತ ಶಾಸಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಹಾಗೂ ನ್ಯಾಷನಲ್ ಎಲೆಕ್ಷನ್ ವಾಚ್(NEW) ಬಿಡುಗಡೆ ಮಾಡಿರುವ ವರದಿಯಲ್ಲಿ ಈ ಕುರಿತು ಉಲ್ಲೇಖಿಸಲಾಗಿದೆ. ದೇಶದ ಟಾಪ್ 20 ಶ್ರೀಮಂತ ಶಾಸಕರ ಪೈಕಿ ಕರ್ನಾಟಕದ ಒಟ್ಟು 12 ಮಂದಿ ಎಂಎಲ್‌ಎಗಳಿರುವುದು ಗಮನಾರ್ಹ ಸಂಗತಿಯಾಗಿದೆ. ಇದಲ್ಲದೆ ಸಿರಿವಂತ ಶಾಸಕರ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನವನ್ನು ಕರ್ನಾಟಕದ ಎಂಎಲ್‌ಎಗಳೇ ಅಲಂಕರಿಸಿರುವುದು ಮತ್ತೊಂದು ವೈಶಿಷ್ಟ್ಯವಾಗಿದೆ.

ಟಾಪ್ 20ರಲ್ಲಿ ಕರ್ನಾಟಕದ ಶಾಸಕರು: ಮೊದಲ ಸ್ಥಾನದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್(1,413 ಸಾವಿರ ಕೋಟಿ ರೂ.), ಎರಡನೇ ಸ್ಥಾನದಲ್ಲಿ ಗೌರಿಬಿದನೂರು ವಿಧಾನಸಭಾ ಕ್ಷೇತ್ರದ ಪಕ್ಷೇತರ ಶಾಸಕ ಪುಟ್ಟ ಸ್ವಾಮಿಗೌಡ (1,267 ಸಾವಿರ ಕೋಟಿ ರೂ.), ಮೂರನೇ ಸ್ಥಾನದಲ್ಲಿ ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಪ್ರಿಯಾಕೃಷ್ಣ (1,156 ಸಾವಿರ ಕೋಟಿ ರೂ.) ಇದ್ದಾರೆ.ಇನ್ನುಳಿದಂತೆ ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ ಶಾಸಕ ಬೈರತಿ ಸುರೇಶ್ (643 ಕೋಟಿ ರೂ.), ಶಾಂತಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎನ್.ಎ. ಹ್ಯಾರಿಸ್(439 ಕೋಟಿ ರೂ.), ಬೇಲೂರು ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಎಚ್.ಕೆ. ಸುರೇಶ್(435 ಕೋಟಿ ರೂ.), ಹಳಿಯಾಳ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಆರ್.ವಿ.ದೇಶಪಾಂಡೆ(363 ಕೋಟಿ ರೂ.), ಹನೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಶಾಸಕ ಎಂ.ಆರ್. ಮಂಜುನಾಥ್(316 ಕೋಟಿ ರೂ.), ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ (313 ಕೋಟಿ ರೂ.), ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಶ್ಯಾಮನೂರು ಶಿವಶಂಕರಪ್ಪ(312 ಕೋಟಿ ರೂ.), ● 6ನೇ ಪುಟಕ್ಕೆ

ಮಣಿಪುರದಲ್ಲಿ ಇಬ್ಬರು ಮಹಿಳೆಯರ ನಗ್ನಗೊಳಿಸಿ ಮೆರವಣಿಗೆ

ಮಣಿಪುರ, ಜು.20– ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಕ್ಯಾಮರಾ ಮುಂದೆ ನಗ್ನಗೊಳಿಸಿ, ಪರೇಡ್ ಮಾಡಿ ಕೊನೆಗೆ ಗ್ಯಾಂಗ್ ರೇಪ್ ಮಾಡಿರುವ ಘಟನೆ ನಡೆದಿದ್ದು, ಈ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

ಘಟನೆಯ ಬಗ್ಗೆ ವ್ಯಾಪಕ ಖಂಡನೆ, ಆಕ್ರೋಶ ವ್ಯಕ್ತವಾಗಿದ್ದು, ಈ ದುಷ್ಕೃತ್ಯ ಎಸಗಿದವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂಬ ಒತ್ತಡ ಹೆಚ್ಚಾಗಿದೆ. ಮೇ.04 ರಂದು ಈ ಘಟನೆ ಕಾಂಗ್ಪೋಕ್ಪಿ ಎಂಬಲ್ಲಿ ನಡೆದಿದೆ ಎಂದು ದೇಶೀಯ ಬುಡಕಟ್ಟು ನಾಯಕರ ವೇದಿಕೆ (ಐಟಿಎಲ್‌ಎಫ್) ಆರೋಪಿಸಿದೆ. ಪೊಲೀಸರ ಪ್ರಕಾರ ಕಾಂಗ್ಪೋಕ್ಪಿಯಲ್ಲಿ ಎಫ್‌ಐಆರ್ ದಾಖಲಾಗಿದೆಯಾದರೂ ಬೇರೆ ಜಿಲ್ಲೆಯಲ್ಲಿ ಈ ಘಟನೆ ನಡೆದಿದೆ.

ಆದ್ಯತೆಯನ್ನು ನೀಡಿ ಈ ಪ್ರಕರಣದ ತನಿಖೆಯನ್ನು ನಡೆಸಬೇಕು ಎಂದು ಪೊಲೀಸ್ ಅಧಿಕಾರಿಗಳಿಗೆ ಸಿಎಂ ಎನ್ ಬಿರೇನ್ ಸಿಂಗ್ ಆದೇಶ ನೀಡಿದ್ದಾರೆ.

ತಪ್ಪಿತಸ್ಥರ ಬಿಡುವುದಿಲ್ಲ: ಮೋದಿ ಆಕ್ರೋಶ



ನವದೆಹಲಿ, ಜು.20– ಮಣಿಪುರ ಹಿಂಸಾಚಾರದ ಬಗ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಪ್ರತಿಕ್ರಿಯೆ ನೀಡಿದ್ದು, ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಪರೇಡ್ ಮಾಡಿಸಿದ ಘಟನೆ 140 ಕೋಟಿ ಭಾರತೀಯರಿಗೆ ಮಾಡಿದ ಅವಮಾನ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಸಂಸತ್ತಿನ ಮುಂಗಾರು ಅಧಿವೇಶನ ಆರಂಭಕ್ಕೂ ಮುನ್ನ ಸಂಸತ್ ಭವನದ ಹೊರಗೆ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, ಈ ಪ್ರಕರಣದಲ್ಲಿ ಕಾನೂನು ತನ್ನದೇ ಆದ ಕ್ರಮ ಕೈಗೊಳ್ಳಲಿದ್ದು ತಪ್ಪಿತಸ್ಥರನ್ನು ಸುಮ್ಮನೆ ಬಿಡುವ ಪ್ರಶ್ನೆಯೇ ಇಲ್ಲ, ಕಠಿಣ ಶಿಕ್ಷೆಯಾಗಲಿದೆ ಎಂದಿದ್ದಾರೆ. 'ಈ ವಿಷಯ ಕೇಳಿ ನನ್ನ ಹೃದಯಕ್ಕೆ ತುಂಬಾ ನೋವಾಗಿದ್ದು, ● 6ನೇ ಪುಟಕ್ಕೆ

'ಶಕ್ತಿ'ಗೆ ವಿರೋಧ: ಜು.27ರಂದು ಬಂದ್‌ಗೆ ಕರೆ

ಆಟೋ, ಕ್ಯಾಬ್, ಖಾಸಗಿ ಬಸ್ ಸಂಚಾರ ಸ್ಥಗಿತ ಸಾಧ್ಯತೆ

ಬೆಂಗಳೂರು, ಜು.20– ರಾಜ್ಯದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಶಕ್ತಿ ಯೋಜನೆ ವಿರೋಧಿಸಿ ಜುಲೈ 27 ರಂದು ಬಂದ್‌ಗೆ ಕರೆ ನೀಡಲಾಗಿದ್ದು, ಆಟೋ, ಕ್ಯಾಬ್, ಖಾಸಗಿ ಬಸ್ ಸಂಚಾರ ಸ್ಥಗಿತಗೊಳ್ಳುವ ಸಾಧ್ಯತೆ ಇದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಜಾರಿಗೆ ತಂದಿರುವ ಶಕ್ತಿ ಯೋಜನೆಯಿಂದಾಗಿ ತಮ್ಮ ಆದಾಯಕ್ಕೆ ಕೊಡಲಿ ಪೆಟ್ಟು ಬಿದ್ದಿದ್ದು ಹೀಗಾಗಿ ಇದನ್ನು ವಿರೋಧಿಸಿ ಆಟೋ, ಕ್ಯಾಬ್, ಖಾಸಗಿ ಬಸ್ ಚಾಲಕರು ಜುಲೈ 27ರಂದು ಬಂದ್‌ಗೆ ಕರೆ ನೀಡಿದ್ದಾರೆ. ಆಟೋ, ಕ್ಯಾಬ್ ಹಾಗೂ ಖಾಸಗಿ ಬಸ್‌ಗಳ ಮಾಲೀಕರು ಹಾಗೂ ಚಾಲಕರು ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಮುಂದಾಗಿದ್ದು, ಇದರಿಂದಾಗಿ ಜು.26ರ ಮಧ್ಯರಾತ್ರಿ 12ರಿಂದ 27ರ ಮಧ್ಯರಾತ್ರಿಯವರೆಗೂ ರಾಜ್ಯಾದ್ಯಂತ ಆಟೋ, ಕ್ಯಾಬ್ ಹಾಗೂ ಖಾಸಗಿ ಬಸ್‌ಗಳು ಸಾರ್ವಜನಿಕರಿಗೆ ಲಭ್ಯವಿರುವುದಿಲ್ಲ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಖಾಸಗಿ ಬಸ್ ಮಾಲೀಕರ ಸಂಘದ ಎಸ್.ನಟರಾಜ್ ಶರ್ಮಾ, ಜುಲೈ 26ರ ಮಧ್ಯರಾತ್ರಿ 12ರಿಂದ 27ರ ಮಧ್ಯರಾತ್ರಿ 12ರವರೆಗೆ ಓಲಾ, ಉಬರ್, ಆಟೋ, ಕ್ಯಾಬ್ ಹಾಗೂ ಖಾಸಗಿ ಬಸ್ ಸಂಚಾರ ಇರುವುದಿಲ್ಲ ಎಂದು ತಿಳಿಸಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಆಟೋ,ಕ್ಯಾಬ್, ಟ್ಯಾಕ್ಸಿ, ಓಲಾ,ಉಬರ್ ಹಾಗೂ ಖಾಸಗಿ ಬಸ್ ಸೇರಿದಂತೆ ● 9ನೇ ಪುಟಕ್ಕೆ



ಬೆಂಗಳೂರಲ್ಲಿ ಬಂಧಿತ ಶಂಕಿತ ಉಗ್ರರಿಂದ 4 ಗ್ರೆನೇಡ್ ವಶಕ್ಕೆ

ಬೆಂಗಳೂರು, ಜು.20– ರಾಜಧಾನಿ ಬೆಂಗಳೂರಿನಲ್ಲಿ ಬಂಧಿತರಾಗಿರುವ ಶಂಕಿತ ಉಗ್ರರಿಂದ 4 ಗ್ರೆನೇಡ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ. ಬಂಧಿತ ಶಂಕಿತ ಭಯೋತ್ಪಾದಕನೊಬ್ಬನಿಂದ ನಾಲ್ಕು ಗ್ರೆನೇಡ್ ಅನ್ನು ಕೇಂದ್ರ ಅಪರಾಧ ವಿಭಾಗದ ಶೋಧಕರು ಪತ್ತೆ ಮಾಡಿದ್ದಾರೆ. ಜಾಹಿದ್ ತಬ್ರೇಜ್ (25) ಎಂಬ ಬಂಧಿತ ಶಂಕಿತ ಉಗ್ರ ತನ್ನ ಕೊಡಿಗೇಹಳ್ಳಿಯ ನಿವಾಸದಲ್ಲಿ ಈ ಗ್ರೆನೇಡ್‌ಗಳನ್ನು ಇಟ್ಟುಕೊಂಡಿದ್ದ. ತಲೆಮರೆಸಿಕೊಂಡಿರುವ ಮತ್ತು ವಿದೇಶದಲ್ಲಿ ನೆಲೆಸಿರುವ ಜುನೆದ್‌ನಿಂದ ಯಾರೋ ಒಬ್ಬರ ಮೂಲಕ ಅವುಗಳನ್ನು ಪಡೆದುಕೊಂಡಿದ್ದ ಎಂದು ಜಂಟಿ ಪೊಲೀಸ್ ಆಯುಕ್ತ (ಅಪರಾಧ) ಡಾ.ಶರಣಪ್ಪ ಸುದ್ದಿಗಾರರಿಗೆ ತಿಳಿಸಿದರು. ಆರೋಪಿಯು ತನ್ನ ಮನೆಯಲ್ಲಿ ಮರಳಿನ ಚೀಲದಲ್ಲಿ ಈ ಗ್ರೆನೇಡ್‌ಗಳನ್ನು ಅಡಗಿಸಿಟ್ಟಿದ್ದ. ಈ ಗ್ರೆನೇಡ್‌ಗಳು ಜೀವಂತವಾಗಿವೆಯೇ ಎಂಬುದನ್ನು ● 6ನೇ ಪುಟಕ್ಕೆ

ಬೆಂಗಳೂರಲ್ಲಿ ಶಂಕಿತ ಉಗ್ರರ ಸೆರೆ: ಮೈಸೂರಲ್ಲಿ ಕಟ್ಟೆಚ್ಚರ



● ಮುಂಜಾನೆ 4ರಿಂದ 6 ಗುಡ್ ಮಾರ್ನಿಂಗ್ ಬೀಟ್ ● ಬೆಳಗ್ಗೆ 6ರಿಂದ 9 ಸ್ಪೆಷಲ್ ವಿಜಿಲೆನ್ಸ್ ಬೀಟ್ ● ಎಲ್ಲಾ 9 ಚೆಕ್‌ಪೋಸ್ಟ್‌ಗಳಲ್ಲಿ ವಾಹನ ತಪಾಸಣೆ ● ಮೈಸೂರಿನ ಎಲ್ಲಾ ಠಾಣೆಗಳಲ್ಲಿ ಬಂದೋಬಸ್ತ್ ಟೀಂ ಸಜ್ಜು ● ಮಸೀದಿ, ಚರ್ಚ್, ದೇವಾಲಯ, ಸಾರ್ವಜನಿಕ ಸ್ಥಳಗಳಲ್ಲಿ ತೀವ್ರ ನಿಗಾ ● ನಗರದಾದ್ಯಂತ ಸಂಜೆ 4 ರಿಂದ ರಾತ್ರಿ 11 ಗಂಟೆವರೆಗೆ ಪೊಲೀಸರ ಗಸ್ತು ● ತುರ್ತು ಸಂದರ್ಭ ಹೊರತುಪಡಿಸಿ ಅನಗತ್ಯ ರಜೆಗಳಿಗೆ ಬ್ರೇಕ್ ● ಕೆಎಸ್‌ಆರ್‌ಪಿ, ಸಿಎಆರ್, ಚಾಮುಂಡಿ ಪಡೆ ಭದ್ರತೆಗೆ ಬಳಕೆ



ಮೈಸೂರು, ಜು.20(ಆರ್‌ಕೆ)– ರಾಜ್ಯ ರಾಜಧಾನಿ ಬೆಂಗಳೂರಲ್ಲಿ ಶಂಕಿತ ಉಗ್ರರನ್ನು ಬಂಧಿಸಿರುವ ಹಿನ್ನೆಲೆಯಲ್ಲಿ ಮುಂಜಾಗ್ರತೆಯಾಗಿ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಪೊಲೀಸರು ಇನ್ನಿಲ್ಲದ ಭಾರೀ ಕಟ್ಟೆಚ್ಚರ ವಹಿಸಿದ್ದಾರೆ.

ಬೆಂಗಳೂರು ನಗರ ಸಿಸಿಬಿ ಪೊಲೀಸರು ಐವರು ಶಂಕಿತ ಉಗ್ರರನ್ನು ಬಂಧಿಸಿದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆಯಾಗಿ ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ನಗರ ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಕಟ್ಟೆಚ್ಚರ ವಹಿಸುವಂತೆ ರಾಜ್ಯ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಆರ್.ಹಿತೇಂದ್ರ ಅವರು ವಿಡಿಯೋ ಕಾನ್ಫರೆನ್ಸ್ ಮೂಲಕ ಐಜಿಪಿ, ಪೊಲೀಸ್ ಆಯುಕ್ತರು ಹಾಗೂ ಎಸ್ಪಿಗಳಿಗೆ ನಿರ್ದೇಶನ ನೀಡಿದ್ದರು.

ಈ ಹಿನ್ನೆಲೆಯಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್ ಅವರು ಎಲ್ಲಾ ಅಧೀನಾಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿ, ನಗರ ಮತ್ತು ಜಿಲ್ಲೆಯಾದ್ಯಂತ ಭಾರೀ ಭದ್ರತಾ ವ್ಯವಸ್ಥೆ ಮಾಡುವಂತೆ ಸೂಚನೆ ನೀಡಿದ್ದರಿಂದ ಮುಂಜಾನೆ 4 ರಿಂದ 6ರವರೆಗೆ ಗುಡ್ ಮಾರ್ನಿಂಗ್ ಬೀಟ್, ಬೆಳಗ್ಗೆ 6ರಿಂದ 9 ಗಂಟೆವರೆಗೆ ಪೊಲೀಸ್ ಸ್ಪೆಷಲ್ ವಿಜಿಲೆನ್ಸ್ ಬೀಟ್, ಸಂಜೆ 4 ರಿಂದ ರಾತ್ರಿ 11 ಗಂಟೆವರೆಗೆ ವಾಹನ ತಪಾಸಣಾ ಕಾರ್ಯಾಚರಣೆ ಮಾಡಲಾಗುತ್ತಿದೆ.

ಮೈಸೂರು ನಗರದ ಪ್ರಮುಖ ರಸ್ತೆ, ಜಂಕ್ಷನ್, ಸರ್ಕಲ್‌ಗಳಲ್ಲಿ ವಾಹನಗಳನ್ನು ತಡೆದು ತಪಾಸಣೆ ಮಾಡಿ ಸ್ಫೋಟಕ ವಸ್ತು, ಮಾರಕಾಸ್ತ್ರ ಹಾಗೂ ಅಪಾಯಕಾರಿ ವಸ್ತು ಸಾಗಣೆ ಬಗ್ಗೆ ಪರಿಶೀಲಿಸಲಾಗುತ್ತಿದ್ದು, ಸಂಶಯಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಅಗತ್ಯ ಕಾನೂನು ಕ್ರಮ ವಹಿಸಲಾಗುವುದು ಎಂದು ಮೈಸೂರು ನಗರ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಎಲ್ಲಾ ದೇವಾಲಯ, ಚರ್ಚ್, ಮಸೀದಿ, ರೈಲು ನಿಲ್ದಾಣ, ಬಸ್ ಹಾಗೂ ವಿಮಾನ ನಿಲ್ದಾಣ, ಮಾರುಕಟ್ಟೆಗಳು, ಅರಮನೆ, ಚಾಮುಂಡಿಬೆಟ್ಟ, ಪ್ರಮುಖ ರಾಜ್ಯ ಮತ್ತು ಕೇಂದ್ರ ಸರ್ಕಾರಿ ಕಚೇರಿ ಕಟ್ಟಡಗಳು, ಪ್ರವಾಸಿ ಕೇಂದ್ರ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಕೆಎಸ್‌ಆರ್‌ಪಿ, ಸಿಎಆರ್ ಪೊಲೀಸ್ ಸಿಬ್ಬಂದಿಗಳನ್ನು ಭದ್ರತೆಗಾಗಿ ನಿಯೋಜಿಸಲಾಗಿದೆಯಲ್ಲದೆ, ಎಲ್ಲಾ ಲಾಡ್ಜ್, ವಸತಿ ನಿಲಯಗಳಲ್ಲಿ ವಾಸ್ತವ್ಯ ಹೂಡುವವರ ಮೇಲೆ ನಿಗಾ ಇರಿಸಲಾಗಿದೆ. ● 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹುಡುಗ : ಐ ಲವ್ ಯೂ!
ಹುಡುಗಿ : ನಾನು ನಿನ್ನ ಲವ್ ಮಾಡಲ್ಲ.
ಹುಡುಗ : ಇನ್ನೊಮ್ಮೆ ಯೋಚಿಸು?
ಹುಡುಗಿ : ಸಾಧ್ಯವಿಲ್ಲ.
ಹುಡುಗ : ವೇಟರ್ ಎರಡು ಸಪರೇಟ್ ಬಿಲ್ ಕೊಡಿ.
ಹುಡುಗಿ : ಐ ಲವ್ ಯೂ!!

ಮೈಸೂರು ಮಿತ್ರ

ಶುಕ್ರವಾರ, 21 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಯಶಸ್ಸಿನ ಮೂಲಭೂತ ತತ್ವವೇನೆಂದರೆ ಹಿಡಿದ ಕೆಲಸವನ್ನು ಬಿಡದೇ ಮಾಡುವುದು. –ವಾಲ್ಟೇರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಒರಗಿತ್ತಿ ಒಡವೆ ಹಾಕೊಂಡು ನೀರೊಳಗೆ ನೆರಳು ನೋಡಿದಳಂತೆ

ನಿಮ್ಮ ಪತ್ರಗಳು

ಟಾಂಗಾವಾಲಾಗಳಿಗೆ ರಾಜ್ಯ ಸರ್ಕಾರ ನೆರವಾಗಲಿ

ಮಾನ್ಯರೆ,

ಜು. 19ರ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಟಾಂಗಾವಾಲಾಗಳ ಶೋಚನೀಯ ಪರಿಸ್ಥಿತಿ ಬಗ್ಗೆ ಪ್ರಕಟವಾದ ಸಚಿತ್ರ ವರದಿ ಓದಿ, ಮನಸ್ಸಿಗೆ ಬೇಸರವಾಯಿತು. ಪಾರಂಪರಿಕ ನಗರ, ಅರಮನೆಗಳ ನಗರ, ಸಾಂಸ್ಕೃತಿಕ ನಗರ ಸೇರಿದಂತೆ ಇನ್ನೂ ಹಲವಾರು ವಿಶೇಷಣಗಳಿಂದ ಕರೆಯಲ್ಪಡುವ ಮೈಸೂರು ನಗರದಲ್ಲಿ ಟಾಂಗಾ ನಿಲ್ದಾಣಗಳಿಗೆ ಸರಿಯಾದ ವ್ಯವಸ್ಥೆ ಇಲ್ಲವಾಗಿದೆ.

ವರದಿಯ ಪ್ರಕಾರ, 25 ಸಾರೋಟ್ ಹಾಗೂ 150 ಟಾಂಗಾಗಳಿದ್ದರೂ ಸಹ, ಕೇವಲ 4 ಟಾಂಗಾ ನಿಲ್ದಾಣಗಳು ಅಸ್ತಿತ್ವದಲ್ಲಿದ್ದು, ಇವೂ ಸಹ ಅವ್ಯವಸ್ಥೆಯಿಂದ ಕೂಡಿವೆ. ಹಾಗೂ ಕುದುರೆಗಳಿಗೆ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಲಾಗಿಲ್ಲ ಎನ್ನಲಾಗಿದೆ. ಜೊತೆಗೆ ಬಹುತೇಕ ನಿಲ್ದಾಣಗಳಲ್ಲಿ ನೆಲಕ್ಕೆ ಹಾಕಿರುವ ಚಪ್ಪಡಿ ಕಲ್ಲುಗಳು ಮೇಲೆ ಎದ್ದಿವೆ. ಇದರಿಂದಾಗಿ ಬಹಳಷ್ಟು ಕುದುರೆಗಳು ಎಡವಿ ಕಾಲು ಮುರಿದುಕೊಂಡಿವೆ ಎಂದು ಹೇಳಲಾಗಿದೆ.

ಮೈಸೂರು ದಸರಾ ಎಷ್ಟು ಪ್ರಸಿದ್ಧವೋ, ಮೈಸೂರು ಟಾಂಗಾ ಕೂಡ ಅಷ್ಟೇ ಪ್ರಸಿದ್ಧಿ ಹೊಂದಿದೆ. ಎಷ್ಟರ ಮಟ್ಟಿಗೆ ಎಂದರೆ 1960ರ ದಶಕದಲ್ಲಿ "ಮೈಸೂರು ಟಾಂಗಾ" ಎಂಬ ಕನ್ನಡ ಚಲನ ಚಿತ್ರ ಕೂಡ ತಯಾರಾಗಿ ಬಿಡುಗಡೆಗೊಂಡಿದೆ. ಆಟೋರಿಕ್ಷಾಗಳು ರಸ್ತೆಗೆ ಬರುವುದಕ್ಕಿಂತ ಮುಂಚೆ ಟಾಂಗಾಗಳು ಹೆಚ್ಚಾಗಿ ನಗರದಾದ್ಯಂತ ಓಡಾಡುತ್ತಿದ್ದವು. ಆಗಿನ ಕಾಲದಲ್ಲಿ ಜನರಿಗೆ ಟಾಂಗಾ ಪ್ರಯಾಣ ಬದುಕಿನ ಅವಿಭಾಜ್ಯ ಅಂಗವಾಗಿತ್ತು. ಎಪ್ಪತ್ತರ ದಶಕದ ಅಂತ್ಯದಲ್ಲಿ ಟಾಂಗಾಗಳ ಜಾಗವನ್ನು ಆಟೋರಿಕ್ಷಾಗಳು ತುಂಬಿದರೂ ಸಹ, ಟಾಂಗಾಗಳು ತಮ್ಮ ಅಸ್ತಿತ್ವ ಕಳೆದುಕೊಳ್ಳಲಿಲ್ಲ. ಈಗಲೂ ಸಹ ನಗರದಲ್ಲಿ ಅತ್ಯಾಕರ್ಷಕ 25 ಸಾರೋಟ್‌ಗಳು ಹಾಗೂ 150 ಟಾಂಗಾಗಳಿದ್ದು, ಆಸಕ್ತ ಪ್ರಯಾಣಿಕರು ಈಗಲೂ ಸಹ ಟಾಂಗಾ ಸವಾರಿಯ ಸವಿಯನ್ನು ಸವಿಯುತ್ತಿದ್ದಾರೆ.

ಹಿರಿಯ ನಟ ದಿವಂಗತ ಅಶ್ವತ್ಥ ಟಾಂಗಾಗಳಲ್ಲೇ ಹೆಚ್ಚಾಗಿ ಪ್ರಯಾಣ ಮಾಡುತ್ತಿದ್ದರು. ಟಾಂಗಾಗಳಲ್ಲಿ ಕುಳಿತು ನಗರ ಪ್ರದಕ್ಷಿಣೆಯನ್ನು ಈಗಲೂ ಸಹ ಅದೆಷ್ಟೋ ಜನರು ಮಾಡುತ್ತಾರೆ. ದಸರಾ ಸಂದರ್ಭದಲ್ಲಂತೂ ಟಾಂಗಾಗಳಿಗೆ ವಿಶೇಷವಾದ ಬೇಡಿಕೆ ಇರುತ್ತದೆ. ಟಾಂಗಾ ಪ್ರಯಾಣ ಒಂದು ವಿಶಿಷ್ಟವಾದ ಅನುಭವವನ್ನು ನೀಡುತ್ತದೆ. ನಾನೂ ಸಹ ಕೆಲವು ಬಾರಿ ಟಾಂಗಾಗಳಲ್ಲಿ ಕುಳಿತು ಪ್ರಯಾಣ ಮಾಡಿದ್ದೇನೆ. ನಗರದ ಪಾರಂಪರಿಕ ಹೊಳಹುಗಳ ಪೈಕಿ ಮೈಸೂರು ಟಾಂಗಾ ಕೂಡ ಒಂದು. ಇಂತಹ ಅವಿಸ್ಮರಣೀಯ ಅನುಭವ ನೀಡುವ ಟಾಂಗಾಗಳ ಜೀವನಾಡಿಯಾಗಿರುವ ಕುದುರೆಗಳನ್ನು ಎಚ್ಚರದಿಂದ, ಮುತುವರ್ಜಿಯಿಂದ, ಆಸ್ಥೆಯಿಂದ ನೋಡಿಕೊಳ್ಳಬೇಕಾದ್ದು ಮಾಲೀಕರ ಕರ್ತವ್ಯ. ನೂತನ ರಾಜ್ಯ ಸರ್ಕಾರ ಟಾಂಗಾವಾಲಾಗಳಿಗೆ ಎಲ್ಲಾ ರೀತಿಯ ಸೌಕರ್ಯಗಳನ್ನು ಕಲ್ಪಿಸಿಕೊಡಲು ಮುಂದಾಗಬೇಕು. ತನ್ನ ಮೂಗಿನ ನೇರದಲ್ಲೇ ಕಂಡು ಬಂದಿರುವ ಅವ್ಯವಸ್ಥೆಯನ್ನು ಜಿಲ್ಲಾಡಳಿತ ತಕ್ಷಣ ಸರಿಪಡಿಸಬೇಕಾಗಿದೆ. ಟಾಂಗಾ ಮಾಲೀಕರು ಸಹ ಕುದುರೆಗಳಿಗೆ ಸರಿಯಾದ ಮೇವನ್ನು ಹಾಕಿ ಅವುಗಳನ್ನು ಆರೋಗ್ಯದಿಂದ ಇರುವಂತೆ ನೋಡಿಕೊಳ್ಳುವುದು. ದುರಾಸೆ ಪೀಡಿತರಾಗಿ ಮೂಕಪ್ರಾಣಿಗಳನ್ನು ಶೋಷಿಸಬಾರದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸೂಕ್ತ ಬಸ್ ಸೌಕರ್ಯ ಕಲ್ಪಿಸಿ

ಮಾನ್ಯರೆ,

ಮೈಸೂರು ಸಿಟಿ ವಿವೇಕಾನಂದ ನಗರದಿಂದ ಬೆಳಗ್ಗೆ 9 ಗಂಟೆಯಿಂದ 9.45ರ ನಡುವೆ ಬಸ್‌ಗಳ ಕೊರತೆ ಇದೆ. ಇದರಿಂದ ನಗರ ಬಸ್ ನಿಲ್ದಾಣಕ್ಕೆ ಹೋಗಿ ಅಲ್ಲಿಂದ ಇತರೆ ಗ್ರಾಮೀಣ ಪ್ರದೇಶಗಳಿಗೆ ಹೋಗುವ ನೌಕರರಿಗೆ, ಸಾರ್ವಜನಿಕರಿಗೆ ಸಹ ತೀವ್ರ ತೊಂದರೆಯಾಗುತ್ತಿದೆ. ಈ ಸಮಯದಲ್ಲಿ ನಗರ ಬಸ್ ನಿಲ್ದಾಣದಿಂದ ಬೆಮೆಲ್ ಕಡೆಗಳಿಗೆ ಬಸ್ಸುಗಳು ಹೆಚ್ಚು ಇರುತ್ತದೆ. ವಿವೇಕಾನಂದ ನಗರದಿಂದ ಇರುವುದಿಲ್ಲ. ಈ ಬಗ್ಗೆ ಸಾರಿಗೆ ಅಧಿಕಾರಿಗಳು ಗಮನಹರಿಸಿ ಬಸ್ಸುಗಳ ವ್ಯವಸ್ಥೆ ಕಲ್ಪಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ಸಿ.ಕೆ. ಮಂಜುನಾಥ್, ವಿವೇಕಾನಂದನಗರ, ಮೈಸೂರು.

ಗೊಬ್ಬಳಿಮರ ತಂಗುದಾಣ ದುರಸ್ತಿಗೊಳಿಸಿ

ಮಾನ್ಯರೆ,

ಮೈಸೂರಿನ ಜೆ.ಪಿ.ನಗರದ ಗೊಬ್ಬಳಿಮರ ತಂಗುದಾಣವು ಶಿಥಿಲಾವಸ್ಥೆಯಲ್ಲಿದೆ. ಮಳೆ ಬೀಳುತ್ತಿರುವುದರಿಂದ ತಂಗುದಾಣದ ಮೇಲ್ಛಾವಣಿಯ ಸಿಮೆಂಟ್ ಗಾರೆ ಸಡಿಲವಾಗಿ ಚೆಕ್ಕೆ ಕಿತ್ತು ಬರುತ್ತಿದೆ. ಮಳೆ ಬಂದಾಗ ತಂಗುದಾಣದಲ್ಲಿ ಮಳೆ ನೀರು ಸೋರುತ್ತದೆ. ಆದಕಾರಣ ಸಂಬಂಧಪಟ್ಟ ನಗರ ಪಾಲಿಕೆ ಅಧಿಕಾರಿಗಳು ಅನಾಹುತಗಳು ಸಂಭವಿಸುವ ಮುನ್ನ ಇತ್ತ ಗಮನಹರಿಸಿ ತಂಗುದಾಣವನ್ನು ತುರ್ತಾಗಿ ದುರಸ್ತಿಗೊಳಿಸಿ, ಬೆಳಕಿನ ಸೌಲಭ್ಯ ಕಲ್ಪಿಸಿಕೊಡಬೇಕಾಗಿ ಮನವಿ.

–ರಾಮಕೃಷ್ಣರಾವ್, ನಿವೃತ್ತ ಶಿಕ್ಷಕರು, ಜೆ.ಪಿ.ನಗರ, ಮೈಸೂರು.

ಅಧಿವೇಶನ ನಂತರವೇ ವಿಪಕ್ಷ ನಾಯಕನ ಆಯ್ಕೆ

ಮಾನ್ಯರೆ,

ಪ್ರಸ್ತುತ ವಿಧಾನಸಭಾ ಅಧಿವೇಶನ ಇನ್ನೇನು ಮುಗಿಯುತ್ತಾ ಬಂದರೂ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ವಿಧಾನಸಭೆಯಲ್ಲಿ ತನ್ನ ನಾಯಕನನ್ನು ಆಯ್ಕೆ ಮಾಡಿಕೊಳ್ಳಲು ಇನ್ನೂ ಸ್ವಲ್ಪ ದಿನ ಬೇಕಾಗುತ್ತದೆ. ಕಾರಣವೆಂದರೆ, ರೇಸ್‌ನಲ್ಲಿರುವ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಶಾಸಕರಾದ ಬಸವನಗೌಡ ಪಾಟೀಲ್ ಯತ್ನಾಳ್, ಆರ್. ಅಶೋಕ್ ಮತ್ತು ಮಾಜಿ ಗೃಹಸಚಿವ ವಿ.ಸುನಿಲ್ ಕುಮಾರ್. ಈ ನಾಲ್ವರಲ್ಲಿ ಒಬ್ಬರನ್ನು ವಿರೋಧ ಪಕ್ಷದ ನಾಯಕನಾಗಿ ಆಯ್ಕೆ ಮಾಡಲು ಹೈಕಮಾಂಡ್ ಗಮನಿಸುತ್ತಿರುವುದೆಂದರೆ, ಪ್ರಸಕ್ತ ಅಧಿವೇಶನದಲ್ಲಿ ಈ ನಾಲ್ವರಲ್ಲಿ ಯಾರು ಹೆಚ್ಚು ಸಮಯ ಮಾತನಾಡುತ್ತಾರೆ, ಯಾರು ಹೆಚ್ಚು ಪ್ರಶ್ನೆ ಕೇಳುತ್ತಾರೆ, ಯಾರು ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸುತ್ತಾರೆ, ಯಾರು ಕಾನೂನಿನ ಚೌಕಟ್ಟಿನಲ್ಲಿ ಮಂತ್ರಿಗಳಿಗೆ ಮುಖಭಂಗ ಮಾಡುತ್ತಾರೆ. ಮುಖ್ಯವಾಗಿ ಹಿಂದಿನ ನಮ್ಮ ಸರ್ಕಾರ ಮಾಡಿದ ತಪ್ಪುಗಳನ್ನು ಹೇಗೆ ಸಮರ್ಥಿಸಿಕೊಳ್ಳುತ್ತಾರೆ. ಆಡಳಿತ ಪಕ್ಷವನ್ನು ಹೆದರಿಸುವ ಧಮ್ಮು– ತಾಕತ್ತು ಯಾರಿಗಿದೆ. ಇವೆಲ್ಲಾವನ್ನು ಹೈಕಮಾಂಡ್ ಸೂಕ್ಷ್ಮವಾಗಿ ಗಮನಿಸುತ್ತಿರಬಹುದು. ಈ ಪ್ರಸಕ್ತ ಅಧಿವೇಶನವನ್ನು ಪರೀಕ್ಷಾ ಕೇಂದ್ರವನ್ನಾಗಿ ಮಾಡಿಕೊಂಡು, ಪರೀಕ್ಷೆಯಲ್ಲಿ ಯಾರು ಹೆಚ್ಚು ಅಂಕ ಪಡೆಯುತ್ತಾರೆ ಅವರನ್ನು ವಿರೋಧ ಪಕ್ಷದ ನಾಯಕನಾಗಿ ಮಾಡುತ್ತಾರೆ. ಹೀಗಾಗಿ ಈ ಅಧಿವೇಶನ ಮುಗಿದ ನಂತರವೇ ವಿರೋಧ ಪಕ್ಷದ ನಾಯಕ ಆಯ್ಕೆಯಾಗುವುದು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ,
ಮೈಸೂರು. ಮೊ: 9036389640

ಈ ಜೀವನ....

ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ...

ಅಯ್ಯೋ ಬಿಡಿ ನಾವಂದುಕೊಂಡ ಹಾಗೆ ಜೀವನ ನಡೆಯೊಲ್ಲ, ಅವರನ್ನು ನೋಡಿ ಅವರ ಬದುಕೆ ಚೆಂದ, ಕೈ ತುಂಬ ಹಣವಿದೆ, ಮನೆ, ಆಸ್ತಿ, ಅಧಿಕಾರ ಎಲ್ಲವೂ ಇದೆ. ಜೀವನ ಅಂದರೆ ಅವರದ್ದೇ, ನಮ್ಮದ್ದೆಲ್ಲಾ ಒಂದು ಜೀವನನಾ? ಬದುಕಿನಲ್ಲಿ ಆತ್ಮವಿಶ್ವಾಸವನ್ನು ಕಳೆದುಕೊಂಡ ಆತ್ಮೀಯರೊಬ್ಬರ ಮಾತುಗಳಿವು.ಅವರ ಪ್ರಕಾರ ಜೀವನ ಅಂದರೆ ಶ್ರೀಮಂತಿಕೆಯಿಂದ ಬದುಕುವುದು ಎಂಬುದು ಅವರ ಅಭಿಪ್ರಾಯವಾಗಿತ್ತು. ದುರಂತ ಅಂದರೆ ಅವರು ಹೇಳಿದ ಆ ವ್ಯಕ್ತಿಗೆ ಹಣವೇ ದೊಡ್ಡ ಶತ್ರುವಾಗಿತ್ತು. ನೆಮ್ಮದಿಯಿಂದ ತಿನ್ನಲಾರದೇ, ಇಷ್ಟಪಟ್ಟ ಸ್ಥಳಗಳಿಗೆ ಹೋಗಲಾರದೆ, ಕನಿಷ್ಠ ಪಕ್ಷ ನೆಮ್ಮದಿಯಿಂದ ನಿದ್ರೆ ಮಾಡದೆ ಪರಿತಪಿಸುತ್ತಿದ್ದ ವಾಸ್ತವದ ಅರಿವು ನನಗಿತ್ತು.



ಆತ್ಮೀಯರ ಮಾತುಗಳನ್ನೇ ಅವಲೋಕಿಸುತ್ತಾ ಜೀವನ ಅಂದರೆ ಏನು ಎಂಬ ಪ್ರಶ್ನೆ ಮೂಡಿತು. ಹುಟ್ಟುವುದು, ಬೆಳೆಯುವುದು, ಇತರರಿಗಿಂತ ತಾನು ಭಿನ್ನ ಎಂದು ತೋರಿಸಿಕೊಳ್ಳುವುದು, ಲಕ್ಷ ಹಣ ಖರ್ಚಾದರೂ ಪರವಾಗಿಲ್ಲ ಖಾಸಗಿ ಶಾಲೆ, ಕಾಲೇಜಿನಲ್ಲಿ ಓದುವುದು, ಒಳ್ಳೆಯ ಅಂಕಗಳನ್ನು ಪಡೆಯುವುದು, ಸರ್ಕಾರಿ ಉದ್ಯೋಗಕ್ಕಾಗಿ ಪ್ರಯತ್ನಿಸಿ ಪ್ರಯತ್ನಿಸಿ ಕೊನೆಗೆ ಇರುವ ಕೆಲಸದಲ್ಲೇ ತೃಪ್ತಿ ಪಡುತ್ತಾ ಮದುವೆಯಾಗುವುದು, ಮಕ್ಕಳಾಗುವುದು ಆ ಮಕ್ಕಳಿಗೆ ಒಂದು ಸುಂದರ ಬದುಕನ್ನು ರೂಪಿಸಿಕೊಡಲು ತಮ್ಮ ಜೀವನವನ್ನು ಮುಡುಪಾಗಿಡುವುದು – ಇಷ್ಟೇನಾ ಜೀವನ ಅಂದರೆ? ಅಥವಾ ಇದೇ ಪ್ರಶ್ನೆಯನ್ನು ಪ್ರಸ್ತುತ ಯುವ ಸಮುದಾಯ ಮುಂದಿಟ್ಟರೆ ಅವರ ಪ್ರಕಾರ ಹೇಗಾದರೂ ಸರಿ ಸಾಮಾಜಿಕ ಜಾಲತಾಣದಲ್ಲಿ ಸಕ್ರಿಯವಾಗಿ ಇರೋದು, ಪರಿಚಯವೇ ಇಲ್ಲದವರನ್ನು ಪರಿಚಯಿಸಿಕೊಳ್ಳೋದು, ಹೆಚ್ಚು ಜನ ಹಿಂಬಾಲಕರನ್ನು ಪಡೆಯೋದು, ಸಕಾರಾತ್ಮಕನೋ ನಕಾರಾತ್ಮಕನೋ ಒಟ್ಟಿನಲ್ಲಿ ಎಲ್ಲರ ಮಧ್ಯೆನೂ ಗುರುತಿಸಿಕೊಳ್ಳುವುದು ಎಂದುತ್ತರ ಬರಬಹುದೇನೋ!!! ಹಾಗಾದರೆ ಜೀವನ ಅಂದರೆ ಇಷ್ಟೇನಾ? ಇಲ್ಲ ಇದರಿಂದಾಚೆಗೂ ಜೀವನವಿದೆ ಅದನ್ನ ಅರಿಯುವ ಪ್ರಯತ್ನ ಮಾಡಬೇಕಷ್ಟೇ.

ಬದುಕು ಎಂದರೇನು ಎಂಬ ಪ್ರಶ್ನೆಯನ್ನು ಕೇಳಿದವರಿಗೆ ಸಿಕ್ಕ ಉತ್ತರಗಳಿವು ಎಂದು ಎಲ್ಲೋ ಓದಿದ ನೆನಪು; ಗೌತಮ ಬುದ್ಧನ ಪ್ರಕಾರ ಜೀವನ ಎಂದರೆ **ಪ್ರೀತಿ ಮತ್ತು ಶಾಂತಿ,** ದುರ್ಯೋಧನ ಪ್ರಕಾರ ಜೀವನ ಎಂದರೆ **ಹಠ ಮತ್ತು ಛಲ,** ಏಕಲವ್ಯನ ಪ್ರಕಾರ **ಗುರಿ,** ಯುಧಿಷ್ಠಿರನ ಪ್ರಕಾರ **ಧರ್ಮ,** ಭೀಷ್ಮರ ಪ್ರಕಾರ **ಪ್ರತಿಜ್ಞೆ,** ಅಲೆಕ್ಸಾಂಡರ್‌ನ ಪ್ರಕಾರ **ವಿಜಯ,** ಒಬ್ಬ ಶ್ರೀಮಂತನ ಪ್ರಕಾರ **ಮೋಜು ಮತ್ತು ಮಸ್ತಿ,** ಮಧ್ಯಮ ವರ್ಗದವನ ಪ್ರಕಾರ **ಉದ್ಯೋಗ,** ಅದೇ ಹಸಿದವನ ಪ್ರಕಾರ **ಒಂದೊತ್ತಿನ ಅನ್ನ** .... ಹೀಗೆ ಬದುಕು ಒಬ್ಬೊಬ್ಬರಿಗೆ ಒಂದೊಂದು ಬಗೆಯಲ್ಲಿ ಅವರವರ ಚಿಂತನೆಗೆ ಅನುಗುಣವಾಗಿ ಗೋಚರವಾಗುತ್ತದೆ.

ಈಗ ಉದಾಹರಣೆಗೆ ನಾವು ಇಷ್ಟ ಪಟ್ಟ ಕೆಲಸ, ಕೈ ತುಂಬಾ ಸಂಬಳ, ಸ್ವಂತ ಮನೆ, ಇಷ್ಟಪಟ್ಟು ಮದುವೆಯಾದ ಹುಡುಗಿ, ಒಳ್ಳೆಯ ಮಗ–ಮಗಳು ಇವೆಲ್ಲವೂ ಸಿಕ್ಕಾಗ ಮಾತ್ರ ನಾವು ಖುಷಿಯಾಗಿ ಇರಬಲ್ಲೆವು ಅಂತ ಭಾವಿಸಿಕೊಂಡರೆ ಅದಕ್ಕಿಂತ ಹೆಚ್ಚಿನ ಮೂರ್ಖತನ ಮತ್ತೊಂದಿಲ್ಲ. ಲಕ್ಷ ಲಕ್ಷ ದುಡಿಯುವವರಿಗೆ ನೆಮ್ಮದಿಯಾಗಿ ಒಂದು ಹೊತ್ತು ಸರಿಯಾಗಿ ಮನ ತೃಪ್ತಿಯಿಂದ ತಿನ್ನುವ ಭಾಗ್ಯ ಇರುವುದಿಲ್ಲ.ಬಂಧು–ಬಳಗ, ಹುಟ್ಟಿ ಬೆಳೆದು ಬಾಳಿದ ಮನೆಯನ್ನು ಬಿಟ್ಟು ಎಲ್ಲೋ ದೂರದಲ್ಲಿ ಹೋಗಿ ನೆಮ್ಮದಿಯ ಬದುಕನ್ನು ಕಟ್ಟಿಕೊಳ್ಳಲು ಆಗುವುದಿಲ್ಲ, ಒಂದು ವೇಳೆ ಬದುಕು ಕಟ್ಟಿಕೊಂಡರೂ ನೆಮ್ಮದಿ ಸಿಗಲಾರದೆಂಬುದು ನನ್ನ ಭಾವನೆ. ಏಕೆಂದರೆ ಜೀವನದಲ್ಲಿ ಹಣ ಸಂಪಾದಿಸಬೇಕೆಂದು ಸಿಗದ ಮಾಯಾಜಿಂಕೆಯನ್ನು ಬೆನ್ನತ್ತುವ ನಮಗೆ ವಾಸ್ತವ ದರ್ಶನವಾದಾಗ ಬದುಕು ಸಿಗಲಾರದಂತಹ ಹಂತಕ್ಕೆ ತಲುಪಿರುತ್ತದೆ.

ಓಹ್ ಹಾಗಾದರೆ ನಿಮ್ಮ ಮಾತಿನ ಅರ್ಥ ನಾವು ಹೇಗೆ ಇರುವೆವೋ ಹಾಗೆಯೇ ಇರಬೇಕಾ. ಹೆಚ್ಚಿಗೆ ದುಡಿದು ಬದುಕುವುದುಬೇಡವೇ. ಅಪ್ಪ–ಅಮ್ಮನ ಆಶ್ರಯದಲ್ಲೇ ಇರಬೇಕಾ? ಸ್ವಂತ ಜೀವನ ಅನ್ನೋದನ್ನ ಕಟ್ಟಿಕೊಳ್ಳಬಾರದಾ ಎಂದೆಲ್ಲಾ ನಿಮ್ಮ ಮನದಲ್ಲಿ ಸಂದೇಹಗಳು ಬರುವುದು ಸಹಜ. ನನ್ನ ಮಾತಿನ ಭಾವ ಅದಲ್ಲ. ಒಂದು ಕ್ಷಣ ಲೆಕ್ಕಾಚಾರವನ್ನು ಬಿಟ್ಟು ಮನಸಿನ ಮಾತನ್ನೊಮ್ಮೆ ಆಲಿಸಿ ನೋಡಿ – ಅವಿಭಕ್ತ ಕುಟುಂಬದಲ್ಲಿ ಇದ್ದ ಸಂತೋಷ, ಚದುರಿ ಹೋಗಿ ವಿಭಕ್ತ ಕುಟುಂಬದಲ್ಲಿ ಮರೆಯಾಗಿ ಹೋಗಿಲ್ಲವೇ? ನಮ್ಮ ಹಳ್ಳಿಯಲ್ಲಿ, ನಮ್ಮವರೊಂದಿಗೆ ಕಷ್ಟ – ಸುಖಗಳನ್ನು ಹಂಚಿಕೊಳ್ಳುತ್ತಿದ್ದಾಗ ಸಿಗುತ್ತಿದ್ದ ಆತ್ಮೀಯತೆ ಇವತ್ತಿನ ಸಾಮಾಜಿಕ ಜಾಲತಾಣಗಳಿಂದ ಸಿಗುತ್ತಿರುವುದೇ. ಹಣ, ಗೌರವ, ಸಂಪಾದನೆ, ಹೆಸರು ಗಳಿಸಿಕೊಂಡರೆ ಮಾತ್ರ ಜೀವನ ಸಾರ್ಥಕವೇ. ಸರ್ಕಾರಿ ಕೆಲಸ ಪಡೆದರೆ ಮಾತ್ರ ಬದುಕು ಸುಂದರವಾಗುವುದೇ. ಯೋಚಿಸಿ. 2020ರಲ್ಲಿ ದೇಶವ್ಯಾಪಿ ಹರಡಿದ **ಕೊರೊನಾ** ಕಾರಣದಿಂದ **ಲಾಕ್‌ಡೌನ್** ಆದ ಸಮಯದಲ್ಲಿ ನಮ್ಮನ್ನೆಲ್ಲಾ ಕೈ ಕಟ್ಟಿ ಕೂರುವಂತೆ ಮಾಡಿದ ಸಂದರ್ಭದಲ್ಲಿ ಆಡಂಬರವಿಲ್ಲದ, ಇತರೆ ಕಾಯಿಲೆಗಳಿಲ್ಲದ ನೆಮ್ಮದಿಯ ಬದುಕನ್ನು ಸ್ವಲ್ಪ ದಿನಗಳ ಮಟ್ಟಿಗಾದರೂ ನಾವು ಕಂಡಿರಲಿಲ್ಲವೇ (ಕೋವಿಡ್‌ನಿಂದ ಕೆಲವರ ಬದುಕು ಮೂರಾಬಟ್ಟೆಯಾಗಿದೆ ಅದು ಬೇರೆ ಮಾತು) ಎಲ್ಲವೂ ಕೂಡ ಸಾಧ್ಯ. ಜೀವನ ಎಂದರೆ ಸಮಸ್ಯೆ ಎಂದೇನು ಅಲ್ಲ. ಸಮಸ್ಯೆಗಳು ಬರುವುದೇ ನಮ್ಮನ್ನು ಗಟ್ಟಿಗೊಳಿಸಲು. ಮದುವೆಯಾದವನಿಗೆ ಸಂಸಾರ ನಡೆಸುವ ಚಿಂತೆಯಾದರೆ, ಬ್ರಹ್ಮಚಾರಿಗಳಿಗೆ ಮದುವೆಯೇ ಒಂದು ದೊಡ್ಡ ಚಿಂತೆ.

ನನ್ನ ಪ್ರಕಾರ ಜೀವನ ಅಂದರೆ ಅದು ಹೇಗೆ ಬರುತ್ತದೋ ಹಾಗೆ ಅದರೊಂದಿಗೆ ಸಾಗುವುದು. ಅದರರ್ಥ ಇರುವುದರಲ್ಲೇ ಸಂತೋಷವನ್ನು ಪಡುತ್ತಾ ಪ್ರತಿ ಕ್ಷಣವನ್ನು ಆನಂದಿಸುವುದು. ಆಗ ಮಾತ್ರ ಬದುಕಿಗೊಂದು ಅರ್ಥ ಬರುತ್ತದೆ. ಇಲ್ಲದಿದ್ದರೆ ನಾಳೆ ಏನಾಗುತ್ತೋ, ಮದುವೆ ಆಗುತ್ತೋ ಇಲ್ವೋ. ಸರ್ಕಾರಿ ಕೆಲಸ ಸಿಗುತ್ತೋ ಇಲ್ವೋ. ಮಕ್ಕಳು ಸಾಕ್ತಾರೊ ಇಲ್ವೊ, ಚಿಕ್ಕ ವಯಸ್ಸಿಗೆ ನಿಧನರಾದರೆ ನಮ್ಮ ಮನೆಯವರ ಗತಿ ಏನೋ. ಹೀಗೆ ಪ್ರತಿ ಕ್ಷಣವೂ ಚಿಂತೆಯಲ್ಲಿ ಮುಳುಗಿ ಇಂದಿನ ನೆಮ್ಮದಿಯನ್ನು ಕಳೆದುಕೊಳ್ಳುವ ಅವಶ್ಯಕತೆ ಇಲ್ಲ. ಈ ದಿನವನ್ನೂ ಅನುಭವಿಸಿ, ಈ ಕ್ಷಣವನ್ನು ಆನಂದದಿಂದ ಕಳೆಯಿರಿ. ನಾಳೆ ಅನ್ನೋದು ನಮಗೆ ಗೊತ್ತಾಗಿ ಬಿಟ್ರೆ ಜೀವನ ಸ್ವಾರಸ್ಯಕರವಾಗಿರುವುದಿಲ್ಲ. ಈ ದಿನದ ಕ್ಷಣವನ್ನು ಆನಂದಿಸುತ್ತಾ ಸುಂದರ ಬದುಕನ್ನು ರೂಪಿಸಿಕೊಳ್ಳಲು ಪ್ರಯತ್ನಿಸುತ್ತಾ ಸಾಗೋಣ. ಒಂದೊಮ್ಮೆ ಹಾಗೆ ನಡೆಯದಿದ್ದರೆ ಅದರ ಬಗ್ಗೆ ಚಿಂತಿಸುತ್ತಾ ಕೊರಗುವುದನ್ನು ಬಿಟ್ಟು ವಾಸ್ತವತೆಯನ್ನು ಅರ್ಥಮಾಡಿಕೊಂಡು ಹೇಗೆ ಬರುತ್ತದೋ ಹಾಗೆ ಜೀವನವನ್ನು ಸ್ವೀಕರಿಸಿ ಬದುಕುವುದನ್ನು ಕಲಿತಾಗ ಜೀವನಕ್ಕೊಂದು ಅರ್ಥ ಬರಬಹುದು.ಆಗುವುದನ್ನು, ಆಗಿರುವುದನ್ನು, ಮುಂದಾಗುವುದನ್ನು ತಪ್ಪಿಸಲು ಸಾಧ್ಯವಿಲ್ಲ ಎಂದ ಮೇಲೆ ಅದರ ಬಗ್ಗೆ ಕೊರಗುವುದರಲ್ಲೂ ಅರ್ಥವಿಲ್ಲ. ಸತ್ತ ಮೇಲೆ ಮುಖ ನೋಡಲು ಓಡೋಡಿ ಧಾವಿಸಿ ಬರುವ ಸಂಬಂಧಿಕರು, ಸ್ನೇಹಿತರು, ಹಿತೈಷಿಗಳು ಬದುಕಿದ್ದಾಗಲೇ ತೊಂದರೆಯಲ್ಲಿದ್ದವರಿಗೆ ಕೈಲಾದ ಸಹಾಯವನ್ನು ಮಾಡಿದರೆ ಬದುಕು ಸುಂದರವಾಗುತ್ತದೆ. ಇದನ್ನೆಲ್ಲ ಹೇಳುವಾಗ ಡಿವಿಜಿ ಅವರ ಮಂಕುತಿಮ್ಮನ ಕಗ್ಗದ ಪದ್ಯವೊಂದು ನೆನಪಿಗೆ ಬರುತ್ತದೆ

ದಿವಸದಿಂದಿವಸಕ್ಕೆ, ನಿಮಿಷದಿಂ ನಿಮಿಷಕ್ಕೆ।
ಭವಿಷಿಯುವ ಚಿಂತಿಸದೆ ಬದುಕ ನೂಕುತಿರು ॥
ವಿವರಗಳ ಜೋಡಿಸುವ ಯಜಮಾನ ಬೇರಿಹನು।
ಸವೆಸು ನೀಂ ಜನುಮವನು –ಮಂಕುತಿಮ್ಮ॥

ಈ ಕಗ್ಗದಲ್ಲಿ ಡಿವಿಜಿ ಅವರು ಜನರಿಗೆ ಬುದ್ಧಿವಾದವನ್ನು ಹೇಳಿದ್ದಾರೆ. ದಿನದಿಂದ ದಿನಕ್ಕೆ ನಿಮಿಷದಿಂದ ನಿಮಿಷಕ್ಕೆ ಭವಿಷ್ಯವನ್ನು ಚಿಂತಿಸದೇ ಬದುಕುವುದನ್ನು ಕಲಿ. ನೀನು ಏನಾಗಬೇಕೆಂದು ವಿವರಗಳನ್ನು ಜೋಡಿಸುವ ಯಜಮಾನನೊಬ್ಬ ಇರುವನು ನೀನು ನಿನ್ನ ಜೀವನವನ್ನು ನಡೆಸು ಅಂದರೆ ನಮಗೆ ಕಷ್ಟಗಳು ತಪ್ಪಿದ್ದಲ್ಲ, ನಮ್ಮ ಜೀವನ ಯಾವಾಗ ಸರಿಯಾಗುತ್ತೋ ಎಂದು ಬದುಕಿನ ಸುಮಧುರ ಕ್ಷಣಗಳನ್ನು ಮರೆತು ಬಾಳುವ ಜನರಿಗೆ ಕಿವಿಮಾತು ಹೇಳಿದಂತಿದೆ ಈ ಕಗ್ಗ. ನಿನ್ನ ಜೀವನವನ್ನು ನೀನು ನಡೆಸು ಮುಂದೇನಾಗುತ್ತದೆ ಎಂದು ಚಿಂತಿಸಿ ಅದರ ಬಗ್ಗೆ ಪರಿತಪಿಸುವ ಅಗತ್ಯ ನಿನಗಿಲ್ಲ. ನಿನ್ನ ಭವಿಷ್ಯ ಚೆನ್ನಾಗಿರಬೇಕು ಎಂದಾದರೆ ಭವಿಷ್ಯದ ಬಗ್ಗೆ ಕನಸು ಕಾಣುವ ಬದಲು ಪ್ರಾಮಾಣಿಕತೆಯಿಂದ ವರ್ತಮಾನವನ್ನು ನಡೆಸು ನಿನಗೇನು ಸಿಗಬೇಕೋ ಅದು ಸಿಕ್ಕೇ ಸಿಗುತ್ತದೆ ಎಂದು ತಿಳಿಸುತ್ತದೆ. ನಿಜ ಅಲ್ವಾ, ಭವಿಷ್ಯದ ಬಗ್ಗೆ ಕನಸು ಕಾಣುತ್ತಾ ವರ್ತಮಾನದ ಕ್ಷಣಗಳನ್ನು ಮರೆತರೆ ಅದು ಎಷ್ಟು ಸರಿ. ನಮ್ಮ ಕಾಯಕಗಳನ್ನು ನಾವು ಮಾಡುತ್ತಾ ಸಾಗಿದರೆ ಉತ್ತಮ ಬದುಕು ನಮಗಾಗಿ ಕಾದಿರುತ್ತದೆ.

ಜೀವನ ಅಂದರೆ ಯಾವಾಗಲೂ ಹೋರಾಟವಿದ್ದ ಹಾಗೆ. ಅದನ್ನು ನಾವು ಎದುರಿಸಲೇಬೇಕು. ಮುಖ್ಯವಾಗಿ ನಮ್ಮ ಜೀವನವನ್ನು ಮತ್ತೊಬ್ಬರೊಂದಿಗೆ ಹೋಲಿಸಿಕೊಳ್ಳುವುದನ್ನು ಬಿಡಬೇಕು. ಇದು ನಮ್ಮ ಬದುಕು, ನಮ್ಮ ಶಕ್ತಿ ಎಂಬುದನ್ನು ಅರಿತು ನಡೆಯಬೇಕು. ಈ ಮಾತನ್ನು ಹೇಳುವಾಗ **ಕನ್ನಡದ ಕನಸುಗಾರ ವಿ.ರವಿಚಂದ್ರನ್** ಇತ್ತೀಚೆಗೆ ಸಂದರ್ಶನವೊಂದರಲ್ಲಿ ಹೇಳಿದ ಮಾತು ನೆನಪಿಗೆ ಬರುತ್ತದೆ.

"ನಾನು ಅವತ್ತೆ ನಾಲ್ಕು ಭಾಷೆಯಲ್ಲಿ ಸಿನಿಮಾ ಮಾಡಬೇಕು ಅಂತ ಹೊರಟವನು. ಇಡೀ ಚಿತ್ರೋದ್ಯಮ ನಮ್ಮ ಕನ್ನಡದತ್ತ ತಿರುಗಿ ನೋಡುವಂತೆ ಮಾಡಬೇಕು ಅಂತ ಹೊರಟೆ. ದಾರಿ ಹಾಕಿ ಕೊಟ್ಟೆ ಆದರೆ ಅವತ್ತು ನಾನು ಸೋತಿರಬಹುದು. ಆದರೆ ಇವತ್ತು ಅದು ನನಸಾಗಿದೆ. ನಾನು ಹಾಕಿಕೊಟ್ಟ ದಾರಿಯಲ್ಲಿ ನನಗಾದ ಅನುಭವವೇ ಇನ್ನೊಬ್ಬರಿಗೆ ಆಗಬೇಕೆಂಬ ನಿಯಮವಿಲ್ಲ. ಎಲ್ಲರ ಬದುಕು ಬೇರೆ. ಎಲ್ಲರಿಗೂ ಸಾಮರ್ಥ್ಯವಿದೆ. ಪ್ರಯತ್ನಪಡಬೇಕು. ಗೆದ್ರೆ ಮತ್ತಷ್ಟು ಎತ್ತರಕ್ಕೆ ಬೆಳೆಯುವ ಪ್ರಯತ್ನ ಮಾಡಬೇಕು. ಸೋತರೆ ಸೋಲಿಗೆ ಕಾರಣ ಹುಡುಕಿ ಮತ್ತೆ ಗೆಲ್ಲಲು ಪ್ರಯತ್ನಿಸಬೇಕು"

ಜೀವನ ಇರುವುದು ಅನುಭವಿಸುವುದಕ್ಕೆ ಹೊರತು, ಚಿಂತಿಸುವುದಕ್ಕಲ್ಲ, ಬದುಕು ಬಂದಂತೆ ಅದನ್ನು ಸ್ವೀಕರಿಸುತ್ತಾ ಹೋಗುವುದನ್ನು ಕಲಿಯಬೇಕು. ಅದನ್ನು ಬಿಟ್ಟು ಇಲ್ಲದ ಚಿಂತೆಗಳ ಹೊರೆಯನ್ನು ಹೊರಬೇಡ ಎಂಬುದನ್ನು ಮನದಟ್ಟಾಗುವಂತೆ ಡಿವಿಜಿ ಅವರು ತಮ್ಮ ಕಗ್ಗದಲ್ಲಿ ಹೇಳಿದ್ದಾರೆ.

ನನಗೆ ಇದರ ಬಗ್ಗೆ ಮಾತನಾಡುವಾಗ ಹಿಂದೆ ಎಲ್ಲೋ ಓದಿದ ಕಥೆಯೊಂದು ನೆನಪಿಗೆ ಬರುತ್ತದೆ. ಒಂದಾನೊಂದು ಊರಿನಲ್ಲಿ ಒಂದು ಪುಟ್ಟ ಸಂಸಾರ. ಗಂಡ–ಹೆಂಡತಿ ಇಬ್ಬರು ಇದ್ದರು. ಹೆಸರಿಗಷ್ಟೇ ಗಂಡ ಹೆಂಡತಿ ಆದರೆ ಇಬ್ಬರಲ್ಲೂ ಮಾತುಕತೆ ಅಷ್ಟಕ್ಕಷ್ಟೇ. ಆ ಹೆಂಡತಿಗೆ ಇವರಿಗೆ ಮಾತನಾಡಲು ಬರುವುದೇ ಇಲ್ಲವೇನೋ ಎಂಬ ಅನುಮಾನ. ಗಂಡನಿಗೆ ಮಾತಿನಿಂದ ಏನು ಆಗಬೇಕೆಂಬ ಉಡಾಫೆ. ಒಟ್ಟಿನಲ್ಲಿ ಈ ದಾಂಪತ್ಯ ಜೀವನ ಹತ್ತು ವರ್ಷ ಹೀಗೆಯೇ ಸಾಗಿತ್ತು. ಆ ಹೆಂಡತಿಗೆ ಒಂದು ದಿನ ಇದ್ದಕ್ಕಿದ್ದಂತೆ ಕೋಪ ಬಂದು ಗಂಡನ ಜೊತೆ ಜಗಳವಾಡಿದಳು ಗಂಡನದು ಮಾಮೂಲಿನಂತೆ ನೀರವ ಮೌನ. ಗಂಡನ ಮೌನ ಅವಳನ್ನು ಮತ್ತಷ್ಟು ಕೆರಳುವಂತೆ ಮಾಡಿತು. ಕೋಪದಲ್ಲಿ ಎಲ್ಲಾ ವಸ್ತುಗಳನ್ನು ಬಿಸಾಡಿದಳು. ಕೋಪ ಕರಗಿದ ಮೇಲೆ ಆ ವಸ್ತುಗಳನ್ನು ಎತ್ತಿಡುವಾಗ ಗಂಡನ ಡೈರಿಯೊಂದು ಸಿಕ್ಕಿತು. ಅದರ ಹಿಂದಿನ ಪುಟವನ್ನು ತೆಗೆದು ನೋಡಿದಳು. ಅಲ್ಲಿ ಸ್ವೀಟ್ ಹಾರ್ಟ್ ಎಂದು ಒಂದು ಲ್ಯಾಂಡ್ ಲೈನ್ ನಂಬರ್ ಬರೆದಿತ್ತು. ಅವಳಿಗೆ ಆಶ್ಚರ್ಯ ಈ ನಂಬರ್ ಇವರಿಗೆ ಯಾರು ಕೊಟ್ಟರು!? ಎಂದು. ಹೋಗಿ ಗಂಡನನ್ನು ಕೇಳಿದಳು. ಗಂಡ ಮತ್ತೆ ಮೌನವಾಗಿದ್ದ. ಪದೇ ಪದೇ ಪೀಡಿಸಿದಳು. ಕೊನೆಗೂ ಅವಳ ಕಾಟ ತಾಳಲಾರದೆ ಗಂಡ ಆ ನಂಬರ್ ತನಗೆ ಸಿಕ್ಕ ಕಥೆಯನ್ನು ಹೇಳಲು ತೊಡಗಿದ. ನಾನು ಒಂದು ದಿನ ನನ್ನ ಸ್ನೇಹಿತನಿಗೆ ತನ್ನ ಮನೆಯ ಲ್ಯಾಂಡ್‌ಲೈನ್ ಇಂದ ಕರೆ ಮಾಡಲು ಹೋಗಿ ಒಂದು ಸಂಖ್ಯೆ ತಪ್ಪಾಗಿ ಕರೆ ಮತ್ತೊಬ್ಬರಿಗೆ ಹೋಯಿತು. ಆ ಕರೆಯನ್ನು ಸ್ವೀಕರಿಸಿದ್ದು ಒಂದು ಹುಡುಗಿ. ಹುಡುಗಿಯ ಧ್ವನಿಯನ್ನು ಕೇಳಿ ಮೊದಲಿಗೆ ಗಾಬರಿಗೊಂಡವನಾದರೂ ಆ ಧ್ವನಿಯನ್ನು ಮತ್ತೆ ಮತ್ತೆ ಕೇಳಬೇಕೆಂಬ ಮನಸ್ಸಿನ ತುಡಿತದಿಂದ ಮತ್ತೆ ಕರೆ ಮಾಡಿ ತಪ್ಪು ಸಂಖ್ಯೆಯಿಂದ ಕರೆ ಮಾಡಿರುವುದಾಗಿ ತಿಳಿಸಿದ. ಮಾತುಕತೆ ಪ್ರಾರಂಭವಾಯಿತು, ಕೆಲವೇ ದಿನಗಳಲ್ಲಿ ಇಬ್ಬರೂ ಉತ್ತಮ ಸ್ನೇಹಿತರಾದರು. ಸ್ನೇಹದಿಂದ ಪ್ರೀತಿಗೆ ತಿರುಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಆದರೆ ಒಬ್ಬರಿಗೊಬ್ಬರು ಹೇಳಿಕೊಂಡಿರಲಿಲ್ಲ. ಇಬ್ಬರೂ ತಮಗಿಷ್ಟವಾದ ವಿಚಾರಗಳನ್ನು ಚರ್ಚೆ ಮಾಡುತ್ತಾ ಮಾತನಾಡುತ್ತಾ ಇದ್ದರೆ ಲೋಕವೊಂದು ಇದೆ ಎಂಬುದ್ದನ್ನೇ ಮರೆತಂತೆ ಮಾತಿನಲ್ಲಿ ಮಗ್ನರಾಗಿರುತ್ತಿದ್ದರು. ಮುಂದೆ ಹುಡುಗಿಯ ಮನೆಯಲ್ಲಿ ಯಾವುದೋ ಜಗಳದಲ್ಲಿ ಆ ಫೋನ್ ಬಲಿಯಾಗಬೇಕಾದ ಸಂದರ್ಭ ಉಂಟಾಯಿತು. ಅವರಿಬ್ಬರಿಗೂ ಇದ್ದ ಏಕೈಕ ಕೊಂಡಿ ಕಳಚಿತು. ಇತ್ತ ನನ್ನ ಮನೆಯ ಫೋನ್ ಕೂಡ ಡೆಡ್ ಆಗಿತ್ತು, ಜೊತೆಗೆ ನನಗೆ ಬೇರೆ ಊರಿನಲ್ಲಿ ಕೆಲಸ ದೊರೆಯಿತು. ನಾನು ಅಲ್ಲಿಂದ ಹೊರಟೆ. ಹೊರಡುವ ಮುಂಚೆ ಎಷ್ಟೋ ಬಾರಿ ಅವಳಿಗೆ ಕರೆ ಮಾಡಲು ಪ್ರಯತ್ನಿಸಿ ವಿಫಲನಾದೆ. ಹೀಗೆ ನಾವಿಬ್ಬರೂ ದೂರವಾದೆವು ಎಂದು ತನ್ನ ಕಥೆಯನ್ನು ಹೇಳಿ ಮುಗಿಸಿದ. ಅವನ ಕಥೆ ಹೇಳಿ ಮುಗಿಸಿದ ಕೂಡಲೇ ಹೆಂಡತಿ ಅಳುವುದಕ್ಕೆ ಪ್ರಾರಂಭಿಸಿದಳು. ಅದು ತನ್ನ ಮನೆಯ ನಂಬರ್ ಎಂದು, ಆ ಹುಡುಗಿ ತಾನೇ ಎಂದು ಹೇಳಿದಳು. ನೀವು ನನ್ನೊಂದಿಗೆ ಮದುವೆಯಾಗಿ ಮಾತನಾಡದೆ ಇರುವಾಗಲೆಲ್ಲ ನಾನು ಅವನನ್ನೇ ಮದುವೆಯಾಗಬೇಕಿತ್ತು ಎಂದು ಪರಿತಪಿಸುತ್ತಿದ್ದ ಸಂಗತಿಯನ್ನು ತಿಳಿಸಿದಳು. ತಮ್ಮ ಮೂರ್ಖತನವನ್ನು ನೆನೆದು ಇಬ್ಬರೂ ಮರುಗಿದರು.

ಹೀಗೆ ನಾವು ಕೂಡ ನಮ್ಮಲ್ಲಿಯೇ ಇರುವ ಗುಣವನ್ನು ಮರೆತು ಮತ್ತೊಬ್ಬರೊಂದಿಗೆ ನಮ್ಮನ್ನು ಹೋಲಿಕೆ ಮಾಡಿಕೊಂಡು ಅಯ್ಯೋ ಆ ಜೀವನ ನಮ್ಮದಾಗಲಿಲ್ಲವಲ್ಲ ಎಂಬಂತೆ ಕೊರಗುತ್ತಾ ಇರುತ್ತೇವೆ. ಇರುವುದರಲ್ಲಿಯೇ ಸಂತೋಷವನ್ನು ಪಡದೆ ಮತ್ತಾವುದರಲ್ಲೋ ಸಂತೋಷವನ್ನು ಹುಡುಕುವವರು ನಾವು. ಕಸ್ತೂರಿಮೃಗದ ಹಾಗೆ. ಕಸ್ತೂರಿ ಮೃಗ ಕಾಡಿನಲ್ಲಿ ಈ ಸುಮಧುರವಾದ ಪರಿಮಳ ಎಲ್ಲಿಂದ ಬರುತ್ತಿದೆ ಎಂದು ಇಡೀ ಕಾಡನ್ನೇ ಸುತ್ತಿ–ಸುತ್ತಿ ಬರುತ್ತಿದೆ. ಆ ಪರಿಮಳ ತನ್ನ ಮೈಯಿಂದಲೇ ಬರುತ್ತದೆ ಎಂಬ ಕಲ್ಪನೆಯೇ ಅದಕ್ಕೆ ಇರುವುದಿಲ್ಲ ಆದ್ದರಿಂದ ನಾವು ನಮ್ಮ ಜೀವನ ಹೇಗೆ ಇರುವುದೋ ಹಾಗೆ ಅದನ್ನು ಸ್ವೀಕರಿಸಿ ಬದುಕೋಣ. ನಮ್ಮಲ್ಲಿ ಇಲ್ಲದ, ಬೇರೆಯವರಲ್ಲಿ ಇರುವುದನ್ನು ನೋಡಿ ಅದರ ಬಗ್ಗೆ ಪರಿತಪಿಸುವ ಬದಲು ಪಾಲಿಗೆ ಬಂದದ್ದು ಪಂಚಾಮೃತ ಎಂಬಂತೆ ನಮ್ಮ ಜೀವನವನ್ನು ಅದು ಇರುವುದರ ಹಾಗೆ ಸ್ವೀಕರಿಸಿ ನಮ್ಮಿಂದ ಮಾಡಬಹುದಾದ ಕೆಲಸವನ್ನು ಮಾಡುತ್ತಾ ಈ ಸುಮಧುರ ಜೀವನವನ್ನು ಅನುಭವಿಸೋಣ. ನಮ್ಮ ಶಕ್ತಿಯನ್ನು ಅರಿತು ನಮ್ಮ ಜೀವನದಲ್ಲಿ ಯಶಸ್ಸು ಸಾಧಿಸೋಣ.

"ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೇ ಜೀವನ" ಎಂಬಂತಾಗದೆ ಇರುವುದರಲ್ಲೇ ಆನಂದವನ್ನು ಅನುಭವಿಸುತ್ತಾ ನಮ್ಮ ಬದುಕನ್ನು ಉತ್ತಮವಾಗಿ ಕಟ್ಟಿಕೊಳ್ಳೋಣ, ಆಗ ಮಾತ್ರ ಬದುಕಿಗೊಂದು ಅರ್ಥ ಬರಲು ಸಾಧ್ಯ.

ನಗರ ಬಸ್ ನಿಲ್ದಾಣದ ಬಳಿ ಸಯ್ಯಾಜಿರಾವ್ ರಸ್ತೆ ದಾಟಲು ವಿದ್ಯಾರ್ಥಿಗಳಿಗೆ ಪೊಲೀಸ್ ನೆರವು

ಓಡುವ ವಾಹನಗಳಿಗೆ ಕಡಿವಾಣ ಹಾಕಲು ಪೊಲೀಸ್ ಪೇದೆ ಹರಸಾಹಸ

ಮೈಸೂರು,ಜು.20(ಎಸ್‌ಬಿಡಿ)–ಮೈಸೂರು ನಗರ ಬಸ್ ನಿಲ್ದಾಣದ ಬಳಿ ಸಂಚಾರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ಇದರಿಂದ ವಾಹನ ದಟ್ಟಣೆ ನಡುವೆ ನುಸುಳಿ ರಸ್ತೆ ದಾಟುತ್ತಿದ್ದ ಪಾದಚಾರಿಗಳ ಆತಂಕ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ.

ಸಯ್ಯಾಜಿರಾವ್ ರಸ್ತೆ ಹಾಗೂ ಜಗನ್ಮೋಹನ ಅರಮನೆ ರಸ್ತೆ ಜಂಕ್ಷನ್‌ನಲ್ಲಿ ವಿದ್ಯಾರ್ಥಿಗಳು ಸೇರಿ ಸಾವಿರಾರು ಪಾದಚಾರಿಗಳು ನಿರಂತರವಾಗಿ ಸಂಚರಿಸುವ ವಾಹನಗಳ ನಡುವೆಯೇ ನುಸುಳಿ ರಸ್ತೆ ದಾಟುತ್ತಿದ್ದರು. ಈ ವೇಳೆ ಪಾದಚಾರಿಗಳು ಅಥವಾ ವಾಹನ ಚಾಲಕರು ಸ್ವಲ್ಪ ಎಚ್ಚರ ತಪ್ಪಿದರು ಅಪಘಾತ ಸಂಭವಿಸುವ ಸಾಧ್ಯತೆ ಇತ್ತು. ಇಲ್ಲಿನ ಅಪಾಯಕಾರಿ ಪರಿಸ್ಥಿತಿ ಬಗ್ಗೆ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಜು.19ರ ಸಂಚಿಕೆಯಲ್ಲಿ ಸಚಿತ್ರ ವರದಿ ಪ್ರಕಟವಾಗಿತ್ತು. ಇದಕ್ಕೆ ಪೊಲೀಸರು ತಕ್ಷಣ ಸ್ಪಂದಿಸಿದ್ದಾರೆ. ದೇವರಾಜ ಸಂಚಾರ ಠಾಣೆ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ವಿದ್ಯಾರ್ಥಿಗಳು ಶಾಲಾ–ಕಾಲೇಜಿಗೆ ಹೋಗಿ ಬರುವ ಸಮಯದಲ್ಲಿ ವಾಹನಗಳನ್ನು ಕೆಲಹೊತ್ತು ತಡೆದು, ರಸ್ತೆ ದಾಟಲು ಅನುವು ಮಾಡಿಕೊಡುತ್ತಿದ್ದಾರೆ.

ಸಾರ್ವಜನಿಕರು ಸಹಕರಿಸಬೇಕು: ಸುಗಮ ಸಂಚಾರ ಹಾಗೂ ಪಾದಚಾರಿಗಳು ನಿರಾತಂಕವಾಗಿ ರಸ್ತೆ ದಾಟಲು ಅನುಕೂಲವಾಗುವಂತೆ ನಿರ್ವಹಣೆ ಮಾಡಲು ಪೊಲೀಸ್ ಸಿಬ್ಬಂದಿ ಹರಸಾಹಸಪಡುತ್ತಾರೆ. ವಾಹನಗಳು ಹಾಗೂ ಪಾದಚಾರಿಗಳತ್ತ ನಿರಂತರವಾಗಿ ಗಮನಹರಿಸಿ, ಕ್ಷಣ ಕ್ಷಣಕ್ಕೂ ಸೀಟಿ ಊದುತ್ತಾ ರಸ್ತೆ ದಾಟುವವರಿಗೆ ನೆರವಾಗುತ್ತಾರೆ. ಆದರೆ ಕೆಲವರು ಪೊಲೀಸರ ಸೂಚನೆಯನ್ನೂ ಧಿಕ್ಕರಿಸಿ, ಯದ್ವಾತದ್ವಾ ರಸ್ತೆಗೆ ನುಗ್ಗಿ, ರಸ್ತೆ ದಾಟಲು ಯತ್ನಿಸುತ್ತಾರೆ. ಕೆಲವು ದ್ವಿಚಕ್ರ ವಾಹನ ಸವಾರರೂ ಹೀಗೆಯೇ ವರ್ತಿಸುತ್ತಾರೆ. ಇಂತಹವರನ್ನು ನಿಯಂತ್ರಿಸಲು ಪೊಲೀಸರು ಪ್ರಯಾಸಪಡುವಂತಾಗಿದೆ. ಪೊಲೀಸರ ಸೂಚನೆಯನ್ನು ಗಮನಿಸಿ, ಸುರಕ್ಷಿತವಾಗಿ ಸಂಚರಿಸುವ ಮೂಲಕ ಸಾರ್ವಜನಿಕರು ಸಹಕರಿಸಬೇಕಿದೆ.

ಮಾಸ್ಕ್ ಅಗತ್ಯ: ಪಾದಚಾರಿಗಳು ರಸ್ತೆ ದಾಟಲು ಪೊಲೀಸರು ಕೆಲಕಾಲ ವಾಹನಗಳನ್ನು ತಡೆಯುತ್ತಾರೆ. ನಂತರ ವಾಹನಗಳ ಸಂಚಾರಕ್ಕೆ ಸೂಚನೆ ನೀಡಿದಾಗ ಏಕಕಾಲಕ್ಕೆ ವಾಹನಗಳು ಹೊರಡುವುದರಿಂದ ಹೊಗೆ ಪ್ರಮಾಣ ಹೆಚ್ಚಾಗಿರುತ್ತದೆ. ತಾಸುಗಟ್ಟಲೆ ಇಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಯ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತದೆ. ಹಾಗಾಗಿ ಇಲ್ಲಿ ಕಾರ್ಯ ನಿರ್ವಹಿಸುವ ಸಿಬ್ಬಂದಿಗೆ ಮಾಲಿನ್ಯದಿಂದ ರಕ್ಷಿಸುವ ಮಾಸ್ಕ್ ಕಲ್ಪಿಸಿಕೊಡುವುದು ಅಗತ್ಯವಾಗಿದೆ.



ಶಾಶ್ವತ ಪರಿಹಾರ ಬೇಕು: ಬಹಳ ವರ್ಷಗಳ ಹಿಂದೆ ನಗರ ಬಸ್ ನಿಲ್ದಾಣ ಸ್ಥಳಾಂತರದ ಬಗ್ಗೆ ಪ್ರಸ್ತಾಪವಾಗಿತ್ತು. ಆದರೆ ನಗರದ ಹೃದಯ ಭಾಗದಲ್ಲಿರುವ, ಮಾರುಕಟ್ಟೆ, ಸಬರ್ಬನ್ ಬಸ್ ನಿಲ್ದಾಣ, ಶಾಲಾ–ಕಾಲೇಜುಗಳು, ಅರಮನೆ, ಮೃಗಾಲಯ, ವಾಣಿಜ್ಯ ಕೇಂದ್ರಗಳಿಗೆ ಹತ್ತಿರವಾಗುವ ಈ ಸ್ಥಳದಿಂದ ಬಸ್ ನಿಲ್ದಾಣ ಸ್ಥಳಾಂತರಿಸುವ ಕಾರ್ಯ ತಕ್ಷಣಕ್ಕೆ ಅಸಾಧ್ಯ. ಹಾಗಾಗಿ ಈ ಜಂಕ್ಷನ್‌ನಲ್ಲಿ ಪಾದಚಾರಿಗಳ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತ ಗಂಭೀರವಾಗಿ ಚಿಂತನೆ ನಡೆಸಬೇಕು. ನನೆಗುದಿಗೆ ಬಿದ್ದಿರುವ ಅಂಡರ್‌ಪಾಸ್ ಯೋಜನೆಯ ಅನುಷ್ಠಾನ ಇಲ್ಲವೇ ಸೂಕ್ತ ಪರಿಹಾರೋಪಾಯ ಮಾಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮುಂಗಾರು ಕೊರತೆಯಾದರೂ ಸದ್ಯಕ್ಕೆ ಬರಗಾಲ ಘೋಷಿಸಿಲ್ಲ

ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಸ್ಪಷ್ಟನೆ





ಬೆಂಗಳೂರು, ಜು. 20(ಕೆಎಂಶಿ)– ಮುಂಗಾರು ಮಳೆ ಕೊರತೆ ಇದ್ದರೂ ರಾಜ್ಯದಲ್ಲಿ ಸದ್ಯಕ್ಕೆ ಬರ ಘೋಷಣೆ ಮಾಡಿಲ್ಲ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಮಳೆ ವಿಳಂಬವಾಗಿ ಆತಂಕ ಮೂಡಿಸಿತ್ತು. ಆದರೆ, ನಂತರದ ದಿನಗಳಲ್ಲಿ ಮಳೆ ಬಿದ್ದಿದ್ದರಿಂದ ಸರ್ಕಾರಕ್ಕೆ ಎದುರಾಗಿದ್ದ ದೊಡ್ಡ ಗಂಡಾಂತರದಿಂದ ಪಾರಾಗಿದ್ದೇವೆ. ರಾಜ್ಯದ 19 ತಾಲೂಕುಗಳಲ್ಲಿ ಸ್ವಲ್ಪ ಸಮಸ್ಯೆ ಇದೆ. ಆದರೆ, ಕಳೆದ ಎರಡು ದಿನಗಳಿಂದ ಹೈದರಾಬಾದ್ ಹಾಗೂ ಮುಂಬೈ ಕರ್ನಾಟಕ ಭಾಗದಲ್ಲಿ ಮಳೆಯಾಗುತ್ತಿರುವುದರಿಂದ ಅಲ್ಲಿಯೂ ಸಮಸ್ಯೆ ನಿವಾರಣೆಯಾಗಲಿದೆ ಎಂದು ಆಶಾಭಾವನೆ ವ್ಯಕ್ತಪಡಿಸಿದರು.

ಮುಂಗಾರು ತಡವಾದ್ದರಿಂದ ಕನಿಷ್ಠ 90 ತಾಲೂಕುಗಳಲ್ಲಿ ಬರ ಘೋಷಣೆ ಮಾಡಬೇಕಾಗುತ್ತದೆ ಎಂಬ ಆತಂಕ ಸರ್ಕಾರಕ್ಕಿತ್ತು. ಅಷ್ಟೇ ಅಲ್ಲ. ಕುಡಿಯುವ ನೀರಿನ ಸಮಸ್ಯೆ ಎದುರಾಗಿ 340 ಗ್ರಾಮಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿತ್ತು. ಈಗ ಕೆಲವೆಡೆ ಮಳೆಯಾದ ಕಾರಣ ಪರಿಸ್ಥಿತಿ ಸುಧಾರಿಸಿದ್ದು, 114 ಗ್ರಾಮಗಳಿಗಷ್ಟೇ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದೆ. ರಾಜ್ಯದ ಬಹುತೇಕ ಕೆರೆ ಕಟ್ಟೆಗಳಲ್ಲಿ ಶೇ.30–50ರಷ್ಟು ನೀರು ಸಂಗ್ರಹವಿರುವುದರಿಂದ ಅಂತರ್ಜಲದ ಮಟ್ಟ ಸುಧಾರಿಸಿ ಕೊಳವೆ ಬಾವಿಗಳಿಗೆ ಅನುಕೂಲವಾಗಿದೆ. ಆದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಶೇ.10ರಷ್ಟು ಬಿತ್ತನೆ ಪ್ರಮಾಣ ಕಡಿಮೆಯಾಗಿದೆ. ಇದರಿಂದ ದ್ವಿದಳ ಧಾನ್ಯ ಉತ್ಪಾದನೆ ಕಡಿಮೆಯಾಗಲಿದೆ. ಹವಾಮಾನ ಇಲಾಖೆ ನೀಡಿರುವ ವರದಿಯಂತೆ ಮುಂದಿನ ದಿನಗಳಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳಿಗೆ ನೀರು ಹರಿದು ಬರಲಿದೆ ಎಂದರು.


ಇದರಿಂದ ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗುವುದಿಲ್ಲ. ಕಳೆದ 3 ವರ್ಷದಿಂದ ನೀಡಿರುವ ವರದಿಯಲ್ಲಿ ಯಾವುದೇ ಲೋಪವಾಗಿಲ್ಲ. ಮುನ್ಸೂಚನೆಯಂತೆ ಮಳೆಯಾಗಲಿದೆ ಎಂಬ ಭರವಸೆ ಹವಾಮಾನ ಇಲಾಖೆ ಅಧಿಕಾರಿಗಳು ನೀಡಿದ್ದಾರೆ ಎಂದರು.

ರಾಜ್ಯದಲ್ಲಿ ಅತಿವೃಷ್ಟಿ, ಅನಾವೃಷ್ಟಿ ಏನೇ ಎದುರಾಗಲಿ ನಾವು ಅದನ್ನು ಆದ್ಯತೆ ಮೇಲೆ ಎದುರಿಸಲು ಸಜ್ಜಾಗಿದ್ದೇವೆ. ಇಂತಹ ಸಂದರ್ಭದಲ್ಲಿ ಸರ್ಕಾರದ ಅನುಮತಿಗೂ ಕಾಯದೇ, ತುರ್ತು ಪರಿಹಾರ ಕಾರ್ಯಕ್ಕೆ ಹಣ ಬಳಸಲು ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾಗಿದೆ ಎಂದರು. ಅಧಿವೇಶನ ಮುಗಿಯುತ್ತಿದ್ದಂತೆ ಕಂದಾಯ ಸಚಿವರೊಂದಿಗೆ ಜಿಲ್ಲಾಡಳಿತದ ಸಭೆ ನಡೆಸಿ ಮತ್ತೊಮ್ಮೆ ಮಳೆ, ಬೆಳೆ ಪರಿಸ್ಥಿತಿ ಪರಿಶೀಲನೆ ಮಾಡಲಾಗುವುದು ಮತ್ತು ಮುನ್ನೆಚ್ಚರಿಕೆ ಕ್ರಮವಾಗಿ ಹಣ ಬಿಡುಗಡೆ ಮಾಡಲಾಗುವುದು ಎಂದು ಹೇಳಿದರು.

ಬಿತ್ತನೆ ಬೀಜ ಹಾಗೂ ರಸಗೊಬ್ಬರವನ್ನು ಸಾಕಷ್ಟು ದಾಸ್ತಾನು ಮಾಡಲಾಗಿದೆ. ಈ ಬಗ್ಗೆ ರೈತರು ಆತಂಕ ಪಡುವ ಅಗತ್ಯವಿಲ್ಲ. ಬೇಡಿಕೆಗೆ ತಕ್ಕಂತೆ ಪೂರೈಕೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ.

ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ವಿಷಯದಲ್ಲಿ ದಲಿತ ಕಾರ್ಡ್ ಪ್ಲೇ...!

ದಲಿತ ಮುಖ್ಯಮಂತ್ರಿ ಮಾಡಲು ಇದು ಸಕಾಲ; ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಸವಾಲು



ಬೆಂಗಳೂರು, ಜು.20(ಕೆಎಂಶಿ)– ಉಪ ಸಭಾಧ್ಯಕ್ಷರ ವಿಷಯದಲ್ಲಿ ದಲಿತ ಕಾರ್ಡ್ ಬಿಟ್ಟ ಕಾಂಗ್ರೆಸ್ ಪಕ್ಷಕ್ಕೆ ತಿರುಗೇಟು ಕೊಟ್ಟಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು, ದಲಿತರ ಬಗ್ಗೆ ಇಷ್ಟು ಪ್ರೇಮ ತೋರಿಸುವ ಕಾಂಗ್ರೆಸ್ ಈಗಲಾದರೂ ದಲಿತ ಮುಖ್ಯಮಂತ್ರಿಯನ್ನು ಮಾಡಲಿ ಎಂದು ಸವಾಲು ಹಾಕಿದರು.

ಈ ಬಗ್ಗೆ ಸರಣಿ ಟ್ವೀಟ್ ಮಾಡಿರುವ ಅವರು, ಇಬ್ಬರು ಸಚಿವರು ಉಪ ಸಭಾಧ್ಯಕ್ಷರ ಬಗ್ಗೆ ಕಾಳಜಿ ತೋರಿಸಿದ್ದಾರೆ. ಆದರೆ, ಅವರನ್ನು ಇನ್ನೊಬ್ಬ ಶಾಸಕರು ಬೇಡ ಎಂದ ಉಪಸಭಾಧ್ಯಕ್ಷರ ಹುದ್ದೆಯಲ್ಲಿ ಕೂರಿಸಿದ್ದಾರೆ. ಅವರಿಗಾಗಿ ಇವರು ಸಚಿವ ಸ್ಥಾನವನ್ನು ತ್ಯಾಗ ಮಾಡಲಿ ಎಂದು ಟಾಂಗ್ ನೀಡಿದ್ದಾರೆ.

ಕೆಲವೊಮ್ಮೆ ಅಧಿಕಾರ ಮತ್ತು ಅಜ್ಞಾನ ಒಟ್ಟೊಟ್ಟಿಗೆ ಸಾಗುತ್ತವೆ. ಅದಕ್ಕೆ ರಾಜ್ಯ ಕಾಂಗ್ರೆಸ್ ಸರಕಾರವೇ ಜೀವಂತ ಸಾಕ್ಷಿ. 2018ರಲ್ಲಿ ಹೆಚ್.ಡಿ.ಕುಮಾರಸ್ವಾಮಿ ಅವರು ತಮ್ಮ ಪ್ರಮಾಣ ಸ್ವೀಕಾರ ಸಮಾರಂಭಕ್ಕೆ ಆಗಮಿಸಿದ ಹೊರ ರಾಜ್ಯಗಳ ಗಣ್ಯರಿಗೆ ಆತಿಥ್ಯ ನೀಡಲು ಅಧಿಕಾರಿಗಳನ್ನು ಬಳಕೆ ಮಾಡಿಕೊಂಡಿರಲಿಲ್ಲವೆ ಎಂದು ಕೆಲವರು ಪ್ರಶ್ನಿಸಿದ್ದಾರೆ ಎಂದು ಅವರು ಲೇವಡಿ ಮಾಡಿದ್ದಾರೆ.

ಸ್ವತಃ ಮುಖ್ಯಮಂತ್ರಿಗಳು, ಸಂಸದೀಯ ಸಚಿವರು, ಇನ್ನೂ ಕೆಲ ಮಂತ್ರಿಗಳು ಸದನವನ್ನೇ ದಿಕ್ಕು ತಪ್ಪಿಸಲು ಯತ್ನಿಸಿದ್ದಾರೆ. ಆಗ ನಾನು ಕೇವಲ ನಿಯೋಜಿತ ಮುಖ್ಯಮಂತ್ರಿ, ರಾಜಭವನದ ಆದೇಶದ ಮೇರೆಗೆ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಎಲ್ಲಾ ವ್ಯವಸ್ಥೆ ಮಾಡುತ್ತದೆ ಎಂಬುದು ಇವರಿಗೆ ತಿಳಿಯದೆ ಎಂದು ಕುಮಾರಸ್ವಾಮಿ ಅವರು ಖಾರವಾಗಿ ಪ್ರಶ್ನಿಸಿದ್ದಾರೆ.

ಪ್ರಮಾಣವನ್ನೇ ಸ್ವೀಕರಿಸದ ನಿಯೋಜಿತ ಮುಖ್ಯಮಂತ್ರಿ ಯಾವುದಾದರೂ ಆದೇಶ ನೀಡಲು ಸಾಧ್ಯವೇ? ಇಷ್ಟಕ್ಕೂ ಮುಖ್ಯಮಂತ್ರಿಯ ಪ್ರಮಾಣ ವಚನ ಸಮಾರಂಭಕ್ಕೂ, ಪಕ್ಷದ ಕಾರ್ಯಕ್ರಮಕ್ಕೂ ಹೋಲಿಕೆಯೇ? ಇಷ್ಟು ಸಾಮಾನ್ಯ ತಿಳಿವಳಿಕೆ ಸ್ವತಃ ಮುಖ್ಯಮಂತ್ರಿ ಹಾಗೂ ಸಂಸದೀಯ ವ್ಯವಹಾರಗಳ ಸಚಿವರಿಗೆ ಇಲ್ಲ ಎಂದರೆ ಏನು ಹೇಳುವುದು? ಇಂಡಿಯಾ ಒಕ್ಕೂಟದ ಸಭೆಗೆ ಬಂದ ಹೊರರಾಜ್ಯಗಳ ನಾಯಕರಿಗೆ ಐಎಎಸ್ ಅಧಿಕಾರಿಗಳನ್ನು ಚಾಕರಿಗೆ ಬಿಟ್ಟಿದ್ದು ತಪ್ಪು ಎಂಬುದು ಸಾಂವಿಧಾನಿಕ ಮೌಲ್ಯಗಳ ಬಗ್ಗೆ ಗಿಳಿಪಾಠ ಒಪ್ಪಿಸುವ ಸ್ವಯಂಘೋಷಿತ ಸಂವಿಧಾನ ತಜ್ಞರಿಗೆ ಶೋಭೆಯೇ? ಎಂದು ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಉಪಸಭಾಧ್ಯಕ್ಷರು ದಲಿತರೆನ್ನುವ ಟ್ರಂಪ್ ಕಾರ್ಡ್ ತೇಲಿಬಿಟ್ಟಿದೆ ಸರಕಾರ. ದಲಿತರೆನ್ನುವ ಕಾರಣಕ್ಕೆ ಉಪ ಸಭಾಧ್ಯಕ್ಷರ ಮೇಲೆ ಅನುಕಂಪದ ಹೊಳೆ ಹರಿಸುವ ಕಾಂಗ್ರೆಸ್, ಅವರಿಗೆ ಸಚಿವ ಸ್ಥಾನವನ್ನೇ ನೀಡಬಹುದಿತ್ತು. ನೀಡಲಿಲ್ಲ ಯಾಕೆ? ಶಾಸಕ ಪುಟ್ಟರಂಗಶೆಟ್ಟಿ ಅವರು ಬೇಡವೇ ಬೇಡ ಎಂದ ಹುದ್ದೆಯನ್ನು ರುದ್ರಪ್ಪ ಲಮಾಣಿ ಅವರ ತಲೆಗೆ ಕಟ್ಟಿದ್ದು ಯಾಕೆ? ಎಂದು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ. ಇಂಥ ಅತಿಯಾದ ಜಾಣತನ, ಭಂಡತನ ಯಾಕೆ? ಸಂಪುಟ ರಚನೆ ವೇಳೆ ರುದ್ರಪ್ಪ ಲಮಾಣಿ ಅವರು ದಲಿತರೆನ್ನುವುದು ಕಾಂಗ್ರೆಸ್‌ಗೆ ಗೊತ್ತಿರಲಿಲ್ಲವೇ? ದಲಿತ ಕಾರ್ಡ್ ಬಿಟ್ಟ ಪ್ರಿಯಾಂಕ್ ಖರ್ಗೆ ಅಥವಾ ಕೃಷ್ಣ ಬೈರೇಗೌಡರಿಗೆ ಅಷ್ಟು ದಲಿತಪ್ರೇಮ ಇದ್ದರೆ ಅವರ ಸಚಿವಗಿರಿಯನ್ನು ಲಮಾಣಿ ಅವರಿಗೇ ಬಿಟ್ಟುಕೊಟ್ಟು ಈ ಇಬ್ಬರಲ್ಲಿ ಒಬ್ಬರು ಉಪ ಸಭಾಧ್ಯಕ್ಷರಾಗಲಿ ಎಂದು ಅವರು ಹೇಳಿದ್ದಾರೆ. ಅಷ್ಟೇ ಅಲ್ಲ, ದಲಿತ ಮುಖ್ಯಮಂತ್ರಿ ಕೂಗು ಕಾಂಗ್ರೆಸ್ ಪಕ್ಷದಲ್ಲಿ ಬಹಳ ದಿನಗಳಿಂದ ಇದೆ. ಹಿಂದೆ ಖರ್ಗೆ ಅವರಿಗೆ ಮುಖ್ಯಮಂತ್ರಿ ಹುದ್ದೆ ಕೈ ತಪ್ಪುವಂತೆ ಮಾಡಲಾಗಿತ್ತು.

ಈಗ ದಲಿತ ಮುಖ್ಯಮಂತ್ರಿ ಮಾಡಲು ಇದೇ ಸಕಾಲ. ದಲಿತರನ್ನೇ ಮುಖ್ಯಮಂತ್ರಿ ಮಾಡಲಿ. ನುಡಿದಂತೆ ನಡೆಯುವ ಪಕ್ಷಕ್ಕೆ ಇದು ಅಸಾಧ್ಯವೇನಲ್ಲ. ಅಲ್ಲವೇ? ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಪ್ರಶ್ನಿಸಿದ್ದಾರೆ.

ಕ್ರೀಡಾಪಟುಗಳಿಗೆ, ಕಲಾವಿದರಿಗೆ ಸದಾ ಪ್ರೋತ್ಸಾಹವಿರಲಿ

ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್.ಹೆಗ್ಡೆ ಅಭಿಮತ



ಜೆಎಸ್‌ಎಸ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ, ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಮಾತನಾಡಿದರು.

ಮೈಸೂರು, ಜು.20– ಕ್ರೀಡೆ ಮತ್ತು ಸಾಂಸ್ಕೃತಿಕ ಪ್ರತಿಭೆ ಎಲ್ಲರಲ್ಲೂ ಇರುವುದಿಲ್ಲ. ಯಾರಿಗೆ ಯಾವುದರಲ್ಲಿ ಆಸಕ್ತಿಯಿದೆ ಎಂಬುದನ್ನು ಗುರುತಿಸಿ ಅಂಥವರನ್ನು ಪ್ರೋತ್ಸಾಹಿಸಬೇಕು.ಈ ಕೆಲಸವನ್ನು ಅಧ್ಯಾಪಕರು ಮಾಡಬೇಕು. ಕ್ರೀಡಾ ಸ್ಪರ್ಧಿಗಳಿಗೆ ಮತ್ತು ಸಾಂಸ್ಕೃತಿಕ ಕಲಾವಿದರಿಗೆ ಪ್ರೋತ್ಸಾಹ ಇರಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್.ಹೆಗ್ಡೆ ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪದವಿ ವಿಭಾಗದ ವತಿಯಿಂದ ಏರ್ಪಡಿಸಿದ್ದ ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು.

ಕಾಲೇಜಿನಲ್ಲಿ ಲಲಿತಕಲಾ ವಿಭಾಗವೊಂದನ್ನು ತೆರೆಯಬೇಕು. ಏಕೆಂದರೆ ಕ್ರೀಡಾ ಸ್ಪರ್ಧಿಗಳಿಗೆ ಮತ್ತು ಸಾಂಸ್ಕೃತಿಕ ಕಲಾವಿದರಿಗೆ ಪ್ರೋತ್ಸಾಹ ಬೇಕಾಗುತ್ತದೆ. ದೇಶಕ್ಕೆ ವಿಜ್ಞಾನಿಗಳು, ವಾಣಿಜ್ಯೋದ್ಯಮಿಗಳು, ವೈದ್ಯರು, ಲಾಯರುಗಳು ಬೇಕಾಗಿರುವಂತೆಯೇ ಕವಿಗಳು, ಕಲಾವಿದರು, ಕ್ರೀಡಾಪಟುಗಳೂ ಬೇಕಾಗಿದ್ದಾರೆ. ಭಾರತೀಯರು ಯಾವುದಕ್ಕೂ ಕಡಿಮೆಯಿಲ್ಲ. ವಿಜ್ಞಾನ, ತಂತ್ರಜ್ಞಾನ, ಸಾಂಸ್ಕೃತಿಕ ಕಲೆಗಳಲ್ಲಿ ಉತ್ತಮರಾಗಿದ್ದಾರೆ. ರವೀಂದ್ರನಾಥ ಟ್ಯಾಗೊರ್ ಮತ್ತು ಸರ್.ಸಿ.ವಿ.ರಾಮನ್ ಅವರು ನಮ್ಮ ದೇಶಕ್ಕೆ ನೊಬೆಲ್ ಪ್ರಶಸ್ತಿಯನ್ನು ತಂದು ಕೊಟ್ಟಿದ್ದಾರೆ. ಆದ್ದರಿಂದ ಯುವಕರಿಗೆ, ಯುವಶಕ್ತಿಯ ಪ್ರತಿಭೆಗೆ ಪ್ರೋತ್ಸಾಹ ಬೇಕು. ಆಗ ಮಾತ್ರ ಪ್ರತಿಭೆ ಪ್ರಕಾಶಿಸುತ್ತದೆ.

ವಿದ್ಯಾರ್ಥಿಗಳಿಗೆ ಪಠ್ಯದಷ್ಟೇ ಕ್ರೀಡೆಯೂ ಮುಖ್ಯ. ಇಂದು ಓದಿನಲ್ಲಿ, ಕ್ರೀಡೆಗಳಲ್ಲಿ ಸವಾಲುಗಳು ಇವೆ. ಸವಾಲುಗಳನ್ನು ಸ್ವೀಕರಿಸುವ ಮನೋಭಾವ ಕ್ರೀಡೆಯಿಂದ ಮಾತ್ರ ಸಿಗುತ್ತದೆ. ಅನೇಕರು ಹಿಮಾಲಯವನ್ನು ಕಷ್ಟಪಟ್ಟು ಹತ್ತಲು ಮುಖ್ಯ ಕಾರಣ ಅವರಲ್ಲಿ ಇರುವ ಸವಾಲನ್ನು ಎದುರಿಸುವ ಗುಣವೇ ಆಗಿರುತ್ತದೆ. ಕ್ರೀಡೆಯಿಂದ ದೈಹಿಕ ಮತ್ತು ಮಾನಸಿಕ ದೃಢತೆ ಉಂಟಾಗುತ್ತದೆ. ಒತ್ತಡದಿಂದ ಮುಕ್ತರಾಗಲು, ಮುಂದಿನ ಆರೋಗ್ಯದ ಜೀವನಕ್ಕೂ ಕಾರಣವಾಗುತ್ತದೆ. ಪಠ್ಯ ಮತ್ತು ಓದು ನಮಗೆ ವೃತ್ತಿಯನ್ನು ಕಲ್ಪಿಸಬಹುದಾದರೂ ವ್ಯಕ್ತಿಗೆ ಪ್ರವೃತ್ತಿಯೂ ಅಷ್ಟೇ ಮುಖ್ಯ. ಅಮೇರಿಕಾದಂತಹ ರಾಷ್ಟ್ರದಲ್ಲಿ ವೃತ್ತಿಗಿಂತ ಪ್ರವೃತ್ತಿಗೆ ಪ್ರಾಮುಖ್ಯವನ್ನು ನೀಡುತ್ತಾರೆ. ಪ್ರವೃತ್ತಿಯನ್ನೇ ನಂಬಿ ಅದರಲ್ಲೇ ಸಾಧನೆ ಮಾಡಿದವರು ಬಹಳ ಜನ ಇದ್ದಾರೆ. ದೌರ್ಬಲ್ಯಗಳು ಎಲ್ಲರಲ್ಲೂ ಇರುತ್ತವೆ. ಅದನ್ನು ಮೀರಿ ಸಾಧಿಸುವ ಗುರಿ ವಿದ್ಯಾರ್ಥಿಗಳಲ್ಲಿ ಇರಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ. ಸಾಂಬಶಿವಯ್ಯ ಮಾತನಾಡಿ, ಶಿಕ್ಷಣ ಸಂಸ್ಥೆ ಕೇವಲ ಪದವಿ ನೀಡುವ ಕಾರ್ಖಾನೆಗಳಾಗದೆ ಅವರ ವ್ಯಕ್ತಿತ್ವವನ್ನೂ ನಿರ್ಮಿಸುವಲ್ಲಿ ಸಫಲವಾಗಬೇಕು. ಅದಕ್ಕಾಗಿ ಪಠ್ಯ ಮತ್ತು ಪಠ್ಯಪೂರಕ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗುವಂತೆ ಮಾಡಬೇಕು. ನಮ್ಮ ಕಾಲೇಜಿನಲ್ಲಿಯೂ ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆಗಳನ್ನು ನಿರ್ಮಿಸಿ ವಿದ್ಯಾರ್ಥಿಗಳ ಪ್ರತಿಭೆಯನ್ನು ಗುರುತಿಸುವ, ಪ್ರೋತ್ಸಾಹಿಸುವ ಕೆಲಸವನ್ನು ಮಾಡಲಾಗುತ್ತಿದೆ. ಕೌಶಲ್ಯಾಧಾರಿತ ಶಿಕ್ಷಣಕ್ಕೆ ಇಂದು ಹೆಚ್ಚು ಬೇಡಿಕೆ ಇರುವುದರಿಂದ ಶಿಕ್ಷಣದ ಜೊತೆಗೆ ಕೌಶಲ್ಯದ ಕಡೆಗೆ ಹೆಚ್ಚು ಗಮನ ನೀಡಬೇಕು. ಯಾವುದೇ ಸ್ಪರ್ಧೆಗಳಲ್ಲಿ ಭಾಗವಹಿಸುವಿಕೆ ಮುಖ್ಯವೇ ಹೊರತು ಬಹುಮಾನ ಗಳಿಸುವುದಲ್ಲ. ಬಹುಮಾನ ಕೆಲವರಿಗೇ ದೊರೆತರೂ ಭಾಗವಹಿಸಿದವರೆಲ್ಲಾ ವಿಜೇತರೇ ಆಗಿದ್ದಾರೆ ಎಂದರು. ಕಾಲೇಜಿನ ಪ್ರಾಂಶುಪಾಲ ಪ್ರೊ.ಎಂ.ಪಿ.ವಿಜಯೇಂದ್ರಕುಮಾರ್, ಸಾಂಸ್ಕೃತಿಕ ವೇದಿಕೆ ಸಂಚಾಲಕ ಡಾ.ಮಧುಸೂದನ್, ಕ್ರೀಡಾ ವೇದಿಕೆ ಸಂಚಾಲಕ ಎಂ.ಕಾರ್ತಿಕ್ ಉಪಸ್ಥಿತರಿದ್ದರು.

ಜು.23ರಿಂದ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ

ಮೈಸೂರು, ಜು.20– ನಗರದ ಕೃಷ್ಣಮೂರ್ತಿಪುರಂನಲ್ಲಿರುವ ಶ್ರೀ ಸೋಸಲೆ ವ್ಯಾಸರಾಜ ಮಠದಲ್ಲಿ ಅಧಿಕ ಶ್ರಾವಣ ಮಾಸದ ಪ್ರಯುಕ್ತ ಪ್ರತಿನಿತ್ಯ ಸಂಜೆ 6ರಿಂದ 7ರವರೆಗೆ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞವನ್ನು ಏರ್ಪಡಿಸಲಾಗಿದೆ. ಇದರ ಅಂಗವಾಗಿ ಜುಲೈ 23ರಿಂದ 27ರವರೆಗೆ 'ಬಾಲಕಾಂಡ'ದ ಪ್ರವಚನ ವಿ.ಶ್ರೀ ಶ್ರೀನಿಧಿ ಆಚಾರ್ಯ ಪ್ಯಾಟಿ ಹಾಗೂ ಜು.28ರಿಂದ ಆಗಸ್ಟ್ 1ರವರೆಗೆ 'ಅಯೋಧ್ಯಾಕಾಂಡ' ಪ್ರವಚನ ವಿ.ಶ್ರೀ ಶ್ರೀಕಾಂತಾಚಾರ್ಯ ಕಳಸಾಪುರರವರು ನಡೆಸಿಕೊಡಲಿದ್ದಾರೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಮಠದ ಜಿಲ್ಲಾ ಪ್ರಚಾರ ಸಮಿತಿ ಮುಖ್ಯಸ್ಥ ವಿದ್ವಾನ್ ಸಿ.ವಿ.ಶ್ರೀನಿವಾಸ ರಾವ್ ಹಾಗೂ ವ್ಯವಸ್ಥಾಪಕ ಸಮಿತಿಯವರು ಕೋರಿದ್ದಾರೆ. ಮಾಹಿತಿಗೆ ಮೊಬೈಲ್ 9845254547 ಸಂಪರ್ಕಿಸಬಹುದು.

ಲೈಂಗಿಕ ಕಿರುಕುಳ ಪ್ರಕರಣ: ಬ್ರಿಜ್ ಭೂಷಣ್‌ಗೆ ಷರತ್ತುಬದ್ಧ ಜಾಮೀನು



ನವದೆಹಲಿ, ಜು.20– ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಪ್ರಕರಣದಲ್ಲಿ ಕುಸ್ತಿ ಫೆಡರೇಶನ್ ಮಾಜಿ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರಿಗೆ ಜಾಮೀನು ಸಿಕ್ಕಿದೆ.

ಇಂದು ದೆಹಲಿಯ ರೂಸ್ ಅವೆನ್ಯೂ ಕೋರ್ಟ್ ಅವರಿಗೆ ಜಾಮೀನು ಮಂಜೂರು ಮಾಡಿದ್ದು ವಿದೇಶ ಪ್ರವಾಸಕ್ಕೆ ತೆರಳುವಂತಿಲ್ಲ ಎಂದು ಷರತ್ತು ವಿಧಿಸಿದೆ. ಬ್ರಿಜ್ ಭೂಷಣ್ ಜಾಮೀನಿಗೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ನಾವು ಅದರ ವಿರುದ್ಧವೂ ಅಲ್ಲ ಅಥವಾ ಅದರ ಪರವಾಗಿಯೂ ಇಲ್ಲ ಎಂದು ಹೇಳಿದ್ದಾರೆ. ಇದಕ್ಕೂ ಮುನ್ನ ರೂಸ್ ಅವೆನ್ಯೂ ಕೋರ್ಟ್ ಬೆಳಗ್ಗೆಯೇ ವಿಚಾರಣೆ ನಡೆಸಿ ಜಾಮೀನು ತೀರ್ಪನ್ನು ಕಾಯ್ದಿರಿಸಿತ್ತು. ನಂತರ ನ್ಯಾಯಾಲಯವು ಸರಿಯಾಗಿ 4 ಗಂಟೆಗೆ ವಿಚಾರಣೆಯನ್ನು ಪ್ರಾರಂಭಿಸಿತು. ಪ್ರಕರಣದಲ್ಲಿ ಬ್ರಿಜ್ ಭೂಷಣ್‌ಗೆ ನಿಯಮಿತ ಜಾಮೀನು ನೀಡುವ ನಿರ್ಧಾರವನ್ನು ಪ್ರಕಟಿಸಿತು. ಜು.18ರಂದು ನ್ಯಾಯಾಲಯ ಬ್ರಿಜ್ ಭೂಷಣ್‌ಗೆ ಮಧ್ಯಂತರ ಜಾಮೀನು ನೀಡಿತ್ತು. ಇದೀಗ ಅವರಿಗೆ ಬಿಗ್ ರಿಲೀಫ್ ಸಿಕ್ಕಿದ್ದು, ಲೈಂಗಿಕ ಕಿರುಕುಳ ಪ್ರಕರಣದಲ್ಲಿ ನಿತ್ಯ ಜಾಮೀನಿನ ಮೇಲೆ ಹೊರಬರಲಿದ್ದಾರೆ. ಬ್ರಿಜ್ ಭೂಷಣ್ ಶರಣ್‌ಸಿಂಗ್ ಅವರನ್ನು ಚಾರ್ಜ್ ಶೀಟ್ ಸಲ್ಲಿಕೆಯಾಗುವವರೆಗೆ ಬಂಧಿಸುವ ಅಗತ್ಯವಿಲ್ಲ ಎಂದಿರುವಾಗ ಈಗ ಅದರ ಅಗತ್ಯ ಏನಿತ್ತು ಎಂದು ಅವರ ವಕೀಲರು ಹೇಳಿದ್ದರು. ಇದನ್ನೇ ಆಧಾರವಾಗಿ ಪರಿಗಣಿಸಿ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ. ಬ್ರಿಜ್ ಭೂಷಣ್ ಅವರ ಆಪ್ತ ಸಹಾಯಕ ಮತ್ತು ಕುಸ್ತಿ ಫೆಡರೇಶನ್‌ನ ಮಾಜಿ ಅಧಿಕಾರಿ ವಿನೋದ್ ತೋಮರ್ ಅವರಿಗೂ ಪರಿಹಾರ ಸಿಕ್ಕಿದೆ. ಒಟ್ಟು 6 ಪ್ರಕರಣಗಳ ಪೈಕಿ 2 ಪ್ರಕರಣಗಳಲ್ಲಿ ಇವರನ್ನು ಸಹ ಆರೋಪಿಯನ್ನಾಗಿ ಮಾಡಲಾಗಿದೆ. ಬ್ರಿಜ್ ಭೂಷಣ್ ಸಿಂಗ್, ವಿನೋದ್ ತೋಮರ್ ಅವರಿಗೆ ತಲಾ 25,000 ರೂ.ಗಳ ಶೂರಿಟಿಯ ಮೇಲೆ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ. ತಿಳಿಸದೇ ವಿದೇಶ ಪ್ರವಾಸಕ್ಕೆ ಹೋಗುವುದಿಲ್ಲ ಎಂದು ಕೋರ್ಟ್ ಷರತ್ತು ವಿಧಿಸಿದೆ. ನಂತರ ಪ್ರಕರಣದ ವಿಚಾರಣೆಯನ್ನು ಜು.28ಕ್ಕೆ ಮುಂದೂಡಿದೆ.

ಇಂಟ್ರಾಕ್ಟ್ ಕ್ಲಬ್‌ನ ನೂತನ ಪದಾಧಿಕಾರಿಗಳ ಪದಗ್ರಹಣ



ಮೈಸೂರು, ಜು.20(ಎಸ್‌ಬಿಡಿ)– ವಿಜಯವಿಠಲ ಶಾಲೆಯ 2023–24ನೇ ಸಾಲಿನ ಇಂಟ್ರಾಕ್ಟ್ ಕ್ಲಬ್‌ನ ಪದಗ್ರಹಣ ಕಾರ್ಯಕ್ರಮ ನಡೆಯಿತು.

ರೋಟರಿ ಮೈಸೂರು ಅಧ್ಯಕ್ಷ ಅರುಣ್ ಆರ್.ಬೆಳವಾಡಿ ಹಾಗೂ ಯುವ ಸೇವಾ ನಿರ್ದೇಶಕ ಸಮೀರ್ ಕಶ್ಯಪ್ ದೀಪ ಬೆಳಗುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಇಂಟ್ರಾಕ್ಟ್ ಕ್ಲಬ್‌ನ ನೂತನ ಅಧ್ಯಕ್ಷ ವಿಶ್ರೂತ್.ಎಸ್.ಪ್ರಸಾದ್, ಡಿಐಆರ್ ಸಮನ್ವಿತ.ಎಸ್.ರಘುನಂದನ್ ಹಾಗೂ ಸದಸ್ಯರುಗಳಿಗೆ ಬ್ಯಾಡ್ಜ್ ನೀಡಿ, ಅಭಿನಂದಿಸಲಾಯಿತು. ಇದೇ ವೇಳೆ ನಿಕಟಪೂರ್ವ ಅಧ್ಯಕ್ಷೆ ಶುಶ್ರೂತ. ಎಸ್.ಗೌಡ ಹಿಂದಿನ ವರ್ಷದ ಸಾಧನೆಗಳನ್ನು ವಿವರಿಸಿದರು.

ಈ ಸಂದರ್ಭದಲ್ಲಿ ಅರುಣ್ ಆರ್.ಬೆಳವಾಡಿ ಮಾತನಾಡಿ, ಯುವಶಕ್ತಿ ಸಮಾಜಕ್ಕೆ ಉತ್ತಮ ಕೊಡುಗೆ ನೀಡಬೇಕು. ಸಮುದಾಯದ ಸೇವೆಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಸೇವೆಯ ಮಹತ್ವವನ್ನು ತಿಳಿಸಿಕೊಟ್ಟರು. ಸಮೀರ್ ಕಶ್ಯಪ್, ಮಕ್ಕಳು ದೊಡ್ಡ ದೊಡ್ಡ ಕನಸು ಕಾಣುವುದರ ಜೊತೆಗೆ ಪರಸ್ಪರ ಪ್ರೀತಿಯಿಂದ ಸಮಾಜ ಕಟ್ಟಬೇಕೆಂದು ತಿಳಿಹೇಳಿದರು. ವಿಜಯವಿಠಲ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ವಾಸುದೇವ್ ಭಟ್ ಮಾತನಾಡಿ, ಮಕ್ಕಳು ಸೇವಾ ಮನೋಭಾವದ ಜೊತೆಗೆ ವ್ಯಕ್ತಿತ್ವ ವಿಕಸನ ಬಗ್ಗೆ ಗಮನಕೊಡಬೇಕು ಎಂಬುದನ್ನು ಹಲವು ನಿದರ್ಶನಗಳೊಂದಿಗೆ ವಿವರಿಸಿದರಲ್ಲದೆ, ಕ್ಲಬ್‌ನ ಚಟುವಟಿಕೆಗಳ ಬಗ್ಗೆ ತಿಳಿಸಿದರು. ಕಾರ್ಯಕ್ರಮದಲ್ಲಿ ವಿಜಯವಿಠಲ ವಿದ್ಯಾ ಶಾಲೆಯ ಪ್ರಾಂಶುಪಾಲೆ ಎಸ್.ಎ.ವೀಣಾ ಸೇರಿದಂತೆ ಶಿಕ್ಷಕರು ಹಾಗೂ ಪೋಷಕರು ಉಪಸ್ಥಿತರಿದ್ದರು.

ಆಗಸ್ಟ್‌ನಿಂದ ಇಂದ್ರಧನುಷ್ ಅಭಿಯಾನ ಆರಂಭ

ಮೈಸೂರು, ಜು.20(ಬಿಎಲ್‌ಯು)– ವಿವಿಧ ರೀತಿಯ ಲಸಿಕೆಗಳಿಂದ ವಂಚಿತರಾದ ಗರ್ಭಿಣಿ ಮಹಿಳೆಯರು ಹಾಗೂ ಮಕ್ಕಳಿಗೆ ಲಸಿಕೆ ನೀಡುವ ಮಿಷನ್ ಇಂದ್ರಧನುಷ್ ಅಭಿಯಾನ ಮೂರು ಸುತ್ತುಗಳಲ್ಲಿ ನಡೆಯಲಿದೆ. ಮೈಸೂರು ನಗರ ಪಾಲಿಕೆಯಲ್ಲಿ ಇಂದು ಮೇಯರ್ ಶಿವಕುಮಾರ್ ಅಧ್ಯಕ್ಷತೆಯಲ್ಲಿ ಮಿಷನ್ ಇಂದ್ರಧನುಷ್ ಕಾರ್ಯಚಟುವಟಿಕೆ ಕುರಿತಂತೆ ಟಾಸ್ಕ್ ಫೋರ್ಸ್ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ದಡಾರ–ರುಬೆಲ್ಲಾ ಲಸಿಕಾಕರಣ, ಡಿಸಿವಿ ಲಸಿಕಾಕರಣ ಹಾಗೂ ಎಫ್ಐ ಪಿವಿ ಲಸಿಕಾಕರಣದ ಪ್ರಗತಿಯನ್ನು ಹೆಚ್ಚುಸುವ ಸಲುವಾಗಿ ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ನಿರ್ಧಿಷ್ಟ ಆರು ದಿನಗಳಂದು 3 ಸುತ್ತುಗಳಲ್ಲಿ ತೀವ್ರತರವಾದ ಮಿಷನ್ ಇಂದ್ರಧನುಷ್ ಅಭಿಯಾನ ನಡೆಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಸೂಚಿಸಲಾಯಿತು. ನಗರ ಪಾಲಿಕೆ ಆರೋಗ್ಯಾಧಿಕಾರಿ ಡಾ.ನಾಗರಾಜ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರಲ್ಲಿ ಮುಂದುವರಿದ ಫುಟ್‌ಪಾತ್ ಒತ್ತುವರಿ ತೆರವು

ಮೈಸೂರು, ಜು.20(ಆರ್‌ಕೆ)– ಮೈಸೂರು ನಗರದಲ್ಲಿ ಫುಟ್‌ಪಾತ್ ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದವರನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರಿದಿದೆ.

ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಬುಧವಾರದಿಂದ ಕ್ಷಿಪ್ರ ಕಾರ್ಯಾಚರಣೆ ನಡೆಸಿ, ಫುಟ್‌ಪಾತ್ ಒತ್ತುವರಿ ತೆರವುಗೊಳಿಸುತ್ತಿದ್ದು, ಇಂದೂ ಸಹ ಓಲ್ಡ್ ಬ್ಯಾಂಕ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಟೌನ್‌ಹಾಲ್ ಬಳಿಯ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡುತ್ತಿದ್ದವರನ್ನು ಖಾಲಿ ಮಾಡಿಸಿದರು. ಅದರ ಬೆನ್ನಲ್ಲೇ ಇಂದು ಬೆಳಗ್ಗೆ 50ಕ್ಕೂ ಹೆಚ್ಚು ಮಂದಿ ಫುಟ್‌ಪಾತ್ ವ್ಯಾಪಾರಿಗಳು ಪಾಲಿಕೆ ಕಚೇರಿಯಲ್ಲಿ ಮೇಯರ್ ಶಿವಕುಮಾರ್ ಅವರನ್ನು ಭೇಟಿ ಮಾಡಿ ತಾವು ವ್ಯಾಪಾರವನ್ನೇ ನಂಬಿ ಜೀವನ ಸಾಗಿಸುತ್ತಿದ್ದೇವೆ. ನಮಗೆ ಮಳಿಗೆ ಪಡೆದು ವ್ಯಾಪಾರ ಮಾಡುವಷ್ಟು ಸಾಮರ್ಥ್ಯವಿಲ್ಲದ ಕಾರಣ ಫುಟ್‌ಪಾತ್‌ನಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ವ್ಯಾಪಾರ ಮಾಡಿಕೊಂಡು ಹೊಟ್ಟೆ ಹೊರೆಯುತ್ತೇವೆ. ತೊಂದರೆ ಕೊಡಬೇಡಿ ಎಂದು ಮನವಿ ಮಾಡಿಕೊಂಡರು.

ಇರುವ ಫುಟ್‌ಪಾತ್ ಚಿಕ್ಕ ಜಾಗದಲ್ಲಿ ಅಂಗಡಿಯವರು ಒಂದು ಬದಿ, ವ್ಯಾಪಾರಿಗಳು ಮತ್ತೊಂದು ಬದಿಯಲ್ಲಿ ಆವರಿಸಿಕೊಂಡರೆ ಪಾದಚಾರಿಗಳು ಎಲ್ಲಿ ಓಡಾಡಬೇಕು. ದಾರಿ ಇಲ್ಲದ ಕಾರಣ ಸಾರ್ವಜನಿಕರು ರಸ್ತೆಗಿಳಿಯಬೇಕಾಗುತ್ತದೆ. ಆದ್ದರಿಂದ ಅಪಘಾತಗಳಾಗುತ್ತವೆಯಾದ್ದರಿಂದ ಫುಟ್‌ಪಾತ್ ಮೇಲೆ ವ್ಯಾಪಾರ ಮಾಡಲು ಅವಕಾಶ ನೀಡುವುದಿಲ್ಲ ಎಂದು ಮೇಯರ್ ಶಿವಕುಮಾರ್ ಹೇಳಿ ಕಳುಹಿಸಿದರು. ನಗರಪಾಲಿಕೆ ಕೌನ್ಸಿಲ್ ಸಭೆ ನಿರ್ಣಯದಂತೆ ತೆರವು ಕಾರ್ಯಾಚರಣೆ ಮುಂದುವರಿಸಲಿದ್ದು, ಒತ್ತುವರಿ ಮಾಡಿ ಮತ್ತೆ ವ್ಯಾಪಾರ ಮಾಡಲಾರಂಭಿಸಿದರೆ, ದಂಡ ವಿಧಿಸಲಾಗುವುದು ಎಂದು ಶಿವಕುಮಾರ್ ಖಡಕ್ ಎಚ್ಚರಿಕೆ ನೀಡಿದರು.

ಮಹಾರಾಷ್ಟ್ರದ ರಾಯಗಢದಲ್ಲಿ ಭೂಕುಸಿತ; ಮೃತರ ಸಂಖ್ಯೆ 15ಕ್ಕೆ ಏರಿಕೆ

ಮೃತರ ಕುಟುಂಬಕ್ಕೆ ತಲಾ 5 ಲಕ್ಷ ರೂ. ಪರಿಹಾರ

ರಾಯಗಢ, ಜು.20– ಮಹಾರಾಷ್ಟ್ರದ ರಾಯಗಢ ಜಿಲ್ಲೆಯಲ್ಲಿ ಭೂಕುಸಿತ ಸಂಭವಿಸಿದ ಸ್ಥಳದಿಂದ ಕನಿಷ್ಠ 12 ಮೃತದೇಹಗಳನ್ನು ಅವಶೇಷಗಳಿಂದ ಹೊರತೆಗೆಯಲಾಗಿದೆ. ಹಲವು ಮಂದಿ ಅವಶೇಷಗಳಡಿ ಸಿಲುಕಿರುವ ಸಾಧ್ಯತೆಯಿದ್ದು, ರಕ್ಷಣಾ ಕಾರ್ಯಾಚರಣೆ ಭರದಿಂದ ಸಾಗಿದೆ. ಖಲಾಪುರ್ ತಹಸಿಲ್‌ನ ಇರ್ಶಲವಾಡಿ ಗ್ರಾಮದಲ್ಲಿ ಸಂಭವಿಸಿದ ಭೂ ಕುಸಿತದಿಂದಾಗಿ 12 ಮಂದಿ ಸಾವನ್ನಪ್ಪಿದ್ದು, ಒಬ್ಬರು ಹೃದಯಾಘಾತದಿಂದ ಮೃತಪಟ್ಟಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಭೂ ಕುಸಿತದಿಂದ ಸುಮಾರು 48 ಕುಟುಂಬಗಳಿಗೆ ಹಾನಿಯಾಗಿದೆ ಎನ್ನಲಾಗಿದ್ದು, ದುರಂತದಲ್ಲಿ ಸಾವನ್ನಪ್ಪಿದವರ ಕುಟುಂಬಗಳಿಗೆ ಮುಖ್ಯಮಂತ್ರಿ ಏಕನಾಥ್ ಶಿಂಧೆ ತಲಾ 5 ಲಕ್ಷ ರೂಪಾಯಿ ಪರಿಹಾರ ಘೋಷಿಸಿದ್ದಾರೆ. ಗಾಯಾಳುಗಳ ಚಿಕಿತ್ಸಾ ವೆಚ್ಚವನ್ನು ಮಹಾರಾಷ್ಟ್ರ ಸರ್ಕಾರ ಭರಿಸಲಿದೆ ಎಂದೂ ಹೇಳಿದ್ದಾರೆ. ಈ ಮಧ್ಯೆ ರಕ್ಷಣಾ ಕಾರ್ಯಾಚರಣೆಯನ್ನು ಪರಿಶೀಲಿಸಲು ಮುಖ್ಯಮಂತ್ರಿ ಏಕನಾಥ್‌ಶಿಂಧೆ ಸ್ಥಳಕ್ಕೆ ಆಗಮಿಸಿದ್ದಾರೆ. ಉಪಮುಖ್ಯಮಂತ್ರಿ ಅಜಿತ್ ಪವಾರ್ ಕೂಡಾ ರಕ್ಷಣಾ ಕಾರ್ಯಾಚರಣೆ ಪರಿಶೀಲಿಸುತ್ತಿದ್ದಾರೆ ಎಂದು ವರದಿಯಾಗಿದೆ.

ಗೃಹ ಸಚಿವ ಅಮಿತ್ ಶಾ ಭೇಟಿ ಮಾಡಿದ ಶಾಸಕ ವಿಜಯೇಂದ್ರ



ಬೆಂಗಳೂರು,ಜು.20–ಮಾಜಿ ಸಿಎಂ ಯಡಿಯೂರಪ್ಪ ಅವರ ಪುತ್ರ ಹಾಗೂ ಶಾಸಕ ಬಿ.ವೈ.ವಿಜ.ಯೇಂದ್ರ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಬುಧವಾರ ಭೇಟಿ ಮಾಡಿದ್ದಾರೆ. ಈ ಬಗ್ಗೆ ವಿಜಯೇಂದ್ರ ಟ್ವೀಟ್ ಮಾಡಿ ಮಾಹಿತಿ ಹಂಚಿಕೊಂಡಿದ್ದಾರೆ. ಸಂಘಟನಾ ಚಾತುರ್ಯದ ಚಾಣಕ್ಯನೆಂದೇ ಬಣ್ಣಿಸಲ್ಪಡುವ ಗೃಹ ಸಚಿವ @AmitShah ಜೀ ಅವರನ್ನು ಭೇಟಿ ಮಾಡಲಾಯಿತು. ರಾಜ್ಯದಲ್ಲಿ ವೈಫಲ್ಯದ ಗ್ಯಾರಂಟಿ ಬೆನ್ನಿಗಂಟಿಸಿಕೊಂಡಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಡಲು ಹಾಗೂ ಮುಂದಿನ ಲೋಕಸಭಾ ಚುನಾವಣೆಗೆ ಕಾರ್ಯಕರ್ತರನ್ನು ಸಜ್ಜುಗೊಳಿಸುವ ಕುರಿತು ಮಾರ್ಗದರ್ಶನ ಪಡೆಯಲಾಯಿತು.

ದಸಂಸ ಸಂಚಾಲಕರ ನೇಮಕ



ಮೈಸೂರು, ಜು.20–ನಂಜನಗೂಡು ತಾಲೂಕು ದಲಿತ ಸಂಘರ್ಷ ಸಮಿತಿಯ ಸಂಚಾಲಕರಾಗಿ ಶ್ರೀರಾಮಪುರದ ರಾಜಶೇಖರ್ (ಶೇಕಿ) ಅವರನ್ನು ನೇಮಕ ಮಾಡಲಾಗಿದೆ ಎಂದು ಮೈಸೂರು ವಿಭಾಗೀಯ ಸಂಚಾಲಕ ರಾಜಶೇಖರ ಕೋಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೋಟರಿ ಸೆಂಟ್ರಲ್ ಸಂಸ್ಥೆಯಿಂದ ಪ್ರತಿಭಾ ಪುರಸ್ಕಾರ



ಮೈಸೂರು,ಜು.20(ಆರ್‌ಕೆ)–ಮೈಸೂರಿನ ರೋಟರಿ ಸೆಂಟ್ರಲ್ ಸಂಸ್ಥೆಯು ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ರೊಟೇರಿಯನ್‌ಗಳ ಮಕ್ಕಳಿಗೆ ಬುಧವಾರ ಸಂಜೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಿತು.

ಮೈಸೂರಿನ ಹೆಬ್ಬಾಳು ಬಡಾವಣೆಯ ಸಂಕ್ರಾಂತಿ ಸರ್ಕಲ್ ಬಳಿ ಇರುವ ರೋಟರಿ ಸೆಂಟ್ರಲ್ ಮೈಸೂರಿನ ಅರ್‌ಸಿಎ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಶುಭ ಹಾರೈಸಿದರು.

ಈ ಸಂದರ್ಭ ಮಾತನಾಡಿದ ಅವರು, ಶಿಕ್ಷಣ, ತರಬೇತಿ, ಕೌಶಲ್ಯಾಭಿವೃದ್ಧಿ ಶಿಬಿರದಂತಹ ಕಾರ್ಯಕ್ರಮದ ಮೂಲಕ ನಗರ ಮತ್ತು ಗ್ರಾಮಾಂತರ ಪ್ರದೇಶದ ಯುವಕ–ಯುವತಿಯರನ್ನು ಸ್ವಾವಲಂಬಿಗಳನ್ನಾಗಿ ಮಾಡುತ್ತಿರುವ ರೋಟರಿ, ಲಯನ್ಸ್‌ನಂತಹ ಸಂಸ್ಥೆಗಳು ಹಲವು ಸಮಾಜ ಸೇವಾ ಕಾರ್ಯಗಳನ್ನು ಸದ್ದಿಲ್ಲದೇ ಮಾಡುತ್ತಿವೆ ಎಂದು ಶ್ಲಾಘಿಸಿದರು. ಅಭೀಷ್ಠ ಎಸ್., ತಂತ್ರಿ ಸೋಹನ್ ಎಸ್.ರಾಜ್, ಎಸ್.ಕವನ, ಎಸ್.ಕುಷಿ, ಅನಘ ಪದಕಿ, ಕೆ.ಆರ್.ಶ್ರೇಯಾ, ಉನ್ನತಿ ರಾಸ್ತೋಗಿ ಹಾಗೂ ಆರ್.ಆಕಾಶ್ ಅವರು ಪ್ರತಿಭಾ ಪುರಸ್ಕಾರ ಪಡೆದ ವಿದ್ಯಾರ್ಥಿಗಳು. ರೋಟರಿ ಸೆಂಟ್ರಲ್ ಅಧ್ಯಕ್ಷ ಎನ್.ಉಮೇಶ್, ಕಾರ್ಯದರ್ಶಿ ಪ್ರೇಂ ಸಾಗರ್, ರೊಟೇರಿಯನ್‌ಗಳಾದ ರಾಜೇಶ್ ದರಿರಾ, ಶಶಿಕಾಂತ್ ಸೂರ್ಯವಂಶಿ, ಎಂ.ಡಿ.ಪ್ರವೀಣ್ ಪಾಲ್, ಎ.ಆರ್.ರವೀಂದ್ರ ಭಟ್, ಆಂಟೋನಿ ಮೋಸೆಸ್, ಸುಬ್ರಹ್ಮಣ್ಯ ತಂತ್ರಿ ಸೇರಿದಂತೆ ಹಲವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಇಂದು ಕ್ಲಿಯರ್‌ಮೆಡಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಉದ್ಘಾಟನೆ



ಮೈಸೂರು, ಜು.20 (ಪಿಎಂ)– ಮೈಸೂರಿನ ವಿಜಯನಗರ ಮೂರನೇ ಹಂತದಲ್ಲಿರುವ ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆಯ ಮತ್ತೊಂದು ಶಾಖೆಯು ಹಿನಕಲ್ ಗ್ರಾಪಂ ವ್ಯಾಪ್ತಿಯ ಹುಣಸೂರು ರಸ್ತೆ ಸಮೀಪದಲ್ಲಿ ಸಜ್ಜುಗೊಂಡಿದೆ. ಜು.21ರಂದು ಈ ನೂತನ ಕ್ಲಿಯರ್ ಮೆಡಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ಉದ್ಘಾಟನೆಯನ್ನು ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯವರು ನೆರವೇರಿಸಲಿದ್ದಾರೆ ಎಂದು ಆಸ್ಪತ್ರೆಯ ಮುಖ್ಯ ವ್ಯವಸ್ಥಾಪಕ ಎ.ಆರ್.ಮಂಜುನಾಥ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಲಿಯರ್ ಮೆಡಿ ಹೆಲ್ತ್‌ಕೇರ್ ಸಂಸ್ಥೆಯ 100 ಹಾಸಿಗೆಗಳ ಈ ನೂತನ ಆಸ್ಪತ್ರೆಯನ್ನು ಶ್ರೀಗಳು ಬೆಳಗ್ಗೆ 10.30ಕ್ಕೆ ಉದ್ಘಾಟಿಸಿ, ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಶಾಸಕ ಜಿ.ಟಿ.ದೇವೇಗೌಡ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಕ್ಲಿಯರ್ ಮೆಡಿ ರೇಡಿಯಂಟ್ ಆಸ್ಪತ್ರೆಯು ಕಳೆದ ಐದು ವರ್ಷಗಳಿಂದ ಕ್ಯಾನ್ಸರ್, ಕಿಡ್ನಿ, ಗ್ಯಾಸ್ಟ್ರೋ, ಪಲ್ಮನಾಲಜಿ, ಡಯಾಲಿಸಿಸ್, ನ್ಯೂರೋ ಸರ್ಜರಿ, ಇಎನ್‌ಟಿ, ಆರ್ಥೋ, ಜನರಲ್ ಮೆಡಿಸಿನ್ ಸೇರಿದಂತೆ ಎಲ್ಲಾ ರೀತಿಯ ಆರೋಗ್ಯ ಸೇವೆಗಳನ್ನು ಪರಿಣಾಮಕಾರಿಯಾಗಿ ನೀಡುತ್ತಿದೆ. ಅದರಲ್ಲಿಯೂ ಕ್ಯಾನ್ಸರ್‌ನಿಂದ ಬಳಲುವ ಮೊದಲ ಹಂತದ ಹಲವು ರೋಗಿಗಳು ಸಂಪೂರ್ಣವಾಗಿ ಗುಣಮುಖರಾಗಿದ್ದಾರೆ. ನಂತರದ ಹಂತದಲ್ಲಿರುವ ಕ್ಯಾನ್ಸರ್ ರೋಗಿಗಳಿಗೆ ಸುಧಾರಿತ ಚಿಕಿತ್ಸೆ ನೀಡಿ ಹೆಚ್ಚು ಅವಧಿವರೆಗೆ ಬದುಕುಳಿಯುವಂತೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆಸ್ಪತ್ರೆಯ ವ್ಯವಸ್ಥಾಪಕ ಎ.ಆರ್.ಮಂಜುನಾಥ್ ತಿಳಿಸಿದರು.

ಪೆಟ್ ಸ್ಕ್ಯಾನ್ ಮತ್ತು ಎಂಆರ್‌ಐ ಸ್ಕ್ಯಾನ್, ಕಿಡ್ನಿ, ಗ್ಯಾಸ್ಟ್ರೋ, ಪಲ್ಮನಾಲಜಿ, ನ್ಯೂರೋ ಸರ್ಜರಿ, ಇಎನ್‌ಟಿ, ಜನರಲ್ ಮೆಡಿಸಿನ್, ಡಯಾಲಿಸಿಸ್, ಆರ್ಥೋಪೆಡಿಕ್ ಸೇವೆಗಳು ಅತ್ಯಾಧುನಿಕ ಹಾಗೂ ಸುಧಾರಿತ ಕ್ರಮದಲ್ಲಿ ನೂತನ ಆಸ್ಪತ್ರೆಯಲ್ಲಿ ದೊರೆಯಲಿವೆ ಎಂದು ಹೇಳಿದರು. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಕೇಶ್, ಮಾರ್ಕೆಟಿಂಗ್ ಮುಖ್ಯಸ್ಥ ಅಭಿಷೇಕ್ ಪತ್ರಿಕಾಗೋಷ್ಠಿಯಲ್ಲಿದ್ದರು.

ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ



ಮಂಡ್ಯ, ಜು.20– ಜಿಲ್ಲೆಯ ಕೆ.ಆರ್.ಪೇಟೆ, ಮದ್ದೂರು, ಪಾಂಡವಪುರ, ಮಳವಳ್ಳಿ ಹಾಗೂ ಶ್ರೀರಂಗಪಟ್ಟಣ ತಾಲೂಕುಗಳ 2023–24ನೇ ಸಾಲಿನ ತುರ್ತು ಕುಡಿಯುವ ನೀರಿನ ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಯಿತು.

ಗುರುವಾರ ಜಿಲ್ಲಾ ಪಂಚಾಯತ್‌ನ ಸಭಾಂಗಣದಲ್ಲಿ ನಡೆದ ಜಿಲ್ಲಾ ನೀರು ಮತ್ತು ನೈರ್ಮಲ್ಯ ಸಮಿತಿ ಸಭೆಯಲ್ಲಿ ಸಿಇಓ ಶೇಖ್ ತನ್ವೀರ್ ಆಸಿಫ್ ಈ ಯೋಜನೆಗೆ ಅನುಮೋದನೆ ನೀಡಿದರು.

ಕೆ.ಆರ್.ಪೇಟೆ ತಾಲೂಕಿನಲ್ಲಿ ಕೊಟಗಹಳ್ಳಿ, ಹೆಮ್ಮಡಹಳ್ಳಿ, ಹಂಗರಮುದ್ದನಹಳ್ಳಿ, ತೊಳಸಿ ಗೇಟ್, ಸಾಸಲು, ಸಾಸಲುಕೊಪ್ಪಲು, ಮುರುಕನಹಳ್ಳಿ ಮತ್ತು ಮಾದಾಪುರ ಗ್ರಾಮಗಳಲ್ಲಿ ಕೊಳವೆ ಬಾವಿ ಕೊರೆಯುವ ಕಾಮಗಾರಿ, ನಾಗರಘಟ್ಟ ಗ್ರಾಮದಲ್ಲಿ ಹಾಲಿ ಇರುವ ಕೊಳವೆ ಬಾವಿಯನ್ನು ರೀಡ್ರಿಲ್ ಮಾಡುವ ಕಾಮಗಾರಿ, ನಾಯಕನಹಳ್ಳಿ ಗ್ರಾಮದಲ್ಲಿ ರೈಸಿಂಗ್ ಮೈನ್ ಪೈಪ್‌ಲೈನ್ ಅಳವಡಿಸುವ ಕಾಮಗಾರಿಗೆ ಒಟ್ಟು 15 ಲಕ್ಷ ರೂ. ಅಂದಾಜು ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಲಾಯಿತು.

ಮದ್ದೂರು ತಾಲೂಕಿನಲ್ಲಿ ಭಾರತೀನಗರ, ಕೋಡಿದೊಡ್ಡಿ ಗ್ರಾಮದಲ್ಲಿ ಕೊಳವೆ ನೀರು ಸರಬರಾಜು ಯೋಜನೆ ಸುಧಾರಣೆ ಕಾಮಗಾರಿ, ಮಹನವಮಿದೊಡ್ಡಿ ಗ್ರಾಮದಲ್ಲಿ ಹಾಲಿ ಕೊರೆದಿರುವ ಕೊಳವೆ ಬಾವಿಯಿಂದ ಮೇಜರ್ ಟ್ಯಾಂಕ್‌ವರೆಗೆ ಪೈಪ್‌ಲೈನ್ ಕಾಮಗಾರಿ, ಡಿ.ಮಲ್ಲಿಗೆರೆ ಗ್ರಾಮದಲ್ಲಿ ಕೊಳವೆ ನೀರು ಸರಬರಾಜು ಯೋಜನೆಗೆ ಕೊಳವೆಬಾವಿ ಕೊರೆದು ಪೈಪ್‌ಲೈನ್ ಅಳವಡಿಸುವ ಕಾಮಗಾರಿಗೆ ಒಟ್ಟು 14.28 ಲಕ್ಷರೂ. ಅಂದಾಜು ಮೊತ್ತದ ಕಾಮಗಾರಿಗೆ ಒಪ್ಪಿಗೆ ಕೊಡಲಾಯಿತು.

ಪಾಂಡವಪುರ ತಾಲೂಕಿನಲ್ಲಿ ನಾರ್ತ್ ಬ್ಯಾಂಕ್, ಹೊಸಯರಗನಹಳ್ಳಿ, ಮಾಣಿಕ್ಯನಹಳ್ಳಿ, ಶಂಭೂನಹಳ್ಳಿ, ಕಾಡೇನಹಳ್ಳಿ, ಕಟ್ಟೇರಿ, ಲಕ್ಷ್ಮಿಸಾಗರ, ಬಳ್ಳಾಳೆ, ಸಿಂಗಾಪುರ, ನಾರಣಾಪುರ, ಮೇಲುಕೋಟೆ ಗ್ರಾಮಗಳಲ್ಲಿ ಒಟ್ಟು 14 ಲಕ್ಷ ರೂ ಅಂದಾಜು ಮೊತ್ತದಲ್ಲಿ ಕೊಳವೆ ಬಾವಿ ಕೊರೆಯುವ ಕಾಮಗಾರಿಗೆ ಅನುಮೋದನೆ ನೀಡಲಾಯಿತು.

ಮಳವಳ್ಳಿ ತಾಲೂಕಿನಲ್ಲಿ ಕ್ಯಾತನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಕೊರೆದಿರುವ ಕೊಳವೆ ಬಾವಿಯಿಂದ ಓ.ಹೆಚ್.ಟಿವರೆಗೆ ಏರು ಕೊಳವೆ ಮಾರ್ಗ ಅಳವಡಿಸುವ ಕಾಮಗಾರಿ, ಹೊಸಪುರ, ರಾಮಂದೂರು, ಜೂಗನಹಳ್ಳಿ, ಕಿರುಗಾವಲು ಮತ್ತು ಮಾರಗೌಡನಹಳ್ಳಿ ಗ್ರಾಮಗಳಲ್ಲಿ ಕೊಳವೆ ಬಾವಿ ಕೊರೆಯುವುದು, ಬಸವನಹಳ್ಳಿ ಮತ್ತು ಹೊಸದೊಡ್ಡಿ ಗ್ರಾಮದಲ್ಲಿ ಕಿರು ನೀರು ಸರಬರಾಜು ಯೋಜನೆಗೆ ಕೊಳವೆ ಬಾವಿ ಕೊರೆಯುವುದು ಒಟ್ಟು 14 ಲಕ್ಷ ರೂ ಅಂದಾಜು ಮೊತ್ತದ ಕಾಮಗಾರಿಗೆ ಒಪ್ಪಿಗೆ ಕೊಡಲಾಯಿತು.

ಶ್ರೀರಂಗಪಟ್ಟಣ ತಾಲೂಕಿನಲ್ಲಿ ಗಾಮನಹಳ್ಳಿ, ವೇಳಾಪುರ ಗ್ರಾಮದಲ್ಲಿ ಕುಡಿಯುವ ನೀರಿನ ಪುನಶ್ಚೇತನ ಕಾಮಗಾರಿ, ಕೊಡಿಯಾಲ, ಬೆಳವಾಡಿ ಗ್ರಾಮ ಪರಿಮಿತಿಯಲ್ಲಿ ಕೊಳವೆಬಾವಿ ಕೊರೆಯುವ ಕಾಮಗಾರಿ, ತಡಗವಾಡಿ ಗ್ರಾಮದಲ್ಲಿ ಹೊಸದಾಗಿ ಕೊರೆದ ಕೊಳವೆ ಬಾವಿಗೆ ಪಂಪ್ ಮೋಟಾರ್ ಅಳವಡಿಸುವ ಕಾಮಗಾರಿ, ದೊಡ್ಡಹಾರೋಹಳ್ಳಿ ಗ್ರಾಮದಲ್ಲಿ ಕೊಳವೆಬಾವಿ ಕೊರೆಯುವ ಹಾಗೂ ಪೈಪ್‌ಲೈನ್ ಕಾಮಗಾರಿಗೆ ಒಟ್ಟು 14 ರೂ ಲಕ್ಷ ಅಂದಾಜು ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಲಾಯಿತು.

ಬಳಿಕ ಮಾತನಾಡಿಸಿ ಸಿಇಓ ಆಸೀಫ್, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ನಿರ್ವಹಿಸುವ ಕೆಲವು ಟೆಂಡರ್‌ದಾರರು ಸರಿಯಾಗಿ ನಿರ್ವಹಿಸುತ್ತಿಲ್ಲ ಹಾಗೂ ಅವರಿಗೆ ಈಗಾಗಲೇ ನೋಟಿಸ್ ಜಾರಿ ಮಾಡಲಾಗಿದ್ದು, ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ ಎಂದು ಸಭೆಯಲ್ಲಿ ಚರ್ಚಿಸಿದಾಗ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಎಲ್ಲಾ ಶುದ್ಧ ಕುಡಿಯುವ ನೀರಿನ ಟೆಂಡರ್‌ದಾರರನ್ನು ಕರೆದು ಸಭೆ ನಡೆಸಿ ಸೂಚನೆ ನೀಡಲಾಗುವುದು. ಘಟಕಗಳನ್ನು ಸರಿಯಾಗಿ ನಿರ್ವಹಿಸದಿದ್ದಲ್ಲಿ ಕಪ್ಪುಪಟ್ಟಿಗೆ ಸೇರಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಅಭಿಯಂತರರಾದ ತಮ್ಮಣ್ಣ, ಜಿಲ್ಲಾ ವಾರ್ತಾ ಮತ್ತು ಪ್ರಚಾರ ಅಧಿಕಾರಿ ಎಸ್.ಹೆಚ್.ನಿರ್ಮಲಾ ಹಾಗೂ ಎಲ್ಲಾ ತಾಲೂಕಿನ ಸಹಾಯಕ ಕಾರ್ಯಪಾಲಕ ಎಂಜಿನಿಯರ್ (ಕುಡಿಯುವ ನೀರು)ಗಳು ಹಾಜರಿದ್ದರು.

ವಿದ್ಯಾರ್ಥಿ ನಾಪತ್ತೆ

ಪಾಂಡವಪುರ, ಜು.20– ಹಾಸ್ಟೆಲ್‌ಗೆ ಹೋಗುವುದಾಗಿ ತಿಳಿಸಿ ಮನೆಯಿಂದ



ಹೊರಟ ವಿದ್ಯಾರ್ಥಿ ನಾಪತ್ತೆಯಾದ ಬಗ್ಗೆ ತಾಲೂಕಿನ ಗೌಡಗೆರೆ ಗ್ರಾಮದಿಂದ ವರದಿಯಾಗಿದೆ.

ಈ ಗ್ರಾಮದ ಮಹೇಶ್ ಹಾಗೂ ಪವಿತ್ರ ದಂಪತಿಯ ಪುತ್ರ ಪ್ರೇಮ್‌ಕುಮಾರ್(16) ನಾಪತ್ತೆಯಾದವನಾಗಿದ್ದು, ಈತ ತಾಲೂಕಿನ ಮೂಡಲಕೊಪ್ಪಲು ಸರಕಾರಿ ಪ್ರೌಢಶಾಲೆಯಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡಿಕೊಂಡು ಅಲ್ಲಿಯೇ ಹಾಸ್ಟೆಲ್‌ನಲ್ಲಿ ವಾಸ್ತವ್ಯವಿದ್ದ. ಜುಲೈ 3ರಂದು ಬೆಳಗ್ಗೆ ಹಾಸ್ಟೆಲ್‌ಗೆ ಹೋಗುವುದಾಗಿ ಮನೆಯಿಂದ ಹೊರಟಿದ್ದಾನೆ. ಮನೆಯವರು ಹಾಸ್ಟೆಲ್‌ಗೆ ಹೋಗಿರಬಹುದು ಎಂದು ಭಾವಿಸಿದ್ದರು. ಜುಲೈ 6ರಂದು ಮನೆಯಲ್ಲಿ ಪೂಜೆ ಇದ್ದ ಕಾರಣ ಪ್ರೇಮ್‌ಕುಮಾರ್ ಪೋಷಕರು ಹಾಸ್ಟೆಲ್‌ಗೆ ದೂರವಾಣಿ ಮೂಲಕ ಕರೆ ಮಾಡಿ ಮಗನನ್ನು ಕಳುಹಿಸಿಕೊಡಿ ಎಂದು ಕೇಳಿಕೊಂಡಾಗ ಆತ ಹಾಸ್ಟೆಲ್‌ಗೆ ಹೋಗದೇ ಇರುವ ವಿಚಾರ ತಿಳಿದು, ಈತನ ತಾಯಿ ಪವಿತ್ರ ಅವರು ಮೇಲುಕೋಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಈತ ಎಲ್ಲಾದರೂ ಕಂಡುಬಂದಲ್ಲಿ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವಂತೆ ಪೊಲೀಸ್ ಪ್ರಕಟಣೆ ಕೋರಿದೆ

ಸಾರಿಗೆ ಬಸ್ ನಿಲುಗಡೆಗೆ ಆಗ್ರಹಿಸಿ ವಿದ್ಯಾರ್ಥಿಗಳಿಂದ ರಸ್ತೆ ತಡೆ

ಪಾಂಡವಪುರ, ಜು.20– ಕೆಎಸ್‌ಆರ್‌ಟಿಸಿ ಬಸ್ ನಿಲುಗಡೆಗೆ ಆಗ್ರಹಿಸಿ ಶಾಲಾ ವಿದ್ಯಾರ್ಥಿಗಳು ತಾಲೂಕಿನ ಕೋಡಳ್ಳಿ ಹೊಸೂರು ಗ್ರಾಮದ ಗೇಟ್ ಬಳಿ ಶ್ರೀರಂಗಪಟ್ಟಣ–ಬೀದರ್ ಮುಖ್ಯರಸ್ತೆ ತಡೆದು ಪ್ರತಿಭಟನೆ ನಡೆಸಿದರು.

ಕೋಡಳಿ ಹೊಸೂರು ಗೇಟ್ ಬಳಿ ಶ್ರೀರಂಗಪಟ್ಟಣ–ಬೀದರ್ ಮುಖ್ಯರಸ್ತೆಗೆ ಮರದ ತುಂಡುಗಳು ಹಾಗೂ ಕಲ್ಲುಗಳನ್ನು ಇಟ್ಟು ರಸ್ತೆ ತಡೆದು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಪ್ರತಿಭಟನೆ ನಡೆಸಿ ಕೆಎಸ್‌ಆರ್‌ಟಿಸಿ ಅಧಿಕಾರಿಗಳು, ಬಸ್ ಡ್ರೈವರ್‌ಗಳ ವಿರುದ್ಧ ಆಕ್ರೋಶ ಹೊರಹಾಕಿದರು.

ನಾಗಮಂಗಲ, ಜಕ್ಕನಹಳ್ಳಿ ಕಡೆಯಿಂದ ಪಾಂಡವಪುರ ಪಟ್ಟಣಕ್ಕೆ ಬರುವಂತಹ ಕೆಎಸ್‌ಆರ್‌ಟಿಸಿ ಬಸ್‌ಗಳು ತಾಲೂಕಿನ ಕೆ.ಹೊಸೂರು ಗೇಟ್ ಬಳಿ ನಿಲ್ಲಿಸುತ್ತಿಲ್ಲ.



ಇದರಿಂದಾಗಿ ಪಟ್ಟಣಕ್ಕೆ ಶಾಲಾ–ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ರಸ್ತೆಯಲ್ಲಿ ನಿತ್ಯ ಸಾಕಷ್ಟು ಸಾರಿಗೆ ಬಸ್‌ಗಳು ಓಡಾಡುತ್ತವೆ, ಕೆ.ಹೊಸೂರು ಗೇಟ್ ಬಳಿ ವಿದ್ಯಾರ್ಥಿಗಳು, ಸಾರ್ವಜನಿಕರು ನಿಲುಗಡೆಗೆ ಕೈ ತೋರಿದರು ಸಹ ಬಸ್‌ಗಳನ್ನು ನಿಲ್ಲಿಸದೆ ಹಾಗೆಯೇ ಹೋಗುತ್ತಾರೆ. ಇದರಿಂದ ನಿತ್ಯ ಶಾಲೆಗೆ ಹೋಗುವ ವಿದ್ಯಾರ್ಥಿಗಳು ತಡವಾಗಿ ಹೋಗುತ್ತಿದ್ದು ಅವರ ಶಿಕ್ಷಣಕ್ಕೆ ಹೊಡೆತ ಬೀಳುತ್ತಿದೆ ಎಂದು ಕಿಡಿಕಾರಿದರು.

ಸಾರಿಗೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಸಮಸ್ಯೆ ಬಗೆಹರಿಸುವವರೆಗೂ ಪ್ರತಿಭಟನೆ ನಡೆಸುತ್ತೇವೆ ಎಂದು ಪಟ್ಟು ಹಿಡಿದರು.

ಬಳಿಕ ಕೆಎಸ್‌ಆರ್‌ಟಿಸಿ ಡಿಪೋ ವ್ಯವಸ್ಥಾಪಕ ಅಪ್ಪಿರೆಡ್ಡಿ ಸ್ಥಳಕ್ಕೆ ಆಗಮಿಸಿ ಗ್ರಾಮದ ಯಜಮಾನರು, ವಿದ್ಯಾರ್ಥಿಗಳ ಜತೆ ಚರ್ಚಿಸಿ ಮನವೊಲಿಸಿದರು. ಸ್ಥಳೀಯರು, ಶಾಸಕರೊಂದಿಗೆ ದೂರವಾಣಿ ಮೂಲಕ ಚರ್ಚಿಸಿದ ಬಳಿಕ ಸಾರಿಗೆ ಅಧಿಕಾರಿಗಳು ಕೆ.ಹೊಸೂರು ಗೇಟ್ ಬಳಿ ನಿಲುಗಡೆಗೆ ಕ್ರಮ ಜರುಗಿಸುತ್ತೇವೆ ಎಂದು ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಕೆ.ಹೊಸೂರು ಗ್ರಾಮದ ಯಜಮಾನರಾದ ಕಾಳೇಗೌಡ, ನಾಗಣ್ಣ, ಗ್ರಾಪಂ ಅಧ್ಯಕ್ಷ ಮಧು, ರಘು, ವಿದ್ಯಾರ್ಥಿಗಳಾದ ನವೀನ್, ಯಶಸ್ವಿನಿ, ಗುಂಡಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿದ್ದ ಕಾಮುಕನಿಗೆ 10 ವರ್ಷ ಜೈಲು

ಮಂಡ್ಯ, ಜು.20–ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಕಾಮುಕನಿಗೆ ಹತ್ತು ವರ್ಷ ಜೈಲು ಶಿಕ್ಷೆ ಹಾಗೂ 51 ಸಾವಿರ ರೂ. ದಂಡ ವಿಧಿಸಿ ಜಿಲ್ಲಾ ಅಧಿಕ ಸತ್ರ ಮತ್ತು ತ್ವರಿತಗತಿ ಎರಡನೇ ನ್ಯಾಯಾಲಯದ ವಿಶೇಷ ನ್ಯಾಯಾಧೀಶರಾದ ಶ್ರೀಮತಿ ಕೆ.ಎ.ನಾಗಜ್ಯೋತಿ ತೀರ್ಪು ನೀಡಿದ್ದಾರೆ.

ಕೆ.ಆರ್.ಪೇಟೆ ತಾಲೂಕಿನ ಜಿ.ಆರ್. ಮಂಜುನಾಥ ಅಲಿಯಾಸ್ ಮಂಜ ಎಂಬಾತನೇ ಶಿಕ್ಷೆಗೆ ಗುರಿಯಾದವನಾಗಿದ್ದು, 2017ರಲ್ಲಿ ಈತ ಹೀರೊಹೋಂಡಾ ಸ್ಪ್ಲೆಂಡರ್ ಬೈಕ್‌ನಲ್ಲಿ ಕೆ.ಆರ್.ಪೇಟೆ ತಾಲೂಕು ಕೈಗೊಂಗನಹಟ್ಟಿ ಮುಖ್ಯ ರಸ್ತೆಯಲ್ಲಿ ತೆರಳುತ್ತಿದ್ದಾಗ ತನ್ನ ಅಜ್ಜಿ ಊರಿಗೆ ನಡೆದುಕೊಂಡು ಹೋಗುತ್ತಿದ್ದ 17 ವರ್ಷದ ಅಪ್ರಾಪ್ತ ಬಾಲಕಿಯನ್ನು ಊರಿಗೆ ಕರೆದೊಯ್ದು ಬಿಡುವುದಾಗಿ ಬೈಕ್‌ನಲ್ಲಿ ಹತ್ತಿಸಿಕೊಂಡಿದ್ದಾನೆ. ಈ ಮಧ್ಯೆ ಸ್ನೇಹಿತನ ಮನೆಗೆ ಹೋಗಿ ಬರೋಣ ಎಂದು ಹೇಳಿ ಆಕೆಯನ್ನು ಮೇಲುಕೋಟೆ ರಸ್ತೆಯಲ್ಲಿನ ವಸಂತಮರ ಅರಣ್ಯ ಪ್ರದೇಶಕ್ಕೆ ಕರೆದೊಯ್ದು ಅತ್ಯಾಚಾರವೆಸಗಿದ್ದಲ್ಲದೇ ಈ ವಿಷಯವನ್ನು ಯಾರಿಗಾದರೂ ಹೇಳಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ.

ಈ ಸಂಬಂಧ ಕೆ.ಆರ್.ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಠಾಣೆಯ ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಹೆಚ್.ಬಿ.ವೆಂಕಟೇಶಯ್ಯ ತನಿಖೆ ನಡೆಸಿ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಧೀಶರು ಮಂಜನಿಗೆ ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ವಿಶೇಷ ಅಭಿಯೋಜಕರಾದ ಹೆಬ್ಬಕವಾಡಿ ನಾಗರಾಜು ವಾದ ಮಂಡಿಸಿದ್ದರು.

ಇಂದು ನೇರ ಸಂದರ್ಶನ

ಮಂಡ್ಯ, ಜು.20– ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಮೆ॥ ನಿವರಾ ಹೋಂ ಫೈನಾನ್ಸ್ ಲಿ., ಇವರು ಶ್ರೀರಂಗಪಟ್ಟಣ, ಮಂಡ್ಯ ಹಾಗೂ ಮದ್ದೂರು ತಾಲೂಕುಗಳಲ್ಲಿ ಕಾರ್ಯ ನಿರ್ವಹಿಸಲು ಎಸ್‌ಎಸ್‌ಎಲ್‌ಸಿ (ಉತ್ತೀರ್ಣ ಹಾಗೂ ಅನುತ್ತೀರ್ಣ) ಮೇಲ್ಪಟ್ಟು ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ಜು.21 ರಂದು ಬೆಳಗ್ಗೆ 10 ಗಂಟೆಗೆ ಮಂಡ್ಯ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ನೇರ ಸಂದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಿವರಗಳಿಗಾಗಿ ದೂ.ಸಂ: 8217803781, 08232–295124 ಅನ್ನು ಸಂಪರ್ಕಿಸಬಹುದಾಗಿದೆ.

ಕೆ.ಆರ್.ಪೇಟೆಯಲ್ಲಿ ಗೃಹಲಕ್ಷ್ಮಿ ನೋಂದಣಿಗೆ ಚಾಲನೆ



ಕೆ.ಆರ್.ಪೇಟೆ, ಜು.20– ಗೃಹಲಕ್ಷ್ಮಿ ಯೋಜನೆಯ ಪುರಸಭಾ ವ್ಯಾಪ್ತಿಯ ನೋಂದಣಿ ಕೇಂದ್ರಗಳಿಗೆ ಪುರಸಭಾ ಮುಖ್ಯಾಧಿಕಾರಿ ಬಸವರಾಜು ಚಾಲನೆ.

ಕೆ.ಆರ್.ಪೇಟೆ ಪುರಸಭಾ ವ್ಯಾಪ್ತಿಯ ಶಹರಿ ರೋಜ್ಗಾರ್ ಯೋಜನಾ ಭವನ, ಹೇಮಾವತಿ ಜಲಾಶಯ ಯೋಜನಾ ಕಚೇರಿ ಹಾಗೂ ಕೆ.ಆರ್.ಪೇಟೆ ಪುರಸಭಾ ವ್ಯಾಪ್ತಿಯ ಹೊಸಹೊಳಲು ಗ್ರಾಮದ ಪ್ರೌಢಶಾಲಾ ಆವರಣ ಕೊಠಡಿಯಲ್ಲಿ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಹೆಸರು ನೋಂದಣಿಗೆ ಸೇವಾ ಕೇಂದ್ರಗಳನ್ನು ಆರಂಭಿಸಿದ್ದು ಆಯ್ದ ಫಲಾನುಭವಿಗಳು ತಮ್ಮ ಮೊಬೈಲ್ ಫೋನ್‌ಗೆ ಬಂದಿರುವ ಎಸ್.ಎಮ್.ಎಸ್ ಮೆಸೇಜ್ ಪ್ರಕಾರ ಸಮೀಪದ ನೋಂದಣಿ ಕೇಂದ್ರದಲ್ಲಿ ಉಚಿತವಾಗಿ ಕುಟುಂಬದ ಯಜಮಾನಿಯ ಹೆಸರನ್ನು ನೋಂದಾಯಿಸಬೇಕು ಎಂದು ಪುರಸಭೆಯ ಮುಖ್ಯ ಅಧಿಕಾರಿ ಬಸವರಾಜು ಮನವಿ ಮಾಡಿದರು.

8147500500 ಮೊಬೈಲ್ ಸಂಖ್ಯೆಗೆ ಪಡಿತರ ಚೀಟಿಯ ಸಂಖ್ಯೆಯನ್ನು ಎಸ್‌ಎಂಎಸ್ ಮಾಡಿದಾಗ ಸಮೀಪದ ಯಾವ ಸೇವಾ ಕೇಂದ್ರಕ್ಕೆ ಹೋಗಿ ನಿಮ್ಮ ಹೆಸರನ್ನು ನೋಂದಾಯಿಸಬೇಕು ಎಂದು ಸಂದೇಶ ಬರುತ್ತದೆ. ಈ ಸಂದೇಶದ ಅನ್ವಯ ಪುರಸಭೆಯಿಂದ ನಿಗದಿಪಡಿಸಿರುವ ಸೇವಾ ಕೇಂದ್ರಗಳು ಸೇರಿದಂತೆ ಗ್ರಾಮ ಒನ್, ಬಾಪೂಜಿ ಸೇವಾ ಕೇಂದ್ರ, ಕರ್ನಾಟಕ ಒನ್ ಕೇಂದ್ರಗಳಿಗೆ ತೆರಳಿ ಗೃಹಲಕ್ಷ್ಮಿ ಯೋಜನೆಯಡಿ ಯಜಮಾನಿಯು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ಹೇಳಿದರು.

ಗೃಹಲಕ್ಷ್ಮಿ ಯೋಜನೆಗೆ ತಮ್ಮ ಹೆಸರನ್ನು ನೋಂದಾಯಿಸಲು ಆಗಮಿಸುವ ಫಲಾನುಭವಿಗಳು ನಿಮ್ಮ ಹಾಗೂ ನಿಮ್ಮ ಪತಿಯ ಆಧಾರ್ ಕಾರ್ಡ್‌ಗಳು, ಬ್ಯಾಂಕ್ ಪಾಸ್ ಪುಸ್ತಕ, ಪಡಿತರ ಚೀಟಿ ಹಾಗೂ ಆಧಾರ್ ಕಾರ್ಡಿಗೆ ಲಿಂಕ್ ಆಗಿರುವ ಮೊಬೈಲ್ ಫೋನನ್ನು ತೆಗೆದುಕೊಂಡು ಬಂದು ತಮ್ಮ ಹೆಸರನ್ನು ನೋಂದಾಯಿಸಬೇಕು ಎಂದು ಬಸವರಾಜು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಪುರಸಭೆ ಅಧ್ಯಕ್ಷೆ ಮಹಾದೇವಿ ನಂಜುಂಡ, ಪುರಸಭಾ ಕಚೇರಿಯ ವ್ಯವಸ್ಥಾಪಕ ಸೋಮಶೇಖರ್, ಕಂದಾಯಾಧಿಕಾರಿ ರವಿಕುಮಾರ್, ಸ್ವರ್ಣ ಜಯಂತಿ ಶಹರಿ ರೋಜ್ಗಾರ್ ಯೋಜನಾಧಿಕಾರಿ ಭಾರತಿ ಅನಂತ ಶಯನ, ಕಂಪ್ಯೂಟರ್ ಆಪರೇಟರ್ ರಶ್ಮಿ, ಹಾಗೂ ಪುರಸಭಾ ಕಚೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಬಾಗ್ಮತಿ ಎಕ್ಸ್‌ಪ್ರೆಸ್ ರೈಲುಗಳ ಮಾರ್ಗ ಬದಲಾವಣೆ

ಮೈಸೂರು,ಜು.20(ಪಿಎಂ)– ಬಿಹಾರದ ಕಿಶನ್‌ಪುರ್ ಮತ್ತು ರಾಮ್‌ಭದ್ದರಪುರ್ ರೈಲು ನಿಲ್ದಾಣಗಳ ನಡುವೆ ಜೋಡಿ ಹಳಿ ನಿರ್ಮಾಣ ಕಾಮಗಾರಿ ಹಿನ್ನೆಲೆಯಲ್ಲಿ ಬಾಗ್ಮತಿ ಎಕ್ಸ್‌ಪ್ರೆಸ್ ರೈಲುಗಳ ಸಂಚಾರದಲ್ಲಿ ಮಾರ್ಗ ಬದಲಾವಣೆ ಮಾಡಲಾಗಿದೆ.

ಮೈಸೂರು–ದರ್ಭಂಗಾ ಬಾಗ್ಮತಿ ಸಾಪ್ತಾಹಿಕ ಸೂಪರ್‌ಫಾಸ್ಟ್ (12578) ಎಕ್ಸ್‌ಪ್ರೆಸ್ ರೈಲು ಜು.21ರಂದು ಮೈಸೂರು ನಿಲ್ದಾಣದಿಂದ ಹೊರಡಲಿದ್ದು, ಈ ರೈಲು ಸಮಸ್ತಿಪುರ್, ಮುಜಫರ್‌ಪುರ, ಸೀತಾಮರಿ ಮತ್ತು ದರ್ಭಾಂಗ ಜಂಕ್ಷನ್‌ಗಳ ಮೂಲಕ ಸಂಚರಿಸಲಿದೆ. ಜು.25ರಂದು ದರ್ಭಂಗಾ ನಿಲ್ದಾಣದಿಂದ ದರ್ಭಂಗಾ–ಮೈಸೂರು ಬಾಗ್ಮತಿ ಸಾಪ್ತಾಹಿಕ ಸೂಪರ್‌ಫಾಸ್ಟ್ (12577) ಎಕ್ಸ್‌ಪ್ರೆಸ್ ರೈಲು ಹೊರಡಲಿದ್ದು, ಸದರಿ ರೈಲು ದರ್ಭಾಂಗ, ಸೀತಾಮರಿ, ಮುಜಫರ್‌ಪುರ ಮತ್ತು ಸಮಸ್ತಿಪುರ ಜಂಕ್ಷನ್‌ಗಳ ಮೂಲಕ ಸಂಚರಿಸಲಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ಶಂಕಿತ ಉಗ್ರರಿಂದ 4 ಗ್ರೆನೇಡ್ ವಶಕ್ಕೆ

ಖಚಿತಪಡಿಸಿಕೊಳ್ಳಲು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು. ಇನ್ನು ಮಂಗಳವಾರ ಬಂಧಿಸಲಾದ ಐವರು ಭಯೋತ್ಪಾದಕ ಶಂಕಿತರಲ್ಲಿ ಜಾಹಿದ್ ಕೂಡ ಸೇರಿದ್ದಾನೆ. ಈತ 2008ರ ಬೆಂಗಳೂರು ಸರಣಿ ಸ್ಫೋಟ ಪ್ರಕರಣದ ಆರೋಪಿಯಾಗಿರುವ ಲಷ್ಕರ್–ಎ–ತೊಯ್ಬಾ ಕಾರ್ಯಕರ್ತ ಟಿ ನಾಸಿರ್ ಜತೆ ಸಂಪರ್ಕದಲ್ಲಿದ್ದ ಎಂದು ಹೇಳಲಾಗಿದೆ. ಬಂಧಿತ ಶಂಕಿತರಿಂದ ಏಳು ಪಿಸ್ತೂಲ್‌ಗಳು, 45 ಲೈವ್ ಕಾರ್ಟ್ರಿಡ್ಜ್‌ಗಳು ಮತ್ತು ಮೊಬೈಲ್ ಫೋನ್‌ಗಳು ಪತ್ತೆಯಾಗಿವೆ. ಬಂಧಿತ ಶಂಕಿತ ಉಗ್ರರೆಲ್ಲರೂ ಬೆಂಗಳೂರಿನಲ್ಲಿ ದೊಡ್ಡ ಪ್ರಮಾಣದಲ್ಲಿ ಸರಣಿ ಸ್ಫೋಟಕ್ಕೆ ಸಂಚು ರೂಪಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಈ ಶಂಕಿತರನ್ನು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, ಅವರನ್ನು ಏಳು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ದೇಶದಲ್ಲೇ ಶ್ರೀಮಂತ ಶಾಸಕ ಡಿ.ಕೆ.ಶಿವಕುಮಾರ್

ವಿಜಯನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಎಂ. ಕೃಷ್ಣಪ್ಪ(296 ಕೋಟಿ ರೂ.), ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ(293 ಕೋಟಿ ರೂ.) ಟಾಪ್–20ರಲ್ಲಿ ಸ್ಥಾನ ಪಡೆದಿರುವ ಇತರರು.

ಅತಿ ಬಡವ ಶಾಸಕ ಯಾರು?: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ ಹಾಗೂ ನ್ಯಾಷನಲ್ ಎಲೆಕ್ಷನ್ ವಾಚ್(NEW) ಬಿಡುಗಡೆ ಮಾಡಿರುವ ವರದಿಯ ಪ್ರಕಾರ ಅತ್ಯಂತ ಬಡ ಶಾಸಕರ ಪಟ್ಟಿಯಲ್ಲಿ ಪಶ್ಚಿಮ ಬಂಗಾಳದ ಇಂಡಸ್ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ನಿರ್ಮಲ್ ಕುಮಾರ್ ಧಾರಾ ಅವರು ಮೊದಲ ಸ್ಥಾನದಲ್ಲಿದ್ದು, ಅವರ ಆಸ್ತಿ ಮೌಲ್ಯವು 1,700 ರೂಪಾಯಿ ಆಗಿದೆ. ಸುಳ್ಯ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕಿ ಭಾಗೀರಥಿ ಮುರುಳ್ಯರವು ಅತ್ಯಂತ ಬಡ ಶಾಸಕರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದು, ಅವರ ಆಸ್ತಿ ಮೌಲ್ಯವು 30 ಲಕ್ಷ ರೂಪಾಯಿ ಆಗಿದೆ. ಚುನಾವಣೆ ಸಂದರ್ಭದಲ್ಲಿ ಅಭ್ಯರ್ಥಿಗಳು ಆಯೋಗಕ್ಕೆ ಸಲ್ಲಿಸಿರುವ ಮಾಹಿತಿಯನ್ನು ಆಧರಿಸಿ ಈ ವರದಿಯನ್ನು ತಯಾರು ಮಾಡಲಾಗಿದೆ. ದೇಶದಲ್ಲಿ ಒಬ್ಬ ಶಾಸಕನ ಸರಾಸರಿ ಆಸ್ತಿ ಮೌಲ್ಯವು 64.3 ಕೋಟಿ ರೂ ಆಗಿದ್ದು, ದೇಶದಲ್ಲಿ 100 ಕೋಟಿ ರೂ. ಆಸ್ತಿ ಹೊಂದಿರುವ ಶಾಸಕರ ಪೈಕಿ ಕರ್ನಾಟಕದವರೇ ಶೇ. 14ರಷ್ಟು ಇದ್ದಾರೆ ಎಂದು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್(ADR) ಹಾಗೂ ನ್ಯಾಷನಲ್ ಎಲೆಕ್ಷನ್ ವಾಚ್(NEW) ಬಿಡುಗಡೆ ಮಾಡಿರುವ ವರದಿಯಲ್ಲಿ ಉಲ್ಲೇಖಿಸಿದೆ.

ತಪ್ಪಿತಸ್ಥರ ಬಿಡುವುದಿಲ್ಲ: ಮೋದಿ ಆಕ್ರೋಶ

ಸಿಟ್ಟಿನಿಂದ ಕುದಿಯುತ್ತಿದೆ. ನಮ್ಮ ಮುಂದೆ ಬಂದಿರುವ ಮಣಿಪುರದ ಘಟನೆ ಸಮಾಜಕ್ಕೆ ನಾಚಿಕೆಗೇಡಿನ ಸಂಗತಿಯಾಗಿದೆ. ಆಯಾ ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಕಾನೂನು ಸುವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬೇಕೆಂದು ನಾನು ಒತ್ತಾಯಿಸುತ್ತೇನೆ– ವಿಶೇಷವಾಗಿ ಮಹಿಳೆಯರ ಸುರಕ್ಷತೆಗಾಗಿ ಬಲವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು. ಅದು ರಾಜಸ್ಥಾನ, ಮಣಿಪುರ, ಛತ್ತೀಸ್‌ಗಢದಲ್ಲಿ ಅಥವಾ ದೇಶದ ಯಾವುದೇ ಮೂಲೆಯಲ್ಲಿ ಯಾವುದೇ ಘಟನೆಯಾಗಿರಲಿ, ರಾಜಕೀಯದಿಂದ ಹೊರಬಂದು ಸುಸಂಸ್ಕೃತ ಸಮಾಜ ನಿರ್ಮಾಣಕ್ಕೆ ನಾವೆಲ್ಲರೂ ಮುಂದಾಗಬೇಕಿದೆ ಎಂದರು.

ಮುಂಗಾರು ಅಧಿವೇಶನಕ್ಕೆ ಸಹಕಾರ ನೀಡಿ: ಮುಂಗಾರು ಅಧಿವೇಶನದುದ್ದಕ್ಕೂ ಎಲ್ಲಾ ಪಕ್ಷಗಳ ಸದಸ್ಯರು ಸದನದಲ್ಲಿ ಫಲಪ್ರದ ಚರ್ಚೆ ನಡೆಸಿ ಕಲಾಪ ಸುಗಮವಾಗಿ ಸಾಗುವಂತೆ ಸಹಕಾರ ನೀಡಿ, ದೇಶದ ಜನರ ಹಿತಾಸಕ್ತಿಗೆ ಪೂರಕವಾದ ಚರ್ಚೆಗಳಲ್ಲಿ ತೊಡಗಿ ಮಸೂದೆಯನ್ನು ಅಂಗೀಕರಿಸಲು ಸಹಕಾರ ನೀಡುವಂತೆ ಇದೇ ಸಂದರ್ಭದಲ್ಲಿ ಸದನ ಸದಸ್ಯರನ್ನು ಪ್ರಧಾನಿ ಮೋದಿ ಕೇಳಿಕೊಂಡರು.

ಜು.23ರಂದು ಮುದ್ದುರಾಮ ಪ್ರಶಸ್ತಿ, ಪುರಸ್ಕಾರ ಪ್ರದಾನ; ಕೃತಿಗಳ ಲೋಕಾರ್ಪಣೆ

ವಾಗ್ಮಿ–ಚಿಂತಕ ಹಿರೇಮಗಳೂರು ಕಣ್ಣನ್, ಚೌಪದಿ ರಚನಕಾರ ಎಂ.ಮುತ್ತುಸ್ವಾಮಿ ಭಾಜನ

ಮೈಸೂರು,ಜು.20(ಪಿಎಂ)– ಮುದ್ದುರಾಮ ಪ್ರತಿಷ್ಠಾನ ಮೈಸೂರು ವತಿಯಿಂದ ಜು.23ರಂದು 'ಮುದ್ದುರಾಮ ಪ್ರಶಸ್ತಿ ಮತ್ತು ಪುರಸ್ಕಾರ (2023)' ಪ್ರದಾನ ಹಾಗೂ ಕೃತಿಗಳ ಲೋಕಾರ್ಪಣೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಅಂದು ಸಂಜೆ 4.15ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನಿಧ್ಯದಲ್ಲಿ ಸಮಾರಂಭ ನಡೆಯಲಿದೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ಕಲೆ, ಮೌಲ್ಯಾಧಾರಿತ ಶಿಕ್ಷಣ ಮೊದಲಾದವುಗಳಲ್ಲಿ, ವಿಶೇಷವಾಗಿ ಚೌಪದಿ ಮತ್ತು ತ್ರಿಪದಿ ಸಾಹಿತ್ಯ ಪ್ರಸಾರದಲ್ಲಿ ಗಣನೀಯ ಸೇವೆ ಸಲ್ಲಿಸಿ, ಸಮಾಜ ಮತ್ತು ಸಂಸ್ಕೃತಿ ವರ್ಧನೆಗಾಗಿ ಕಾರ್ಯನಿರ್ವಹಿಸುವ ಮಹನೀಯರಿಗೆ ಪ್ರತಿಷ್ಠಾನವು ಪ್ರತಿವರ್ಷ ಈ ಪ್ರಶಸ್ತಿ ಮತ್ತು ಪುರಸ್ಕಾರ ನೀಡಿ ಗೌರವಿಸುತ್ತಿದೆ.


ಅಂತೆಯೇ ಈ ಬಾರಿ ಕನ್ನಡ ಪೂಜಾರಿ,



ಚಿಂತಕ ಹಿರೇಮಗಳೂರು ಕಣ್ಣನ್

ವಾಗ್ಮಿ–ಚಿಂತಕ ಹಿರೇಮಗಳೂರು ಕಣ್ಣನ್ ಅವರಿಗೆ 50 ಸಾವಿರ ರೂ. ಗೌರವಧನ ಮತ್ತು ಫಲಕದೊಂದಿಗೆ 'ಮುದ್ದುರಾಮ ಪ್ರಶಸ್ತಿ' ಪ್ರದಾನ ಮಾಡಲಾಗುತ್ತಿದೆ. ಜೊತೆಗೆ ಚೌಪದಿ ರಚನಕಾರ ಎಂ. ಮುತ್ತುಸ್ವಾಮಿ ಅವರಿಗೆ 25 ಸಾವಿರ ರೂ. ಗೌರವಧನ ಮತ್ತು ಫಲಕದೊಂದಿಗೆ 'ಮುದ್ದುರಾಮ ಪುರಸ್ಕಾರ' ನೀಡಿ ಗೌರವಿಸಲಾಗುತ್ತಿದೆ. ಮುಖ್ಯ ಅತಿಥಿಗಳಾಗಿ ಅಂಕಣಕಾರ ಡಾ.ಗುರುರಾಜ ಕರಜಗಿ, ಸಾಹಿತಿ ಮತ್ತು ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಪಾಲ್ಗೊಳ್ಳಲಿದ್ದು, ಹಿರಿಯ ವಿದ್ವಾಂಸ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಹಿರೇಮಗಳೂರು ಕಣ್ಣನ್ ಅವರ 'ಮುದ್ದುರಾಮ ಲಹರಿ' ಹಾಗೂ ಶ್ವೇತಾ ಪ್ರಕಾಶ್ ಅವರ 'ಪದ್ಮ ಪಲ್ಲವ (ಚೌಪದಿಗಳ ಸಂಕಲನ)' ಕೃತಿಗಳು ಬಿಡುಗಡೆಯಾಗಲಿವೆ.

ಹಿರೇಮಗಳೂರು ಕಣ್ಣನ್ ಪರಿಚಯ: ಕನ್ನಡದ ಪೂಜಾರಿ ಎಂದೇ ಖ್ಯಾತರಾದ ಹಿರೇಮಗಳೂರು ಕಣ್ಣನ್ ಕನ್ನಡವನ್ನು ವ್ರತವಾಗಿಸಿಕೊಂಡ ಅಪ್ರತಿಮ ವಾಗ್ಮಿ. ದೂರದರ್ಶನ, ರೇಡಿಯೋ ಕಾರ್ಯಕ್ರಮಗಳ ಮೂಲಕ ಕನ್ನಡ ನಾಡಿನಲ್ಲಿ ಮಾತ್ರವಲ್ಲದೆ, ದೇಶ–ವಿದೇಶಗಳಲ್ಲಿಯೂ ಮನ್ನಣೆ ಗಳಿಸಿದವರು. ಇವರ ಮನೆಯ ಭಾಷೆ ತಮಿಳು, ನೆಲೆ ನಿಂತ ನೆಲದ ಭಾಷೆ ಕನ್ನಡ. ವೇದೋಪನಿಷತ್ತುಗಳ ಅಧ್ಯಯನಕ್ಕೆ ಸಂಸ್ಕೃತ ಕಲಿತ ಅವರು, ಜನ ಸಂಪರ್ಕಕ್ಕಾಗಿ ಇಂಗ್ಲಿಷ್, ಹಿಂದಿ ಭಾಷೆಗಳಲ್ಲಿ ಪರಿಣಿತಿ ಸಾಧಿಸಿದರು. ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ,



ಚೌಪದಿ ರಚನಕಾರ ಎಂ.ಮುತ್ತುಸ್ವಾಮಿ

ಸಾಹಿತ್ಯಕವಾಗಿ ತಮ್ಮನ್ನು ನಿತ್ಯ ಕನ್ನಡ ಸೇವಾ ಕೈಂಕರ್ಯದಲ್ಲಿ ತೊಡಗಿಸಿಕೊಂಡ ಇವರದು ಹೃದಯವಂತಿಕೆಯ ಬದುಕು. ಗಾಂಭೀರ್ಯತೆಯ ಜೊತೆಗೆ ಹಾಸ್ಯ ಲೇಪನದ ಮೂಲಕ ಶ್ರೋತೃಗಳನ್ನು ಸೆಳೆಯುವ ನುಡಿ ಗಾರುಡಿಗ ಇವರು. ವಿಶೇಷವಾಗಿ ಮುದ್ದುರಾಮನ ಚೌಪದಿಗಳನ್ನು ವಿಭಿನ್ನ ಶೈಲಿಯಲ್ಲಿ ವ್ಯಾಖ್ಯಾನಿಸುತ್ತ, ಜನಮಾನಸಕ್ಕೆ ಮುಟ್ಟುವಂತೆ ಮಾಡಿದ ಕೀರ್ತಿ ಹಿರೇಮಗಳೂರು ಕಣ್ಣನ್ ಅವರಿಗೆ ಸಲ್ಲುತ್ತದೆ.

ಎಂ.ಮುತ್ತುಸ್ವಾಮಿ ಅವರ ಪರಿಚಯ: ಮುತ್ತುಸ್ವಾಮಿ ಅವರು ವೃತ್ತಿಯಿಂದ ಅಧ್ಯಾಪಕರು. ಪ್ರವೃತ್ತಿಯಿಂದ ಕವಿ ಹೃದಯದವರು. ಶಾಲಾ ಶಿಕ್ಷಕರಾಗಿ 25 ವರ್ಷಗಳ ದೀರ್ಘಾವಧಿಯ ಸೇವೆ ಸಲ್ಲಿಸಿ, ಇದೀಗ ಮುಕ್ತಕ ಸಾಹಿತ್ಯ ಹಾಗೂ ಚೌಪದಿಗಳನ್ನು ರಚಿಸುವವರಿಗೆ ಸೂಕ್ತ ಮಾರ್ಗದರ್ಶನ ನೀಡುತ್ತಿದ್ದಾರೆ. ಮುಕ್ತಕ ಕವಿಗಳ ಬಳಗವನ್ನು ಸ್ಥಾಪಿಸಿ ಸಾಹಿತ್ಯಾಸಕ್ತರಿಗೆ ಬೆಂಬಲ ನೀಡುತ್ತಿದ್ದಾರೆ. ಹತ್ತಾರು ಮುಕ್ತಕ ಕೃತಿಗಳು ಹೊರತರುವ ನಿಟ್ಟಿನಲ್ಲಿ ಎಲೆಮರೆಯ ಕಾಯಿಯಂತೆ ಶ್ರಮಿಸುತ್ತಿದ್ದಾರೆ. ಇವರು ಉದಯೋನ್ಮುಖ ಕವಿಗಳಿಗೆ ವೇದಿಕೆ ಕಲ್ಪಿಸಿ ಉತ್ತೇಜನ ನೀಡುತ್ತಿದ್ದಾರೆ. ಕಾಯಕದಲ್ಲಿ ಅಪಾರ ಶ್ರದ್ಧೆಯುಳ್ಳ ಸಹೃದಯಿಯಾದ ಇವರು, ಮುಕ್ತಕಧಾರೆ, ಮುಕ್ತಕ ಗಂಗೋತ್ರಿ, ಮುಕ್ತಕ ಸಿಂಧೂರ, ಮುಕ್ತಕ ಮಂದಾರ, ಮುಕ್ತಕ ದರ್ಪಣ, ಮುಕ್ತಕ ಕುಸುಮ, ಮುಕ್ತಕ ಸಂಜೀವಿನಿ ಮೊದಲಾದ ಹೊತ್ತಿಗೆಗಳನ್ನು ಹೊರತಂದಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಹಣ ಡ್ರಾ ಮಾಡಲು ನೆರವಾಗುವ ನೆಪದಲ್ಲಿ ಅಮಾಯಕನಿಗೆ 32,500 ರೂ. ವಂಚನೆ


ಹನೂರು, ಜು.20–ಎಟಿಎಂನಲ್ಲಿ ಹಣ ಡ್ರಾ ಮಾಡಲು ಸಹಕರಿಸುವ ನೆಪದಲ್ಲಿ ಸಿಮ್ ಕಾರ್ಡ್ ಎಗರಿಸಿ 32,500 ರೂ. ಡ್ರಾ ಮಾಡಿಕೊಂಡು ವಂಚಿಸಿದ ಘಟನೆ ಹನೂರಿನಲ್ಲಿ ನಡೆದಿದೆ. ಹನೂರು ತಾಲೂಕು ಬಂಡಳ್ಳಿ ಗ್ರಾಮದಲ್ಲಿ ಕೂಲಿ ಕಾರ್ಮಿಕ ಮಾದೇವ(45) ವಂಚನೆಗೊಳಗಾದವರಾಗಿದ್ದು, ಇವರು ಹನೂರಿನ ಎಸ್‌ಬಿಐ ಎಟಿಎಂನಲ್ಲಿ ಹಣ ಡ್ರಾ ಮಾಡಲು ಜು.18ರಂದು ತೆರಳಿದ್ದಾರೆ. ಅದಾಗಲೇ ಎಟಿಎಂನಲ್ಲಿದ್ದ ವ್ಯಕ್ತಿಯೋರ್ವ ಆತನ ಕಾರ್ಡನ್ನು ಎಟಿಎಂಗೆ ಹಾಕಿ ಹಣ ಬರುತ್ತಿಲ್ಲ ಎಂದು ಮಾದೇವ ಅವರಿಗೆ ತಿಳಿಸಿದ್ದಾನೆ. ಅದೇ ವೇಳೆ ಅವರ ಕಾರ್ಡಿಗೆ ಹಣ ಬರಬಹುದೇನೋ ಎಂದು ಆತ ಹೇಳಿದ ಹಿನ್ನೆಲೆಯಲ್ಲಿ ಅವಿದ್ಯಾವಂತರಾದ ಮಾದೇವ ತನಗೆ ಹಣ ಡ್ರಾ ಮಾಡಿಕೊಡುವಂತೆ ಕೇಳಿದ್ದಾರೆ. ಅವರ ಕಾರ್ಡನ್ನು ಹಾಕಿ ಪಿನ್ ನಂ.ಪಡೆದ ನಂತರ ಈ ಕಾರ್ಡಿಗೂ ಕೂಡ ಹಣ ಬರುತ್ತಿಲ್ಲ ಎಂದು ಅವರಿಗೆ ಕಾರ್ಡನ್ನು ಹಿಂತಿರುಗಿಸಿದ್ದಾನೆ. ಅವರು ಹನೂರಿನ ಎಸ್‌ಬಿಐನಲ್ಲಿ ವಿಚಾರಿಸಿದಾಗ ಅಲ್ಲಿನವರು ಎಟಿಎಂನಲ್ಲಿ ಹಣ ಇಲ್ಲ ಎಂದು ಹೇಳಿದ್ದರಿಂದ ತಾವು ಖಾತೆ ಹೊಂದಿದ್ದ ಶಾಗ್ಯ ಬ್ರಾಂಚ್‌ಗೆ ತೆರಳಿ ಕಾರ್ಡನ್ನು ತೋರಿಸಿದಾಗ ವಂಚಕ ಇವರ ಕಾರ್ಡಿಗೆ ಬದಲಾಗಿ ಬೇರೆ ಕಾಡ್ ಕೊಟ್ಟು 32,500 ರೂ. ಇವರ ಖಾತೆಯಿಂದ ಡ್ರಾ ಮಾಡಿಕೊಂಡಿರುವುದು ಗೊತ್ತಾಗಿದೆ. ಈ ಸಂಬಂಧ ಹನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಮೈಸೂರಿನ ಶ್ರೀ ಕೃಷ್ಣ ಎಂಟರ್‌ಪ್ರೈಸಸ್ ವತಿಯಿಂದ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ಸಂಧರ್ಭದಲ್ಲಿ ಶ್ರೀ ಕೃಷ್ಣ ಎಂಟರ್‌ಪ್ರೈಸಸ್ ಮಾಲೀಕ ಕೆ.ಪ್ರದೀಪ್ ಸಿಂಗ್, ಜಾಕೀರ್ ಹುಸೇನ್, ದಿನೇಶ್, ಮಹೇಶ್, ಅರ್ಷದ್ ಉಪಸ್ಥಿತರಿದ್ದರು.

ದುಷ್ಕರ್ಮಿಗಳ ಮರಣದಂಡನೆ ಖಾತ್ರಿ ಎಂದ ಸಿಎಂ ಬಿರೇನ್ ಸಿಂಗ್

ಇಂಫಾಲ, ಜು.20– ಮಣಿಪುರದಲ್ಲಿ ಇಬ್ಬರು



ಮಹಿಳೆಯರನ್ನು ವಿವಸ್ತ್ರಗೊಳಿಸಿ ಸಾರ್ವಜನಿಕವಾಗಿ ಮೆರವಣಿಗೆ ನಡೆಸಿದ ಹೇಯ ಘಟನೆಯ ವಿಡಿಯೋ ವೈರಲ್ ಆದ ಬೆನ್ನಲ್ಲೇ ಸಿಎಂ ಬಿರೇನ್ ಸಿಂಗ್ ಗುರುವಾರ ಪ್ರತಿಕ್ರಿಯೆ ನೀಡಿದ್ದು, ಘಟನೆಯ ಬಗ್ಗೆ ಸಂಪೂರ್ಣ ತನಿಖೆ ನಡೆಯುತ್ತಿದ್ದು, ಸಂಭವನೀಯ ಮರಣದಂಡನೆ ಸೇರಿದಂತೆ ಕಠಿಣ ಕ್ರಮವನ್ನು ಅನುಸರಿಸಲಾಗುವುದು ಎಂದು ಹೇಳಿದ್ದಾರೆ.

ಸಮಾಜದಲ್ಲಿ ಇಂತಹ ಹೇಯ ಕೃತ್ಯಗಳಿಗೆ ಯಾವುದೇ ಸ್ಥಾನವಿಲ್ಲ. ನಿನ್ನೆ ಕಾಣಿಸಿಕೊಂಡ ವಿಡಿಯೋದಲ್ಲಿ ತೋರಿಸಿರುವಂತೆ, ಆಳವಾದ ಅಗೌರವ ಮತ್ತು ಅಮಾನವೀಯ ಕೃತ್ಯಕ್ಕೆ ಒಳಗಾದ ಇಬ್ಬರು ಮಹಿಳೆಯರಿಗಾಗಿ ನನ್ನ ಹೃದಯ ಅಗಾಧ ನೋವು ಅನುಭವಿಸುತ್ತಿದೆ. ವಿಡಿಯೋ ಹೊರಬಿದ್ದ ತತ್ ಕ್ಷಣ ಘಟನೆಯ ಸ್ವಯಂ ಪ್ರೇರಿತ ಅರಿವನ್ನು ಪಡೆದುಕೊಂಡು ಪೊಲೀಸರು ಕ್ರಮಕ್ಕೆ ಮುಂದಾಗಿದ್ದಾರೆ ಮತ್ತು ಇಂದು ಬೆಳಗ್ಗೆ ಮೊದಲ ಆರೋಪಿಯ ಬಂಧನವನ್ನು ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಹಿಂಸಾಚಾರದಿಂದ ನಲುಗಿ ಹೋಗಿರುವ ಮಣಿಪುರದಲ್ಲಿ ಮೇ 4ರಂದು ಘಟನೆ ನಡೆದ ಘಟನೆಯ ವಿಡಿಯೋ ವೈರಲ್ ಆದ ಬೆನ್ನಲ್ಲೇ ಇನ್ನಷ್ಟು ಆತಂಕ ಎದುರಾಗಿದ್ದು ಎಲ್ಲೆಡೆ ವ್ಯಾಪಕ ಕಟ್ಟೆಚ್ಚರ ವಹಿಸಲಾಗಿದೆ. ವಿಡಿಯೋದಲ್ಲಿ ಅಸಹಾಯಕ ಮಹಿಳೆಯರು ನಿರಂತರ ಕಿರುಕುಳಕ್ಕೆ ಒಳಗಾಗಿರುವುದು ಕಂಡು ಬಂದಿದ್ದು ದೇಶದೆಲ್ಲೆಡೆ ಆಕ್ರೋಶ ವ್ಯಕ್ತವಾಗಿದೆ. ಅಪರಿಚಿತ ಶಸ್ತ್ರಸಜ್ಜಿತ ದುಷ್ಕರ್ಮಿಗಳ ವಿರುದ್ಧ ತೌಬಲ್ ಜಿಲ್ಲೆಯ ನಾಂಗ್‌ಪೋಕ್ ಸೆಕ್ಮೈ ಪೊಲೀಸ್ ಠಾಣೆಯಲ್ಲಿ ಅಪಹರಣ, ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣವನ್ನು ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಾ.ಕಲಾಂ ಪಿಆರ್‌ಓ ಜಯಪ್ರಕಾಶ್‌ರಾವ್‌ಗೆ ಅಭಿನಂದನೆ



ಮೈಸೂರು, ಜು.20(ಎಂಕೆ)– ಮಾಜಿ ರಾಷ್ಟ್ರಪತಿ ಡಾ.ಎಪಿಜೆ ಅಬ್ದುಲ್ ಕಲಾಂ ಅವರ ಸಾರ್ವಜನಿಕ ಸಂಪರ್ಕ ಅಧಿಕಾರಿಯಾಗಿದ್ದ ಜಯಪ್ರಕಾಶ್ ರಾವ್ ಪುತ್ತೂರು ಅವರನ್ನು ಹಿರಿಯ ನಾಗರಿಕ ಮಂಡಳಿ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಅಭಿನಂದನೆ ಸ್ವೀಕರಿಸಿದ ಬಳಿಕ ಮಾತನಾಡಿದ ಅವರು, ಕಲಾಂ ಅವರೊಂದಿಗಿನ ಒಡನಾಟವನ್ನು ಸ್ಮರಿಸಿದರಲ್ಲದೆ ಕ್ಷಿಪಣಿ ಮನುಷ್ಯ ಎಂದು ಕರೆಯುತ್ತಿದ್ದರ ಹಿನ್ನೆಲೆಯನ್ನು ತಿಳಿಸಿದರು. ಕಲಾಂ ಅವರದು ಸರಳವಾದ ಆಹಾರ ಪದ್ಧತಿಯಾಗಿದ್ದು, ತಮ್ಮ ಜೀವನವನ್ನು ತೆರೆದಿಟ್ಟ ಪುಸ್ತಕವನ್ನಾಗಿಸಿಕೊಂಡಿದ್ದರು. ರಾಷ್ಟ್ರಪತಿ ಭವನವನ್ನು ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಮಾಡಿಕೊಡುವ ಮೂಲಕ ಯಾರೂ ಮಾಡಿರದ ಮಹತ್ವದ ಕಾರ್ಯ ಮಾಡಿದ್ದಾರೆ ಎಂದು ತಿಳಿಸಿದರು. ಪೈಲೆಟ್ ಆಗಲು ಬಯಸಿ, ವಿಜ್ಞಾನಿಯಾದ ಅಬ್ದುಲ್ ಕಲಾಂ ಅವರು, ಯುದ್ಧ ವಿಮಾನ ಹಾರಿಸುವ ಮೂಲಕ ಎಲ್ಲರನ್ನೂ ನಿಬ್ಬೆರಗಾಗಿಸಿದ್ದರು. ಅವರ ನಾಯಕತ್ವದಲ್ಲಿ ಡಿಆರ್‌ಡಿಓ ಅದ್ಭುತ ಸಾಧನೆಗಳನ್ನು ಮಾಡಿದೆ. ಸದಾ ಅಭಿವೃದ್ಧಿ ಪರ ಚಿಂತನೆ ನಡೆಸುತ್ತಿದ್ದ ಕಲಾಂ ಅವರು, ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದರು. ಇದೇ ವೇಳೆ ತಾವು ಬರೆದ 'ಕಲಾಂ ಜೀವನ ಧರ್ಮ' ಪುಸ್ತಕದ ಪರಿಚಯ ಮಾಡಿಕೊಟ್ಟರು. ಹಿರಿಯ ನಾಗರಿಕರ ಪರಿಷತ್ತಿನ ಅಧ್ಯಕ್ಷ ಡಾ.ಎಚ್.ಎಂ.ನಾಗರಾಜ್,ಕಾರ್ಯದರ್ಶಿ ಕೆ.ಎಸ್.ಕೃಷ್ಣ, ಖಜಾಂಚಿ ಪ್ರೊ.ಜವರೇಗೌಡ, ಇಸಿಸಿ ಟ್ರಸ್ಟ್‌ನ ಅಧ್ಯಕ್ಷ ಗೌಡಪ್ಪ, ಉಪಾಧ್ಯಕ್ಷ ಕೆ.ವಿ.ರಾಮನಾಥ್, ವಿ.ಎನ್.ಆಚಾರ್, ಕೆವಿಕೆ ನಾಯ್ಡು, ಲತಾ ಮತ್ತಿತರರು ಉಪಸ್ಥಿತರಿದ್ದರು.

ನೇಣು ಬಿಗಿದುಕೊಂಡು ವಿದ್ಯಾರ್ಥಿನಿ ಆತ್ಮಹತ್ಯೆ



ಮೈಸೂರು, ಜು.20(ಸಿಎನ್)– ಕಾಲೇಜು ವಿದ್ಯಾರ್ಥಿನಿ ನೇಣು ಬಿಗಿದು ಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಕುವೆಂಪು ನಗರದ ಆರ್‌ಎಂಪಿ ಕಾಲೋನಿಯ ಮನೆಯೊಂದರಲ್ಲಿ ಗುರುವಾರ ನಡೆದಿದೆ.

ರತ್ನ ಹಾಗೂ ನಾಗರಾಜ್ ದಂಪತಿಯ ಒಬ್ಬಳೇ ಮಗಳಾದ ಪರಿಣಿತಾ (18) ಆತ್ಮಹತ್ಯೆ ಮಾಡಿಕೊಂಡವರಾಗಿದ್ದಾರೆ. ಇತ್ತೀಚೆಗೆ ಮೈಸೂರಿನ ಕಾಲೇಜೊಂದರಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮುಗಿಸಿದ್ದಳು ಎನ್ನಲಾಗಿದೆ.

ನಮ್ಮೊಂದಿಗೆ ಚೆನ್ನಾಗಿಯೇ ಇದ್ದಳು. ರಾತ್ರಿ ನನ್ನ ಬಳಿಯೇ ಮಲಗಿದ್ದಳು. ನಾನು ಟೈಲರ್ ವೃತ್ತಿಯಲ್ಲಿದ್ದೇನೆ. ನನ್ನ ಗಂಡ ಕೂಲಿ ಕೆಲಸ ಮಾಡುತ್ತಾರೆ. ನಾನು ಸಂಜೆ ಹೊರಗಡೆ ಹೋದ ವೇಳೆ ಯಾರು ಇಲ್ಲದ ಸಮಯ ನೋಡಿ ಕೊಂಡು ಈ ರೀತಿ ಮಾಡಿ ಕೊಂಡಿದ್ದಾಳೆ ಎಂದು ಮೃತಳ ತಾಯಿ ರತ್ನ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಘಟನಾ ಸ್ಥಳಕ್ಕೆ ಕುವೆಂಪು ನಗರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೆಆರ್ ಆಸ್ಪತ್ರೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಶುಕ್ರವಾರ ಬೆಳಗ್ಗೆ ಕುಟುಂಬ ಸದಸ್ಯರಿಗೆ ಹಸ್ತಾಂತರಿಸಲಿದ್ದಾರೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಿವನಸಮುದ್ರದ ಭರಚುಕ್ಕಿ ಜಲಪಾತಕ್ಕೆ ಹಾರಿ ಮೈಸೂರು ನಿರುದ್ಯೋಗಿ ಯುವಕ ಆತ್ಮಹತ್ಯೆ



ಕೊಳ್ಳೇಗಾಲ, ಜು.20–ಮೈಸೂರಿನ ನಿರುದ್ಯೋಗಿ ಯುವಕನೋರ್ವ ತಾಲೂಕಿನ ಶಿವನಸಮುದ್ರದ ಭರಚುಕ್ಕಿ ಜಲಪಾತಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಮೈಸೂರಿನ ಗಾಯತ್ರಿಪುರಂ ನಿವಾಸಿ ಸೋಮನಾಥ್ ಎಂಬುವರ ಪುತ್ರ ಸಾಗರ್(23) ಆತ್ಮಹತ್ಯೆಗೆ ಶರಣಾದವನಾಗಿದ್ದು, ನಿರುದ್ಯೋಗ ಸಮಸ್ಯೆಯಿಂದಾಗಿ ಬೇಸತ್ತಿದ್ದ ಈತ, ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ಹೇಳಲಾಗಿದೆ.

ಭರಚುಕ್ಕಿಯಲ್ಲಿ ನೀರಿನ ಹರಿವು ಕಡಿಮೆ ಇದ್ದು, ಅಲ್ಲಿನ ಬಂಡೆಗಳ ನಡುವೆ ಸಾಗರ್‌ನ ದೇಹ ಪತ್ತೆಯಾಗಿದೆ. ಗ್ರಾಮಸ್ಥರಿಂದ ಮಾಹಿತಿ ಪಡೆದ ಕೊಳ್ಳೇಗಾಲ ಗ್ರಾಮಾಂತರ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಗಣೇಶ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ ವೇಳೆ ಭರಚುಕ್ಕಿ ಬಳಿ ಈತನ ಬೈಕ್ ಮತ್ತು ಮೊಬೈಲ್ ಪತ್ತೆಯಾಗಿದೆ. ಮೊಬೈಲ್‌ನಲ್ಲಿದ್ದ ಆತನ ತಂದೆಯ ಸಂಖ್ಯೆಗೆ ಕರೆ ಮಾಡಿದ ಸಬ್ ಇನ್ಸ್‌ಪೆಕ್ಟರ್ ವಿಷಯ ಮುಟ್ಟಿಸಿದ್ದಾರೆ.

ಈತ ನಾಪತ್ತೆಯಾಗಿರುವ ಬಗ್ಗೆ ಜು.17ರಂದು ಆಲನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದ ಸೋಮನಾಥ್ ಅವರು ಕೊಳ್ಳೇಗಾಲಕ್ಕೆ ತೆರಳಿ ತಮ್ಮ ಪುತ್ರನ ದೇಹವನ್ನು ಗುರುತಿಸಿದ್ದಾರೆ. ಪದವಿ ಪೂರೈಸಲು ಸಾಧ್ಯವಾಗದ ಸಾಗರ್, ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದ ನೆಂದು ಹೇಳಲಾಗಿದ್ದು, ಉದ್ಯೋಗ ಸಿಗದ ಹಿನ್ನೆಲೆಯಲ್ಲಿ ಬೇಸತ್ತು ಆತ್ಮಹತ್ಯೆಗೆ ಶರಣಾಗಿರಬಹುದು ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸ್ಕೂಟರ್‌ಗೆ ಬೈಕ್ ಡಿಕ್ಕಿ; ಶಿಕ್ಷಕಿಗೆ ತೀವ್ರ ಗಾಯ

ಮೈಸೂರು, ಜು.20–ಸ್ಕೂಟರ್‌ಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಶಿಕ್ಷಕಿ ತೀವ್ರವಾಗಿ ಗಾಯಗೊಂಡ ಘಟನೆ ಮೈಸೂರಿನ ಗಾಯತ್ರಿಪುರಂನ ಚರ್ಚ್ ಮುಂಭಾಗ ಸಂಭವಿಸಿದೆ.

ಮೂಲತಃ ನಂಜನಗೂಡು ತಾಲೂಕು ಎಸ್.ಹೊಸಕೋಟೆ ಗ್ರಾಮದವರಾಗಿದ್ದು, ಮೈಸೂರಿನ ಮಾನಸಿ ನಗರದಲ್ಲಿ ವಾಸವಿದ್ದು, ಪೊಲೀಸ್ ಪಬ್ಲಿಕ್ ಶಾಲೆಯಲ್ಲಿ ವಿಜ್ಞಾನ ಶಿಕ್ಷಕಿಯಾಗಿರುವ ಅನಿತಾ(42) ಅಪಘಾತದಲ್ಲಿ ಗಾಯಗೊಂಡವರಾಗಿದ್ದು, ಇವರು ಜು.18ರಂದು ಮಧ್ಯಾಹ್ನ 3 ಗಂಟೆ ಸುಮಾರಿನಲ್ಲಿ ತಮ್ಮ ಸ್ಕೂಟರ್ (ಕೆಎ 41 ಎಕ್ಸ್ 3140)ನಲ್ಲಿ ಗಾಯತ್ರಿಪುರಂನ ಐಶ್ವರ್ಯ ಕಾರ್ನರ್ ಕಡೆಯಿಂದ ಚರ್ಚ್ ಹತ್ತಿರ ಬರುತ್ತಿದ್ದ ವೇಳೆ ಕೆಟಿಎಂ ಡ್ಯೂಕ್ ಬೈಕ್‌ನಲ್ಲಿ (ಕೆಎ 03 ಹೆಚ್‌ಯು 7696) ಇಬ್ಬರನ್ನು ಹಿಂದೆ ಕೂರಿಸಿಕೊಂಡು ವೇಗವಾಗಿ ಬಂದ ಸವಾರ ಇವರ ಸ್ಕೂಟರ್‌ಗೆ ಮುಖಾಮುಖಿಯಾಗಿ ಡಿಕ್ಕಿ ಹೊಡೆದಿದ್ದಾನೆ.

ಇದರಿಂದಾಗಿ ತೀವ್ರವಾಗಿ ಗಾಯಗೊಂಡ ಅನಿತಾ ಅವರು ಪ್ರಜ್ಞಾಶೂನ್ಯರಾಗಿದ್ದು, ಸಾರ್ವಜನಿಕರು ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಬೈಕ್‌ನಲ್ಲಿ ಬಂದ ಮೂವರಿಗೂ ಕೂಡ ಸಣ್ಣಪುಟ್ಟ ಗಾಯಗಳಾಗಿದ್ದರೂ, ಬೈಕ್ ಅನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಪ್ರಜ್ಞಾಶೂನ್ಯರಾಗಿದ್ದ ಅನಿತಾ ಅವರಿಗೆ ಪ್ರಜ್ಞೆ ಮರಳಿದೆ ಎಂದು ಎಎಸ್‌ಐ ಆಗಿರುವ ಅವರ ಸಹೋದರ ಹೆಚ್.ಎಸ್. ಶಿವಕುಮಾರ್ ತಿಳಿಸಿದ್ದು, ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಲಾಭದ ಆಮಿಷವೊಡ್ಡಿ 31.29 ಲಕ್ಷ ವಂಚನೆ

ಮೈಸೂರು, ಜು.20–ಲಾಭದ ಆಮಿಷವೊಡ್ಡಿ ಆನ್‌ಲೈನ್ ಮೂಲಕ ವಂಚನೆ ಮಾಡುತ್ತಿರುವ ಪ್ರಕರಣಗಳು ದಿನೇ ದಿನೆ ಹೆಚ್ಚುತ್ತಿದ್ದು, ವ್ಯಕ್ತಿಯೋರ್ವರಿಗೆ 31.29 ಲಕ್ಷ ರೂ. ವಂಚಿಸಲಾಗಿದೆ.

ಕಲ್ಯಾಣಗಿರಿ ನಿವಾಸಿ ಎಲ್.ಅರವಿಂದ ಕುಮಾರ್(48) ಅವರಿಗೆ ಆನ್‌ಲೈನ್ ಮೂಲಕ ಹೆಚ್ಚಿನ ಹಣ ಸಂಪಾದನೆ ಮಾಡುವುದರ ಬಗ್ಗೆ ವಾಟ್ಸಾಪ್ ಮೆಸೇಜ್ ಬಂದಿದೆ. ಮೆಸೇಜ್ ರವಾನೆಯಾದ ಸಂಖ್ಯೆಯನ್ನು ಅವರು ಸಂಪರ್ಕಿಸಲಾಗಿ ವಂಚಕರು ತಿಳಿಸಿದ ಆಪ್ ಅನ್ನು ಇನ್‌ಸ್ಟಾಲ್ ಮಾಡಿಕೊಂಡು ಹಂತ ಹಂತವಾಗಿ 31,29,922 ರೂ.ಗಳನ್ನು ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಸಾತಗಳ್ಳಿ ನಿವಾಸಿ ಮೊಹಮ್ಮದ್ ಜವಾದಿಷಾನ್(32) ಎಂಬುವರಿಗೆ 27844242824 ಸಂಖ್ಯೆಯಿಂದ ಕ್ವಿಕ್ ಸ್ಟಾರ್ಟರ್ ಪ್ಲಾಟ್‌ಫಾರಂ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ವರ್ಕ್ ಫ್ರಂ ಹೋಂ ಸಂದೇಶ ಬಂದಿದೆ. ನಂತರ ಅವರನ್ನು ಟೆಲಿಗ್ರಾಂ ಆ್ಯಪ್ ಮೂಲಕ ಸಂಪರ್ಕಿಸಿದ ವಂಚಕರು ಗೋಲ್ಡ್ 27 ಎಂಬ ಗ್ರೂಪ್‌ನಲ್ಲಿ ಸೇರಿಸಿ ಹೋಟೆಲ್ ರಿವ್ಯೂ ಮಾಡುವ ಮೂಲಕ ಟ್ರೇಡಿಂಗ್ ಮಾಡಿದರೆ ಹೆಚ್ಚಿನ ಲಾಭ ದೊರೆಯುತ್ತಿದೆ ಎಂದು ನಂಬಿಸಿದ್ದಾರೆ. ಇದನ್ನು ನಂಬಿದ ಅವರು, 36,22,869 ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಇವೆರಡೂ ಪ್ರಕರಣಗಳೂ ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ರಸ್ತೆ ಡುಬ್ಬದಲ್ಲಿ ಹಾರಿ ಬಿದ್ದು ಬೈಕ್ ಸವಾರ ಸಾವು

ಮೈಸೂರು, ಜು.20–ರಸ್ತೆ ಡುಬ್ಬದಲ್ಲಿ ನಿಯಂತ್ರಣ ತಪ್ಪಿ ಬೈಕ್ ಬಿದ್ದ ಪರಿಣಾಮ ದುಬೈನಲ್ಲಿ ಕೆಲಸ ಮಾಡುತ್ತಿದ್ದ ಕೇರಳಾ ಮೂಲದ ಯುವಕನೋರ್ವ ಸಾವನ್ನಪ್ಪಿದ ಘಟನೆ ಮೈಸೂರು–ನಂಜನಗೂಡು ರಸ್ತೆ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಆಶ್ರಮದ ಬಳಿ ಸಂಭವಿಸಿದೆ.


ಕೇರಳದ ಮಲಪುರಂ ಜಿಲ್ಲೆಯ ವಿ.ಪಿ. ಶಿಹಾಬ್ ರೆಹಮಾನ್(24) ಅಪಘಾತದಲ್ಲಿ ಸಾವನ್ನಪ್ಪಿದವನಾಗಿದ್ದು, ಈತ ಮತ್ತು ಮೂವರು ಸ್ನೇಹಿತರು ದುಬೈನ ರೆಸ್ಟೋರೆಂಟ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ. ರಜೆಗಾಗಿ ನಾಲ್ವರು ಕೇರಳಕ್ಕೆ ಬಂದಿದ್ದು, ಬೆಂಗಳೂರಿನಲ್ಲಿರುವ ಸ್ನೇಹಿತನನ್ನು ನೋಡಲು 2 ಬೈಕ್‌ಗಳಲ್ಲಿ ನಾಲ್ವರೂ ಕೇರಳಾದಿಂದ ಗುಂಡ್ಲುಪೇಟೆ ಮಾರ್ಗವಾಗಿ ಬೆಂಗಳೂರು ಕಡೆಗೆ ತೆರಳಿದ್ದಾರೆ. ಜು.18ರಂದು ಸರಿ ರಾತ್ರಿ ಇವರು ಗಣಪತಿ ಸಚ್ಚಿದಾನಂದ ಆಶ್ರಮದ ಬಳಿ ಬರುತ್ತಿದ್ದ ವೇಳೆ ಶಿಹಾಬ್ ರೆಹಮಾನ್ ಚಾಲನೆ ಮಾಡುತ್ತಿದ್ದ ರಾಯಲ್ ಎನ್‌ಫೀಲ್ಡ್ ಬೈಕ್ (ಕೆಎಲ್ 09 ಎವಿ 2072) ರಸ್ತೆ ಡುಬ್ಬದಲ್ಲಿ ನಿಯಂತ್ರಣ ತಪ್ಪಿ ಕೆಳಗೆ ಬಿದ್ದಿದೆ. ಬೈಕ್ ಚಲಿಸುತ್ತಿದ್ದ ವೇಗಕ್ಕೆ ಚಾಲನೆ ಮಾಡುತ್ತಿದ್ದ ರೆಹಮಾನ್ ರಸ್ತೆ ಬದಿಯಲ್ಲಿದ್ದ ವಿದ್ಯುತ್ ಕಂಬಕ್ಕೆ ಅಪ್ಪಳಿಸಿದ್ದಾನೆ. ತಲೆ ಭಾಗಕ್ಕೆ ತೀವ್ರವಾಗಿ ಗಾಯಗೊಂಡ ಈತನನ್ನು ಕೆ.ಆರ್. ಆಸ್ಪತ್ರೆಗೆ ದಾಖಲಿಸಲಾಗಿದ್ದು, ಈತ ಜು.19ರಂದು ಮುಂಜಾನೆ 2 ಗಂಟೆ ಸುಮಾರಿನಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಕೆ.ಆರ್.ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಗುರುವಾರ	89.9 ಅಡಿ
ಒಳಹರಿವು	1711 ಕ್ಯೂಸೆಕ್
ಹೊರಹರಿವು	399 ಕ್ಯೂಸೆಕ್


ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಗುರುವಾರ	2272.11 ಅಡಿ
ಒಳ ಹರಿವು	6925 ಕ್ಯೂಸೆಕ್
ಹೊರ ಹರಿವು	800 ಕ್ಯೂಸೆಕ್

ಮರಗಳ ತೆರವಿಗೆ ಆಕ್ಷೇಪಣೆ ಆಹ್ವಾನ

ಮೈಸೂರು, ಜು.20– ಹುಣಸೂರು ತಾಲೂಕಿನ ಧರ್ಮಾಪುರ ತೋಟಗಾರಿಕೆ ಕ್ಷೇತ್ರದಲ್ಲಿ ತಾಳೆ ಬೀಜ ಉತ್ಪಾದನೆ ಕೇಂದ್ರವನ್ನು ಸ್ಥಾಪನೆ ಮಾಡುತ್ತಿದ್ದು, ಕಾರ್ಯಕ್ರಮದಲ್ಲಿ ತಾಳೆ ಬೆಳೆಯನ್ನು ಬೆಳೆಯಲು ಅನುವಾಗುವಂತೆ ಕ್ಷೇತ್ರದಲ್ಲಿನ 1700 ಕಾಡು ಜಾತಿಯ ಮರಗಳನ್ನು ಹುಣಸೂರು ಅರಣ್ಯ ಇಲಾಖೆ ನೇತೃತ್ವದಲ್ಲಿ ತೆರವುಗೊಳಿಸಲಿದ್ದು, ಈ ಸಂಬಂಧ ಆಕ್ಷೇಪಣೆಯನ್ನು ಸಲ್ಲಿಸ ಬಯಸುವ ಸಾರ್ವಜನಿಕರು ತಮ್ಮ ಆಕ್ಷೇಪಣೆಯನ್ನು ಆ.5 ರೊಳಗೆ ಲಿಖಿತ ರೂಪದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ರಾಜ್ಯ ವಲಯ ಮೈಸೂರು ಇವರ ಕಚೇರಿಗೆ ಸಲ್ಲಿಸಬಹುದು ಎಂದು ಮೈಸೂರು ರಾಜ್ಯ ವಲಯದ ಹಿರಿಯ ತೋಟಗಾರಿಕೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಪ್ರಶಸ್ತಿಗಳ ಮೆರಗು

● ಪರಿಣಾಮಕಾರಿ ನಿರ್ವಹಣೆಗೂ ಪ್ರಶಂಸೆ ● ಕಾಡಾನೆ ರಕ್ಷಣೆ ವಿಷಯದಲ್ಲಿಯೂ ಮೆಚ್ಚುಗೆ ● ಉತ್ತಮ ಸೇವೆಗಾಗಿ ಪಶುವೈದ್ಯ, ಗಾರ್ಡ್‌ಗೂ ಸನ್ಮಾನ



ಡಾ.ಮಿರ್ಜಾ ವಾಸಿಂ



ಆರ್.ಆನಂದ್

ಕರ್ನಾಟಕವೇ ಹೆಮ್ಮೆ ಪಡುವ ಸಂಗತಿ



ಬಂಡೀಪುರದಲ್ಲಿ ಅತ್ಯುತ್ತಮ ನಿರ್ವಹಣೆಗೆ ಪ್ರಶಂಸೆ ವ್ಯಕ್ತವಾಗಿದೆ. ಎನ್‌ಟಿಸಿಎ, ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಎಂಓಇಎಫ್ ಸಂಸ್ಥೆಗಳು ನಡೆಸಿದ ಸರ್ವೆಯಲ್ಲಿ ಬಂಡೀಪುರಕ್ಕೆ ದೇಶದಲ್ಲೇ 2ನೇ ಸ್ಥಾನ ಲಭಿಸಿದೆ. ಈ ಹಿಂದೆ ಸರ್ವೆಯಲ್ಲಿ ಶೇ.70 ರಿಂದ 80 ಅಂಕ ಮಾತ್ರ ಸಿಗುತ್ತಿತ್ತು. ಈ ಭಾರಿ ಸಿಬ್ಬಂದಿಗಳ ಶ್ರಮದಿಂದ ಬಂಡೀಪುರ ಅರಣ್ಯ ಉತ್ತಮವಾದ ಸಾಧನೆ ಮಾಡಿದೆ. ಇದು ಕರ್ನಾಟಕವೇ ಹೆಮ್ಮೆ ಪಡುವ ಸಂಗತಿಯಾಗಿದೆ.

- ಡಾ.ಪಿ.ರಮೇಶ್‌ಕುಮಾರ್, ನಿರ್ದೇಶಕ, ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ

ಕೇರಳದ ಪೆರಿಯಾರ್ ಹುಲಿ ಸಂರಕ್ಷಿತ ಪ್ರದೇಶಕ್ಕೆ ಮೊದಲ ಸ್ಥಾನ, ನಾಗರಹೊಳೆಗೆ ಮೂರನೇ ಸ್ಥಾನ

ನಾಲ್ಕು ವರ್ಷಕ್ಕೊಮ್ಮೆ ನಿರ್ವಹಣೆ ಕುರಿತಂತೆ ನಡೆಸುವ ಸರ್ವೆಯಲ್ಲಿ ಈ ಬಾರಿ ಕೇರಳದ ಪೆರಿಯಾರ್ ಹುಲಿ ಸಂರಕ್ಷಿತ ಪ್ರದೇಶಕ್ಕೆ ಮೊದಲ ಸ್ಥಾನ, ಬಂಡೀಪುರಕ್ಕೆ ಎರಡನೇ ಸ್ಥಾನ ದೊರೆತಿದ್ದರೆ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಕ್ಕೆ ಮೂರನೇ ಸ್ಥಾನ ಬಂದಿದೆ. ಈ ಮೂರು ಹುಲಿ ಸಂರಕ್ಷಿತ ಪ್ರದೇಶಗಳ ನಿರ್ದೇಶಕರಿಗೆ ಎನ್‌ಟಿಸಿಎ ಪ್ರಶಂಸನಾ ಪತ್ರ ಕಳುಹಿಸಿ, ಮುಂದಿನ ದಿನಗಳಲ್ಲೂ ವನ್ಯ ಸಂಪತ್ತಿನ ಸಂರಕ್ಷಣೆಗೆ ಇನ್ನಷ್ಟು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದೆ.

ಬಂಡೀಪುರ, ಜು.20 (ಎಂಟಿವೈ)– ಕಾಡ್ಗಿಚ್ಚು ಸೇರಿದಂತೆ ಹಲವು ಸವಾಲುಗಳ ನಡುವೆಯೂ ವೈಕೊಡವಿಕೊಂಡು ಚೇತರಿಸಿಕೊಂಡಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ ನೀಡಿದ ಬಳಿಕ ವಿವಿಧ ಪ್ರಶಸ್ತಿಗಳು ಬಂಡೀಪುರ ಕಾಡಿಗೆ ಅರಸಿಕೊಂಡು ಬರುತ್ತಿದ್ದು, ಮತ್ತೊಮ್ಮೆ ಎಲ್ಲರ ಗಮನ ಬಂಡೀಪುರದತ್ತ ನೆಟ್ಟಿದೆ.

ವನ್ಯಸಂಪತ್ತಿನ ಸಂರಕ್ಷಣೆ, ಪರಿಣಾಮಕಾರಿ ನಿರ್ವಹಣೆ ವಿಚಾರದಲ್ಲಿ ಬಂಡೀಪುರ ಅರಣ್ಯ, ದೇಶದ 53 ಹುಲಿ ಸಂರಕ್ಷಿತ ಪ್ರದೇಶದಲ್ಲಿ ಎರಡನೇ ಸ್ಥಾನ ಪಡೆದು ಪ್ರಶಂಸೆಗೆ ಪಾತ್ರವಾಗಿದೆ. ವಿದ್ಯುತ್ ತಂತಿ ಸ್ಪರ್ಶದಿಂದ ಸಾವು–ಬದುಕಿನಿಂದ ಹೋರಾಡುತ್ತಿದ್ದ ಕಾಡಾನೆ ಜೀವ ರಕ್ಷಣೆಗೆ ಪಶುವೈದ್ಯ ಹಾಗೂ ಉತ್ತಮ ಸೇವೆಗಾಗಿ ಗಾರ್ಡ್ ವೊಬ್ಬರಿಗೂ ಪ್ರಶಸ್ತಿ ಲಭ್ಯವಾಗಿದೆ ಬಂಡೀಪುರ ಅರಣ್ಯ ಪ್ರವಾಸಿಗರು ಹಾಗೂ ವನ್ಯಪ್ರೇಮಿಗಳ ಗಮನ ಸೆಳೆಯುತ್ತಿದೆ.

ನಿರ್ವಹಣೆಯಲ್ಲಿ ಹೆಚ್ಚು ಅಂಕ: ರಾಜ್ಯದ ಮೊದಲ ಹುಲಿ ಸಂರಕ್ಷಿತ ಪ್ರದೇಶ ಎಂಬ ಹೆಗ್ಗಳಿಕೆ ಹೊಂದಿರುವ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಪರಿಣಾಮಕಾರಿ ನಿರ್ವಹಣೆ ವಿಚಾರದಲ್ಲಿ ಗಮನಾರ್ಹ ಸಾಧನೆ ಮಾಡಿದೆ. 4 ವರ್ಷಕೊಮ್ಮೆ ನಡೆಯುವ ಸರ್ವೆ ಕಾರ್ಯದಲ್ಲಿ ಬಂಡೀಪುರಕ್ಕೆ ಶೇ.94.8 ಅಂಕ ಪ್ರಾಪ್ತಿಯಾಗಿದ್ದು, ದೇಶದ 53 ಹುಲಿ ಸಂರಕ್ಷಿತ ಪ್ರದೇಶದಲ್ಲಿ ಎರಡನೇ ಸ್ಥಾನ ಪಡೆದಿದೆ. ಕಳೆದ ವರ್ಷ ಎನ್‌ಟಿಸಿಎ, ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ, ಎಂಓಇಎಫ್ ಸಂಸ್ಥೆಗಳು ನಡೆಸಿದ ಸರ್ವೆಯಲ್ಲಿ ಬಂಡೀಪುರ ಅರಣ್ಯ ಬೆಸ್ಟ್ ಎಂದು ಸರ್ಟಿಫಿಕೆಟ್ ನೀಡಿದೆ. ಇಷ್ಟು ವರ್ಷ ಶೇ.70ರಿಂದ 80ರಷ್ಟು ಅಂಕ ಪಡೆಯುತ್ತಿದ್ದ ಬಂಡೀಪುರ ಅರಣ್ಯ ಈ ಬಾರಿ ಶೇ.94.8 ಅಂಕ ಪಡೆದು ಬೀಗಿದೆ.

ವನ್ಯಜೀವಿ ಸಂರಕ್ಷಣೆ, ಹುಲಿ, ಆನೆಗಳ ಸಂಖ್ಯೆಯಲ್ಲಿ ಹೆಚ್ಚಳ, ವಿವಿಧ ವಿಷಯಗಳ ನಿರ್ವಹಣೆ ಸೇರಿದಂತೆ 80 ಕ್ರೈಟಿರಿಯಾ ಹಾಗೂ 200 ಸಬ್ ಕ್ರೈಟಿರಿಯಾ ಒಳಗೊಂಡಿದ್ದ ಸರ್ವೆಯಲ್ಲಿ ಬಂಡೀಪುರ ಅರಣ್ಯ ಬೆಸ್ಟ್ ಮ್ಯಾನೇಜ್‌ಮೆಂಟ್ ವ್ಯವಸ್ಥೆ ಹೊಂದಿದೆ ಎಂದು ಸರ್ವೆಯಲ್ಲಿ ಪ್ರಶಂಸೆ ವ್ಯಕ್ತಪಡಿಸಲಾಗಿದೆ.

ಕಾಡಾನೆ ಕಾಪಾಡಿದ ವೈದ್ಯ: ಓಂಕಾರ ವಲಯದ ಬರ್ಗಿ ಬೀಟ್‌ನಲ್ಲಿ ಫೆ.14ರಂದು ಜಮೀನೊಂದರಲ್ಲಿ ಅಕ್ರಮವಾಗಿ ಹಾಕಲಾಗಿದ್ದ ವಿದ್ಯುತ್ ಬೇಲಿ ಸ್ಪರ್ಶಿಸಿ ಸಾವು ಬದುಕಿನ ನಡುವೆ ಓಡಾಡುತ್ತಿದ್ದ ಕಾಡಾನೆಯೊಂದನ್ನು ಓಂಕಾರ ವಲಯ ಹಾಗೂ ಬಂಡೀಪುರ ಅರಣ್ಯ ಹಿರಿಯ ಅಧಿಕಾರಿಗಳ ತಂಡ ಸಂಘಟಿತ ಹೋರಾಟ ನಡೆಸಿ ಪ್ರಾಣ ರಕ್ಷಣೆ ಮಾಡಿದ್ದರು.

ಅಂದು ಡಿಆರ್‌ಎಫ್‌ಓ ಶಿವಕುಮಾರ್ ತಂತಿ ಬೇಲಿಗೆ ಅಳವಡಿಸಿದ್ದ ವಿದ್ಯುತ್ ತಂತಿಯನ್ನು ತುಂಡರಿಸಿದ್ದರೆ, ಸ್ಥಳಕ್ಕಾಗಮಿಸಿದ ಪಶುವೈದ್ಯ ಡಾ.ಮಿರ್ಜಾ ವಾಸಿಂ ಸಕಾಲಕ್ಕೆ ಚಿಕಿತ್ಸೆ ನೀಡಿ, ಆನೆ ಆರೋಗ್ಯ ಸುಧಾರಿಸುವಂತೆ ಮಾಡಿದ್ದರು. ಚಿಕಿತ್ಸೆ ನೀಡಿದ ಕೆಲ ಸಮಯದ ಬಳಿಕ ಚೇತರಿಸಿಕೊಂಡ ಕಾಡಾನೆಯನ್ನು ಕಾಡಿಗೆ ಕಳುಹಿಸಲಾಗಿತ್ತು. ಎರಡು ದಿನ ಅದರ ಆರೋಗ್ಯದ ಮೇಲೆ ನಿಗಾ ಇಡಲಾಗಿತ್ತು. ಈ ವಿಚಾರವನ್ನು ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಭೂಪೇಂದ್ರ ಯಾದವ್ ತಮ್ಮ ಟ್ವಿಟರ್ ಖಾತೆಯಲ್ಲಿ ಪೋಸ್ಟ್ ಮಾಡಿ ಪ್ರಶಂಸೆ ವ್ಯಕ್ತಪಡಿಸಿದ್ದರು. ಪಶುವೈದ್ಯ ಡಾ.ಮಿರ್ಜಾ ವಾಸಿಂ ಅವರಿಗೆ ಕೇಂದ್ರದ 'ಗಜ ಗೌರವ' ಪ್ರಶಸ್ತಿ ಪ್ರಾಪ್ತವಾಗಿದೆ.

ಗಾರ್ಡ್‌ಗೆ ಒಲಿದ ಪ್ರಶಸ್ತಿ: ವನ್ಯಜೀವಿ ಸಂಘರ್ಷ ತಡೆ ಹಾಗೂ ಅರಣ್ಯ ಸಂಪತ್ತಿನ ಸಂರಕ್ಷಣೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿರುವ ಬಂಡೀಪುರದ ಗೋಪಾಲ ಸ್ವಾಮಿಬೆಟ್ಟ ವಲಯದಲ್ಲಿ ಗಾರ್ಡ್ ಆಗಿರುವ ಆರ್.ಆನಂದ್ ಎಂಬುವರಿಗೂ ಅತ್ಯುತ್ತಮ ಸೇವೆಗೆ ಪ್ರಶಸ್ತಿ ಲಭ್ಯವಾಗಿದೆ. ಜು.29ರಂದು ಉತ್ತರಾಖಂಡ್‌ನ ಜಿಮ್ ಕಾರ್ಬೆಟ್ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ನಡೆಯುವ 'ವಿಶ್ವ ಹುಲಿ ದಿನ'ದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕಾರಂಜಿ ಕೆರೆ ಬಂಡ್ ರಸ್ತೆಯಲ್ಲಿ ಕಾಮಗಾರಿ ಕಮಾಲ್!

ಕುಸಿದಿದ್ದ ಮ್ಯಾನ್‌ಹೋಲ್ ಪುನರ್ ನಿರ್ಮಾಣ



ಮೈಸೂರು, ಜು.20(ಬಿಎಲ್‌ಯು)– ಮೈಸೂರಿನ ಕಾರಂಜಿ ಕೆರೆ ಬಂಡ್ ರಸ್ತೆಯ ಮಧ್ಯೆ ಕುಸಿದಿದ್ದ ಮ್ಯಾನ್‌ಹೋಲ್ ಅನ್ನು ಪುನರ್ ನಿರ್ಮಾಣ ಮಾಡಲಾಗುತ್ತಿದೆ. ಮೇಯರ್ ಶಿವಕುಮಾರ್ ಅವರು ಅಧಿಕಾರಿಗಳ ಜೊತೆ ಸ್ಥಳ ಪರಿಶೀಲನೆ ನಡೆಸಿದರು.

ಮೈಸೂರಿನ ಕಾರಂಜಿಕೆರೆ ಬಂಡ್ ರಸ್ತೆಯಲ್ಲಿ ಹಾದು ಹೋಗಿರುವ ಯುಜಿಡಿ ಪೈಪ್‌ಲೈನ್ ಮ್ಯಾನ್‌ಹೋಲ್ ಈ ಹಿಂದೆಯೂ ಕುಸಿದು ಹೊಂಡವಾಗಿತ್ತು. ಈ ಸಂಬಂಧ 'ಮೈಸೂರು ಮಿತ್ರ'ನ ಜೂ.29ರ ಸಂಚಿಕೆಯಲ್ಲಿ ವರದಿ ಪ್ರಕಟವಾದ ನಂತರ ಅದನ್ನು ದುರಸ್ತಿಪಡಿಸಲಾಗಿತ್ತು. ವಿಶೇಷವೆಂದರೆ ಆಗ ಕುಸಿದಿದ್ದ ಮ್ಯಾನ್‌ಹೋಲ್ ಅನ್ನು ದುರಸ್ತಿಪಡಿಸಿದ್ದು ಯಾರು ಎಂಬುದು ನಿಗೂಢವಾಗಿತ್ತು. ಆ ಸಂದರ್ಭದಲ್ಲಿ ನಗರ ಪಾಲಿಕೆ ಅಧಿಕಾರಿಗಳು ಆ ಕಾಮಗಾರಿಯನ್ನು ತಾವು ಮಾಡಿಲ್ಲ ಎಂದರೆ, ಮತ್ತೊಂದೆಡೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳೂ ಕೂಡ ದುರಸ್ತಿ ಕಾಮಗಾರಿ ಮಾಡಿದ್ದು ನಾವಲ್ಲ ಎಂದಿದ್ದರು. ಯಾರೇ ಮಾಡಿರಲಿ, ಸದ್ಯ ಮಧ್ಯ ರಸ್ತೆಯಲ್ಲಿ ಕುಸಿದಿದ್ದ ಮ್ಯಾನ್‌ಹೋಲ್ ಅನ್ನು ದುರಸ್ತಿಗೊಳಿಸಿ ವಾಹನ ಸಂಚಾರಕ್ಕೆ ಅನುವು ಮಾಡಿಕೊಟ್ಟ ಮಹಾನುಭಾವರಿಗೆ ವಾಹನ ಸವಾರರು ಕೃತಜ್ಞತೆ ಸಲ್ಲಿಸಿದ್ದರು.

ಈ ವಾಹನ ಸವಾರರ ಸಂತಸ ಬಹಳ ದಿನ ಉಳಿಯಲಿಲ್ಲ. ದುರಸ್ತಿ ಕಾಮಗಾರಿ ನಡೆಸಿದ ಕೇವಲ 19 ದಿನದಲ್ಲಿ ಮತ್ತೆ ಮ್ಯಾನ್ ಹೋಲ್ ಕುಸಿಯಿತು. ಸಂಚಾರ ವಿಭಾಗದ ಪೊಲೀಸರು ಮ್ಯಾನ್‌ಹೋಲ್ ಮಧ್ಯೆ ಮತ್ತೆ ಬ್ಯಾರಿಕೇಡ್ ನಿಲ್ಲಿಸಿದ್ದರು. ಇದರಿಂದಾಗಿ ವಾಹನ ಚಾಲಕರಿಗೆ, ಸವಾರರಿಗೆ ಮತ್ತೆ ತೊಂದರೆ ಆರಂಭವಾಯಿತು.

ಈ ಬಗ್ಗೆ 'ಮೈಸೂರು ಮಿತ್ರ' ಬುಧವಾರದ ಸಂಚಿಕೆಯಲ್ಲಿ "ಮೈಸೂರಿನ ಕಾರಂಜಿ ಕೆರೆ ಬಂಡ್ ರಸ್ತೆಯಲ್ಲಿ ಮತ್ತೆ ಅಡ್ಡಿ–ಆತಂಕ" ಶೀರ್ಷಿಕೆಯಡಿ ಸುದ್ದಿ ಪ್ರಕಟಿಸಿತ್ತು. ಅಂತೂ ಎಚ್ಚೆತ್ತ ಮೈಸೂರು ನಗರ ಪಾಲಿಕೆ ಅಧಿಕಾರಿ ವರ್ಗ ಈಗ ಮ್ಯಾನ್‌ಹೋಲ್ ಪುನರ್ ನಿರ್ಮಾಣ ಕಾರ್ಯ ಕೈಗೊಂಡಿದೆ. ಮೇಯರ್ ಶಿವಕುಮಾರ್ ಅವರು ಅಧಿಕಾರಿಗಳ ಜೊತೆ ಕಾಮಗಾರಿಯ ಪರಿಶೀಲನೆ ನಡೆಸಿ, ಮತ್ತೆ ಕುಸಿಯದಂತೆ ಗುಣಮಟ್ಟದಲ್ಲಿ ಮ್ಯಾನ್‌ಹೋಲ್ ನಿರ್ಮಾಣ ಮಾಡಿ ಎಂದು ಸೂಚನೆ ನೀಡಿದರು.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಮೇಯರ್ ಶಿವಕುಮಾರ್, ಈ ಹಿಂದೆ ಮ್ಯಾನ್‌ಹೋಲ್ ಕುಸಿದಿದ್ದಾಗ ನಗರ ಪಾಲಿಕೆ ವತಿಯಿಂದಲೇ ದುರಸ್ತಿಪಡಿಸಲಾಗಿತ್ತು. ಆದರೆ ಈ ಮ್ಯಾನ್‌ಹೋಲ್‌ಗೆ ಕ್ಯೂರಿಂಗ್ ಮಾಡದೇ ವಾಹನ ಸಂಚಾರಕ್ಕೆ ಮುಕ್ತವಾಗಿ ಬಿಟ್ಟ ಪರಿಣಾಮ ಮತ್ತೆ ಕುಸಿದಿದೆ. ಇದೀಗ ಗುಣಮಟ್ಟದ ಕಾಮಗಾರಿ ನಡೆಸಿ, ಕ್ಯೂರಿಂಗ್ ಮಾಡಿದ ನಂತರ ಅದರ ಮೇಲೆ ವಾಹನಗಳು ಸಂಚರಿಸಲು ಅವಕಾಶ ಕಲ್ಪಿಸಲಾಗುವುದು. ಈ ಹಿಂದೆ ಕಾಮಗಾರಿ ನಡೆಸಿದ್ದ ಗುತ್ತಿಗೆದಾರನಿಗೆ ನೋಟಿಸ್ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು. ಈ ಹಿಂದೆ ಪಾಲಿಕೆ ವತಿಯಿಂದ ಕಾಮಗಾರಿ ನಡೆಸಿಲ್ಲ ಎಂದು ಅಧಿಕಾರಿಗಳು ಹೇಳಿದ್ದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಮೇಯರ್, ಆಗಲೂ ಪಾಲಿಕೆ ವತಿಯಿಂದಲೇ ಕಾಮಗಾರಿ ನಡೆಸಲಾಗಿತ್ತು. ಅಧಿಕಾರಿಗಳು ಯಾಕೆ ಹಾಗೆ ಹೇಳಿದರೋ ಗೊತ್ತಾಗುತ್ತಿಲ್ಲ ಎಂದರು.

ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದಿಂದ

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಇಂದು ಗೌರವ ಡಾಕ್ಟರೇಟ್ ಪ್ರದಾನ



ಶಿವಮೊಗ್ಗ ಜು.20– ಬಿಜೆಪಿ ಸಂಸದೀಯ ಮಂಡಳಿ ಸದಸ್ಯ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಇರುವಕ್ಕಿಯ 'ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ'ವು ಗೌರವ ಡಾಕ್ಟರೇಟ್ ಘೋಷಿಸಿದೆ.

ವಿಶ್ವವಿದ್ಯಾಲಯದ ಆವರಣದಲ್ಲಿ ಶುಕ್ರವಾರ ನಡೆಯಲಿರುವ 8ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಬಿ.ಎಸ್. ಯಡಿಯೂರಪ್ಪ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಿದ್ದಾರೆ.

ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿ ದೇಶಕ್ಕೆ ಮಾದರಿಯಾದ ಯಡಿಯೂರಪ್ಪನವರು, ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಕ್ಷೇತ್ರದಲ್ಲಿ ವಿನೂತನ ಯೋಜನೆಗಳನ್ನು ಸಾಕಾರಗೊಳಿಸಿದ್ದಾರೆ. ಜೊತೆಗೆ ಮಲೆನಾಡಿನಲ್ಲಿ ಕೃಷಿ, ಶಿಕ್ಷಣ, ಸಂಶೋಧನೆ, ವಿಸ್ತರಣೆಯ ಅಗತ್ಯತೆ ಮನಗಂಡು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಆರಂಭಕ್ಕೆ ಮುನ್ನುಡಿ ಬರೆದರು. ಈ ಹಿನ್ನೆಲೆಯಲ್ಲಿ ಅವರನ್ನು ಗೌರವ ಡಾಕ್ಟರೇಟ್‌ಗೆ ಆಯ್ಕೆ ಮಾಡಲಾಗಿದೆ ಎಂದು ವಿವಿಯ ಕುಲಪತಿ ಡಾ.ಆರ್.ಸಿ.ಜಗದೀಶ್ ತಿಳಿಸಿದ್ದಾರೆ.

ನಾಳೆ ಜವಾಹರ್ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ

ಮೈಸೂರು,ಜು.20– ಮೈಸೂರು ಜಿಲ್ಲೆ ಜವಾಹರ್ ನವೋದಯ ವಿಶ್ವವಿದ್ಯಾಲಯಕ್ಕೆ 2023–24ನೇ ಸಾಲಿನ 11ನೇ ತರಗತಿ ಆಯ್ಕೆ ಬಯಸಿ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳ ಪ್ರವೇಶ ಪರೀಕ್ಷೆಯು ಜುಲೈ 22 ರಂದು ಜವಾಹರ್ ನವೋದಯ ವಿದ್ಯಾಲಯದಲ್ಲಿ ನಡೆಯಲಿದೆ. ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಪ್ರವೇಶ ಪತ್ರವನ್ನು www.navodaya.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಂಡು ಪರೀಕ್ಷೆಯ ದಿನ ಬೆಳಗ್ಗೆ 10 ಗಂಟೆಗೆ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಲು ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರ ದೂ.ಸಂ: 0821–297004 ಅನ್ನು ಸಂಪರ್ಕಿಸುವಂತೆ ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಗೃಹಲಕ್ಷ್ಮಿ'ಗೆ ಅರ್ಜಿ ಸಲ್ಲಿಸಲು 'ಯಜಮಾನಿ'ಯರ ಪರದಾಟ

● ಬಹುತೇಕ ಕೇಂದ್ರಗಳಲ್ಲಿ ಸರ್ವರ್ ಬ್ಯುಸಿ ● ಅರ್ಜಿ ಸಲ್ಲಿಸಲು ಬಂದ ಪುರುಷರು ● ಸಿಬ್ಬಂದಿ, ಫಲಾನುಭವಿಗಳಿಗೂ ಗೊಂದಲ

ಚೇತನ್ ನರಸಿಂಹ ವಿ

ಮೈಸೂರು, ಜು.20– ರಾಜ್ಯ ಸರ್ಕಾರದ ಬಹು ನಿರೀಕ್ಷಿತ ಐದು ಗ್ಯಾರಂಟಿಗಳ ಪೈಕಿ ನಾಲ್ಕನೇ ಯೋಜನೆಯಾದ ಗೃಹಲಕ್ಷ್ಮಿ ನೋಂದಣಿಗೆ ಬುಧವಾರ (ಜು.19) ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದ್ದಾರೆ. ಇದಕ್ಕೆ ಅರ್ಜಿ ಸಲ್ಲಿಸಲು ಉತ್ಸಾಹ ತೋರಿದ್ದವರಿಗೆ ಗುರುವಾರ ಭಾರಿ ನಿರಾಸೆ ಉಂಟಾಗಿದೆ.

ತಾಂತ್ರಿಕ ದೋಷಗಳಿಂದ ಅರ್ಜಿ ಸಲ್ಲಿಸಲು ಮೈಸೂರು ನಗರದ ಹಲವೆಡೆ ಮಹಿಳೆಯರು ಹಾಗೂ ಪುರುಷರು ಪರದಾಡುವ ದೃಶ್ಯಗಳು ಕಂಡುಬಂದವು.

ಕರ್ನಾಟಕ ಒನ್, ಗ್ರಾಮ ಒನ್, ಪಾಲಿಕೆ ವ್ಯಾಪ್ತಿಯ 9 ವಲಯ ಕಚೇರಿ, ಸೇವಾಸಿಂಧು, ಬಾಪೂಜಿ ಸೇವಾ ಕೇಂದ್ರಗಳಲ್ಲಿ ಗುರುವಾರ ಬೆಳಗ್ಗೆಯಿಂದಲೇ ಜನರು ಕಿಕ್ಕಿರಿದು ತುಂಬಿದ್ದರು. ಆದರೆ ಒಂದು ಅರ್ಜಿ ಸಹ ಸಲ್ಲಿಸಲು ಸಾಧ್ಯವಾಗಿಲ್ಲ. ಎಲ್ಲೇ ಹೋದರೂ ಸರ್ವರ್ ಬ್ಯುಸಿ ಬರುತ್ತಿದೆ ಎಂದು ಸೇವಾ ಕೇಂದ್ರದ ಸಿಬ್ಬಂದಿ ಹೇಳುತ್ತಿದ್ದಾರೆ ಎಂದು ಮಹಿಳೆಯರು 'ಮೈಸೂರು ಮಿತ್ರ'ನಲ್ಲಿ ದೂರಿದರು.

ಈಗಾಗಲೇ ಹಲವು ಫಲಾನುಭವಿಗಳ ಮೊಬೈಲ್ ಸಂಖ್ಯೆಗೆ ಮೆಸೇಜ್ ಬಂದಿದ್ದು, ಅರ್ಜಿ ಸಲ್ಲಿಸುವಂತೆ ನಾಗರಿಕ ಸೇವಾ ಕೇಂದ್ರಗಳಿಂದ ಕರೆ ಮಾಡಿ ಮಾಹಿತಿ ನೀಡಲಾಗುತ್ತಿದೆ. ಇದರಿಂದಾಗಿ ಅರ್ಜಿ ಸಲ್ಲಿಸಲು ನಾ ಮುಂದು ತಾ ಮುಂದು ಎಂದು ಬರುತ್ತಿರುವ ಸಾರ್ವಜನಿಕರಿಗೆ ಸಿಬ್ಬಂದಿಗಳು ಸರ್ವರ್ ಬ್ಯುಸಿ ಎಂದು ಹೇಳಿ ಕಳುಹಿಸುತ್ತಿದ್ದ ದೃಶ್ಯಗಳು ಸಾಮಾನ್ಯವಾಗಿದ್ದವು.

ಅರ್ಜಿ ಸಲ್ಲಿಕಾ ಕೇಂದ್ರಗಳಿಗೆ ಹೋಗಿ ವಿಚಾರಿಸಿದರೆ, ನಮ್ಮ ವ್ಯಾಪ್ತಿಗೆ ಬರುವುದಿಲ್ಲ ಎಂದು ಹೇಳುತ್ತಾರೆ. ನಾವು ಬೆಳಗ್ಗೆಯಿಂದಲೇ ಕಚೇರಿಗಳಿಂದ ಕಚೇರಿಗೆ ಅಲೆದಾಡುತ್ತಿದ್ದೇವೆ. ಅರ್ಜಿ ಸಲ್ಲಿಕೆಗೆ ಸಾಕಷ್ಟು ಗೊಂದಲಗಳು ಉಂಟಾಗಿವೆ. ಕೂಡಲೇ ದೋಷ ಸರಿಪಡಿಸಬೇಕು ಎಂದು ಮಹಿಳೆಯರು ಸರ್ಕಾರವನ್ನು ಒತ್ತಾಯಿಸಿದ್ದಾರೆ.





"ಎರಡು ನಿಮಿಷದಲ್ಲಿ ಮೆಸೇಜ್ ಬರುತ್ತೆ ಎಂದು ಮಾಧ್ಯಮದಲ್ಲಿ ತಿಳಿಸಿದ್ದರು. ಹಾಗಾಗಿ ನನ್ನ ತಾಯಿ ಪರವಾಗಿ ನಾನೇ ಅರ್ಜಿ ಸಲ್ಲಿಸಲು ಬಂದೆ. ಆದರೆ 24 ಗಂಟೆ ಬಳಿಕ ಎಸ್‌ಎಂಎಸ್ ಸಂದೇಶ ಬರುತ್ತದೆ ಎಂದು ಈಗ ತಿಳಿಯಿತು. ಖಚಿತವಾಗಿ ಸಂದೇಶ ಬರುತ್ತಾ, ಇಲ್ಲವಾ ಎಂಬುದು ಗೊತ್ತಾಗುತ್ತಿಲ್ಲ.

-ಅಸ್ಲಾಂ ಪಾಷ, ಸ್ಥಳೀಯ ನಿವಾಸಿ



"ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಬಂದೆ. ಆದರೆ ಇಲ್ಲಿ ಎಸ್‌ಎಂಎಸ್ ಕಳುಹಿಸಿ ಅಂತಾರೆ. ನಾವು ಹೆಚ್ಚು ಓದಿಲ್ಲ, ಯಾರನ್ನು ಕೇಳಿದರೂ ಸರಿಯಾಗಿ ಮಾಹಿತಿ ನೀಡುತ್ತಿಲ್ಲ. ಯೋಜನೆ ಬಗ್ಗೆ ಸರಳವಾಗಿ ವಿವರಿಸುವ ಸಿಬ್ಬಂದಿಗಳನ್ನು ನೇಮಿಸಿದರೆ, ವಿದ್ಯಾಭ್ಯಾಸವಿಲ್ಲದ ನನ್ನಂಥವರಿಗೆ ಸಹಕಾರಿಯಾಗಲಿದೆ.

-ಎಸ್.ಚಂದ್ರಕಲಾ, ಅರ್ಜಿದಾರರು

ಗೃಹಲಕ್ಷ್ಮಿ ಯೋಜನೆಗೆ ಯಾವುದೇ ಗಡುವು ಇಲ್ಲದಿದ್ದರೂ, ಕೆಲವು ಕಡೆ ಸಿಬ್ಬಂದಿಗಳು ಮಹಿಳೆಯರ ದಿಕ್ಕು ತಪ್ಪಿಸೋ ಕೆಲಸ ಮಾಡುತ್ತಿದ್ದರು. ಕರ್ನಾಟಕ ಒನ್ ಕೇಂದ್ರಕ್ಕೆ ಬಂದ ಮಹಿಳೆಯರಿಗೆ 'ಇಂದೇ ಕಡೆ ದಿನ ಬೇಗನೆ ನೋಂದಾಯಿಸಿಕೊಳ್ಳಿ' ಎಂದು ಒತ್ತಡ ಹಾಕುತ್ತಿದ್ದರು. ಯೋಜನೆ ಬಗ್ಗೆ ತಿಳಿಯದ ಮಹಿಳೆಯರು ಆತಂಕಕ್ಕೀಡಾಗಿದ್ದರು.

ಮಹಿಳೆಯರಿಗಿಂತ ಬಹುತೇಕ ಕಡೆ ಪುರುಷರೇ ಸಾಲುಗಟ್ಟಿ ನಿಂತಿದ್ದರು. ನಮ್ಮ ಮನೆಯವರಿಗೆ ಏನೂ ತಿಳಿಯುವುದಿಲ್ಲ, ಹಾಗಾಗಿ ನಾನೇ ಬಂದಿದ್ದೇನೆ ಎಂದು ಒಬ್ಬರು ಹೇಳಿದರೆ, ನನಗೇ ಗೊತ್ತಾಗುತ್ತಿಲ್ಲ. ಇನ್ನು ನಮ್ಮ ಮನೆಯವರಿಗೆ ತಿಳಿಯತ್ತಾ ಎಂದು ಯೋಜನೆಯ ಗೊಂದಲದ ಬಗ್ಗೆ ಬೇಸರ ವ್ಯಕ್ತಪಡಿಸಿದರು.

ಕೆಲವೆಡೆ ಟೋಕನ್ ನಿಯಮ: ಗೃಹಲಕ್ಷ್ಮಿ ಯೋಜನೆಗೆ ಅರ್ಜಿ ಸಲ್ಲಿಸಲು ಹಲವು ಕೇಂದ್ರಗಳಲ್ಲಿ ಟೋಕನ್ ನೀಡಲಾಗುತ್ತಿದೆ. ಇಂದು ಟೋಕನ್ ಪಡೆದರೇ ಮಾರನೇ ದಿನ ಬಂದು ಅರ್ಜಿ ಸಲ್ಲಿಸಬೇಕು. ಅರ್ಜಿದಾರರಿಗೆ ಏನೂ ತಿಳಿಯದೇ ಗೊಣಗುತ್ತಲೇ ಅಲ್ಲಿಂದ ನಿರ್ಗಮಿಸಿದರು.

ಎಸ್‌ಎಂಎಸ್ ರಾದ್ಧಾಂತ: ಎಸ್‌ಎಂಎಸ್ ಮೂಲಕ ಅರ್ಜಿ ಸಲ್ಲಿಕಾ ಕೇಂದ್ರದ ಮಾಹಿತಿ ತಿಳಿಯಬಹುದು ಎಂದು ಹೇಳಿದ್ದರಿಂದ, ಕೇಂದ್ರಗಳ ಸುತ್ತಲೂ ಅಂಟಿಸಿದ್ದ ಭಿತ್ತಿಪತ್ರಗಳಲ್ಲಿರುವ ಮಾಹಿತಿ ಅರಿತು ಅರ್ಜಿ ಸಲ್ಲಿಸಲು ಹಲವರು ಪರದಾಡಿದರು. ಕೆಲವರು ಈಗಾಗಲೇ ಎಸ್‌ಎಂಎಸ್ ಕಳುಹಿಸಿದ್ದರೂ ಇನ್ನೂ ಪ್ರತ್ಯುತ್ತರ ಬಂದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಆತಂಕ ಬೇಡ, ಹೀಗೆ ಮಾಡಿ

ಆಧಾರ್, ರೇಷನ್ ಕಾರ್ಡ್, ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ ನಂಬರ್‌ನಿಂದ 8147500500 ನಂಬರ್‌ಗೆ ನಿಮ್ಮ ರೇಷನ್ ಕಾರ್ಡ್‌ನಲ್ಲಿರುವ 12 ಸಂಖ್ಯೆಯ ಆರ್‌ಆರ್ ನಂಬರ್ ನಮೂದಿಸಿ ಎಸ್‌ಎಂಎಸ್ ಮಾಡಿ. ಕಳುಹಿಸಿದ ತಕ್ಷಣ ಮೆಸೇಜ್ ಬರುವುದಿಲ್ಲ, 24 ಗಂಟೆಯೊಳಗೆ ನಿಮಗೆ ಮೆಸೇಜ್ ಬರುತ್ತದೆ. ನೀವು ಅರ್ಜಿ ಸಲ್ಲಿಸುವ ಸ್ಥಳ, ನಿಗದಿತ ದಿನಾಂಕ, ಸಮಯ ಸಮೇತ ನಿಮಗೆ ಎಸ್‌ಎಂಎಸ್ ರವಾನೆಯಾಗಲಿದೆ. ಬಳಿಕ ನಿಮಗೆ ಸೂಚಿಸಿರುವ ಸ್ಥಳದಲ್ಲಿ ಅರ್ಜಿ ಸಲ್ಲಿಕೆ ಮಾಡಿ.

ಆ. 16ರಿಂದ ಅಕೌಂಟ್‌ಗೆ ಹಣ

ಯೋಜನೆ ಪ್ರಕಾರ, ರಾಜ್ಯದ ಪ್ರತಿ ಕುಟುಂಬದ ಮನೆ ಯಜಮಾನಿಯ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು 2 ಸಾವಿರ ರೂ. ನಂತೆ ವರ್ಷಕ್ಕೆ 24 ಸಾವಿರ ರೂ. ಜಮೆಯಾಗಲಿದೆ. ಒಟ್ಟು ಲೆಕ್ಕಾಚಾರದ ಪ್ರಕಾರ ಯೋಜನೆಯಿಂದ 1.28 ಕೋಟಿ ಮಹಿಳೆಯರಿಗೆ ಪ್ರಯೋಜನವಾಗಲಿದೆ. ಆಗಸ್ಟ್ 16ರಿಂದ ಖಾತೆಗೆ ಹಣ ವರ್ಗಾವಣೆಯಾಗಲಿದೆ.

ಸಿದ್ದಾಪುರದಲ್ಲಿ ಆಟೋ ಮೇಲೆ ಕಾಡಾನೆ ದಾಳಿಗೆ ಯತ್ನ; ಚಾಲಕ ಪಾರು

ಸಿದ್ದಾಪುರ, ಜು.20– ಕಾಡು ಪ್ರಾಣಿಗಳ ಹಾವಳಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಸಾರ್ವಜನಿಕರು ಆತಂಕದ ವಾತಾವರಣದಲ್ಲಿ ಜೀವನ ನಡೆಸುವಂತಾಗಿದ್ದು, ರಾತ್ರಿ ವೇಳೆ ಕಾಡಾನೆಯೊಂದು ಆಟೋ ಮೇಲೆ ದಾಳಿ ಮಾಡಲು ಯತ್ನಿಸಿ ಚಾಲಕನೋರ್ವ ಪ್ರಾಣಾಪಾಯದಿಂದ ಪಾರಾದ ಘಟನೆ ಸಿದ್ದಾಪುರ ಪಾಲಿಬೆಟ್ಟ ರಸ್ತೆಯಲ್ಲಿ ನಡೆದಿದೆ. ಸಿದ್ದಾಪುರ ಆಟೋ ಚಾಲಕ ಅನ್ಸರ್ ಬಾಡಿಗೆಗೆ ತೆರಳಿ ಮನೆಗೆ ಹಿಂತಿರುಗುತ್ತಿದ್ದ ವೇಳೆ ಪಾಲಿಬೆಟ್ಟ ರಸ್ತೆಯಲ್ಲಿ ಹಠಾತ್ತನೆ ಬಂದ ಕಾಡಾನೆಯೊಂದು ಆಟೋ ಮೇಲೆ ದಾಳಿಗೆ ಯತ್ನಿಸಿದ ಸಂದರ್ಭ ಚಾಲಕ ಅನ್ಸರ್ ಆಟೋ ಬಿಟ್ಟು ತಪ್ಪಿಸಿಕೊಂಡಿದ್ದಾರೆ.



ಕೆಲಕಾಲ ಆಟೋ ಬಳಿ ನಿಂತ ಆನೆ ಸ್ಥಳದಿಂದ ಮುಖ್ಯರಸ್ತೆ ಮಾರ್ಗವಾಗಿ ತೆರಳಿದೆ. ರಸ್ತೆಯಲ್ಲಿ ಸಂಚರಿಸುವ ಮೂಲಕ ಆಟೋ ಮೇಲೆ ದಾಳಿಗೆ ಯತ್ನಿಸುತ್ತಿರುವ ದೃಶ್ಯ ಪಾಲಿಬೆಟ್ಟ ರಸ್ತೆಯ ವರ್ಕ್‌ಶಾಪ್‌ವೊಂದರ ಕ್ಯಾಮರಾದಲ್ಲಿ ಸೆರೆಯಾಗಿದೆ.

ಪಾಲಿಬೆಟ್ಟ ರಸ್ತೆಯಲ್ಲಿ ಬಹುತೇಕ ಕಾರ್ಮಿಕ ಕುಟುಂಬಗಳಿದ್ದು, ಕೆಲಸಕ್ಕೆ ತೆರಳುವ ಕಾರ್ಮಿಕರು ಮನೆಗೆ ಹಿಂತಿರುಗಿದ ನಂತರ ಮತ್ತೆ ಸಿದ್ದಾಪುರ ಪಟ್ಟಣಕ್ಕೆ ಬಂದು ಅಗತ್ಯ ಸಾಮಗ್ರಿಗಳನ್ನು ಖರೀದಿಸಿ ಹಿಂದಿರುಗುವ ವೇಳೆ ಕಾಡಾನೆಗಳು ದಾಳಿ ಮಾಡಿದ ಘಟನೆಯು ನಡೆದಿದೆ. ಸಿದ್ದಾಪುರ ಪಟ್ಟಣಕ್ಕೆ ಬಂದು ಸಮೀಪದ ಗ್ರಾಮಕ್ಕೆ ತೆರಳುವ ಕಾರ್ಮಿಕರು ಜೀವಭಯದಲ್ಲಿ ಮನೆಗೆ ತೆರಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಸಿದ್ದಾಪುರ ಸುತ್ತಮುತ್ತಲ ವ್ಯಾಪ್ತಿಯಲ್ಲಿ ನಿರಂತರ ಕಾಡಾನೆ ಹಾವಳಿ ಮಿತಿ ಮೀರಿದ್ದು ಶಾಶ್ವತವಾಗಿ ಕಾಡಾನೆ ಹಾವಳಿಯನ್ನು ತಡೆಗಟ್ಟುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಎರಡು ತಿಂಗಳ ಹಿಂದೆ ರಾತ್ರಿ 10 ಗಂಟೆ ಸುಮಾರಿಗೆ ಸಿದ್ದಾಪುರ ಬಸ್ ನಿಲ್ದಾಣದಲ್ಲಿ ಕಾಣಿಸಿಕೊಂಡ ಕಾಡಾನೆ ಗ್ರಾಮಸ್ಥರಲ್ಲಿ ಆತಂಕ ಸೃಷ್ಟಿ ಮಾಡಿತ್ತು. ಆಟೋ ಚಾಲಕರ ಸಮಯಪ್ರಜ್ಞೆಯಿಂದ ಬಸ್ ನಿಲ್ದಾಣದಲ್ಲಿ ಜಮಾಯಿಸಿದ ಸ್ಥಳೀಯರು ಕಾಡಾನೆಯನ್ನು ಕಂಡು ಓಡಿ ಪಾರಾಗಿದ್ದರು.

ಇತ್ತೀಚೆಗೆ ಮೈಸೂರು ರಸ್ತೆಯ ಬಡಾವಣೆ ಒಂದರಲ್ಲಿ ಕಾಡಾನೆಯೊಂದು ಹಾಡಹಗಲಿನಲ್ಲೇ ಕಾಣಿಸಿಕೊಂಡು ಮೈದಾನವೊಂದರಲ್ಲಿ ಆಟವಾಡುತ್ತಿದ್ದ ಮಕ್ಕಳ ಮೇಲೆ ದಾಳಿಗೆ ಯತ್ನಿಸಿತ್ತು. ಸ್ಥಳೀಯರ ಸಮಯಪ್ರಜ್ಞೆಯಿಂದ ಮಕ್ಕಳನ್ನು ರಕ್ಷಿಸಿ ಆನೆಯನ್ನು ಓಡಿಸಿದ್ದರು.

ಲಾರಿ ಪಲ್ಟಿ; ಚಾಲಕ, ಸಹಾಯಕ ಪಾರು



ನಾಪೋಕ್ಲು, ಜು.20– ನಾಪೋಕ್ಲು–ಮಡಿಕೇರಿ ಮುಖ್ಯ ರಸ್ತೆಯ ಅಪ್ಪಂಗಳದಲ್ಲಿ ಲಾರಿಯೊಂದು ರಸ್ತೆಯಂಚಿಗೆ ಸರಿದು ಪಲ್ಟಿಯಾಗಿ ಬಿದ್ದಿದ್ದು ಚಾಲಕ ಹಾಗೂ ಸಹಾಯಕ ಅಪಾಯದಿಂದ ಪಾರಾಗಿದ್ದಾರೆ. ನಾಪೋಕ್ಲುವಿನಿಂದ ಕುಶಾಲನಗರಕ್ಕೆ ಕಾಫಿ ಸಾಗಿಸುತ್ತಿದ್ದ ಲಾರಿ ಅಪ್ಪಂಗಳದ ಏಲಕ್ಕಿ ಸಂಶೋಧನಾ ಕೇಂದ್ರದ ಬಳಿ ಹಿಂದಕ್ಕೆ ಚಲಿಸಿ ರಸ್ತೆಯಂಚಿಗೆ ಬಿದ್ದಿದೆ. ಯಾವುದೇ ಅಪಾಯ ಸಂಭವಿಸಿಲ್ಲ.

ಕಾಡಾನೆ ದಾಳಿಯಿಂದ ಬೊಲೆರೋ ಜಖಂ



ಮಡಿಕೇರಿ, ಜು.20– ಕಾಡಾನೆ ದಾಳಿಯಿಂದ ಮನೆ ಎದುರು ನಿಲ್ಲಿಸಿದ್ದ ಬೊಲೆರೋ ವಾಹನ ಜಖಂಗೊಂಡಿರುವ ಘಟನೆ ಸುಂಟಿಕೊಪ್ಪ ಬಳಿಯ ಕಂಬಿಬಾಣೆಯ ಊರುಗುಪ್ಪೆ ಪೈಸಾರಿಯಲ್ಲಿ ನಡೆದಿದೆ. ಊರುಗುಪ್ಪೆ ಪೈಸಾರಿಯ ನಿವಾಸಿ ಸಲಾಂ ಎಂಬುವರು ತಮ್ಮ ಬೊಲೇರೋ ವಾಹನವನ್ನು ಮನೆ ಎದುರು ನಿಲ್ಲಿಸಿದ್ದ ಸಂದರ್ಭ ಬೆಳಗ್ಗೆ ಸುಮಾರು 5 ಗಂಟೆ ಸಮಯದಲ್ಲಿ ಜೀಪಿನ ಮೇಲೆ ಕಾಡಾನೆ ದಾಳಿ ನಡೆಸಿದೆ. ಇದರಿಂದಾಗಿ ಜೀಪು ಜಖಂಗೊಂಡಿದ್ದು, ವಾಹನ ಮಾಲೀಕರಿಗೆ ಅರಣ್ಯ ಇಲಾಖೆ ಪರಿಹಾರ ನೀಡಬೇಕು. ಮಾತ್ರವಲ್ಲದೇ ಗ್ರಾಮ ವ್ಯಾಪ್ತಿಯಲ್ಲಿ ಕಾಡಾನೆ ಹಾವಳಿ ತಡೆಗಟ್ಟುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಚೆಲುವರಾಜ್ ನಿಧನ

ವಿರಾಜಪೇಟೆ, ಜು.20– ವಿರಾಜಪೇಟೆಯ ಅರಸು ನಗರ ನಿವಾಸಿ ಚೆಲುವರಾಜ್ (62) ಅವರು ತಮ್ಮ ನಿವಾಸದಲ್ಲಿ ನಿಧನರಾಗಿದ್ದಾರೆ.



ಚೆಲುವರಾಜ್ ವೃತ್ತಿಯಲ್ಲಿ ಟೈಲರಿಂಗ್ ಕೆಲಸ ಮಾಡುತ್ತಿದ್ದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಇಲ್ಲಿನ ಮೀನುಪೇಟೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನಡೆಯಿತು.

ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಲು ಕಾಲಾವಕಾಶ

ಮಡಿಕೇರಿ, ಜು.20– ಕೊಡಗು ಜಿಲ್ಲೆಯ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿರುವ ಪರಿಶಿಷ್ಟ ಪಂಗಡದ ಮೆಟ್ರಿಕ್ ನಂತರದ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ 2022–23 ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಜುಲೈ, 31 ರವರೆಗೆ ಅವಧಿ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗೆ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿ, ಪೊನ್ನಂಪೇಟೆ 08274–261261, ಸಹಾಯಕ ನಿರ್ದೇಶಕರು(ಗ್ರೇಡ್–1), ಸಮಾಜ ಕಲ್ಯಾಣ ಇಲಾಖೆ, ಮಡಿಕೇರಿ 08272–223552 ಹಾಗೂ ಸಹಾಯಕ ನಿರ್ದೇಶಕರು (ಗ್ರೇಡ್–2), ಸಮಾಜ ಕಲ್ಯಾಣ ಇಲಾಖೆ, ಸೋಮವಾರಪೇಟೆ 08276–281115 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಹೊಸ ಘಟಬಂಧನ್ ಬಿಜೆಪಿ ಮಿತ್ರ ಪಕ್ಷಗಳಿಗೆ ಭಯ ಶುರುವಾಗಿದೆ

ಮಡಿಕೇರಿಯಲ್ಲಿ ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ವಾಗ್ದಾಳಿ

ಮಡಿಕೇರಿ, ಜು.20– ಕಾಂಗ್ರೆಸ್, ಸಮಾಜವಾದಿ ಪಕ್ಷಗಳೂ ಸೇರಿದಂತೆ 26 ಪಕ್ಷಗಳ ಹೊಸ ಘಟಬಂಧನ್ ಬಿಜೆಪಿ ಮಿತ್ರಪಕ್ಷಗಳಿಗೆ ಭಯ ಉಂಟು ಮಾಡಿದೆ. ಸೋಲಿನ ಹತಾಶೆಯಿಂದ ಬಿಜೆಪಿ ವಿದಾಯದ ಕೂಟ ನಡೆಸುತ್ತಿದೆ ಎಂದು ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ವ್ಯಂಗ್ಯವಾಡಿದ್ದಾರೆ.



ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅಖಿಲೇಶ್ ಯಾದವ್, ಬೆಂಗಳೂರಿನಲ್ಲಿ ಹವಾಮಾನದಂತೆ ಮೈತ್ರಿಕೂಟದ ಸಭೆಯ ವಾತಾವರಣವೂ ಬಹಳ ಉತ್ತಮವಾಗಿತ್ತು. ಲೋಕಸಭಾ ಚುನಾವಣೆಯನ್ನು ಮೈತ್ರಿಕೂಟದ ಪಕ್ಷಗಳು ಒಟ್ಟಾಗಿ ಎದುರಿಸುತ್ತೇವೆ ಎಂದು ಅವರು ಹೇಳಿದರು.

ಮೈತ್ರಿಕೂಟದ ಸಭೆಯ ದಿನದಂದೇ ಬಿಜೆಪಿಯು ತನ್ನ ಮಿತ್ರಪಕ್ಷಗಳ ಸಭೆ ಕರೆದಿದ್ದು ಮೈತ್ರಿಕೂಟದ ಬಗ್ಗೆ ಬಿಜೆಪಿ ಮುಖಂಡರಿಗೆ ಪ್ರಾರಂಭವಾಗಿರುವ ಭಯಕ್ಕೆ ನಿದರ್ಶನವಾಗಿದೆ. ಬಿಜೆಪಿ ನೇತೃತ್ವದ ಪಕ್ಷಗಳ ಸಭೆ ವಿದಾಯ ಕೂಟದ ಸಭೆಯಾಗಲಿದೆ. ಇಲ್ಲಿಯವರೆಗೆ ಮೋಜುಮಸ್ತಿ ಅನುಭವಿಸಿದ್ದಾಯಿತು. ಇನ್ನು ಅಧಿಕಾರದಿಂದ ವಿದಾಯ ಹೇಳುವ ಕಾಲ ಬರುತ್ತಿದೆ. ಹೊಸ ಘಟ್‌ಬಂಧನ್ ಭಾರತವನ್ನು ಹೊಸ ದಿಸೆಯತ್ತ ಸಾಗಿಸಲಿದೆ ಎಂದು ಅಖಿಲೇಶ್ ಯಾದವ್ ಆಶಾಭಾವನೆ ವ್ಯಕ್ತಪಡಿಸಿದರು.

ಅಧಿಕಾರ ಕಳೆದುಕೊಳ್ಳುತ್ತದೆ: ದೇಶದಲ್ಲಿ ನಿರುದ್ಯೋಗ ಸಮಸ್ಯೆ, ಬಡತನ ಹಾಗೇ ಇದೆ. ದಿನಬಳಕೆಯ ವಸ್ತುಗಳ ದರ ಹೆಚ್ಚುತ್ತಲೇ ಇದೆ. ನೋಟು ಅಮಾನ್ಯೀಕರಣದ ನಂತರವೂ ದೇಶದಲ್ಲಿ ಭ್ರಷ್ಟಾಚಾರ ಕೊನೆಯಾಗಲಿಲ್ಲ ಎಂದರೆ ನೋಟು ಅಮಾನ್ಯೀಕರಣ ನಿರ್ಧಾರವೇ ಭ್ರಷ್ಟಾಚಾರಕ್ಕೆ ನಾಂದಿ ಹಾಡಿದ್ದು ಎಂದು ಹೇಳಬೇಕಾಗುತ್ತದೆ. ನೋಟು ಅಮಾನ್ಯೀಕರಣವನ್ನು ಸಮರ್ಥಿಸುವ ಒಂದೇ ಒಂದು ಕಾರಣವನ್ನೂ ಈವರೆಗೂ ಬಿಜೆಪಿಯಿಂದ ನೀಡಲಾಗಲಿಲ್ಲ. ಕರ್ನಾಟಕದಲ್ಲಿ ಶೇ.40ರಷ್ಟು ಕಮಿಷನ್ ಆರೋಪ ಎದುರಿಸುತ್ತಿದ್ದ ಬಿಜೆಪಿ ಅಧಿಕಾರ ಕಳೆದುಕೊಂಡಂತೆಯೇ ಕೇಂದ್ರದಲ್ಲಿ ಭ್ರಷ್ಟಾಚಾರಿಗಳಿಗೆ ಬೆಂಬಲ ನೀಡುತ್ತಾ ಬಂದಿರುವ ಬಿಜೆಪಿ ಸರ್ಕಾರ ಕೂಡ ಅಧಿಕಾರ ಕಳೆದುಕೊಳ್ಳಲಿದೆ ಎಂದು ಅಖಿಲೇಶ್ ಭವಿಷ್ಯ ನುಡಿದರು.

ಬಿಜೆಪಿ ಆತಂಕಗೊಂಡಿದೆ: ಇಂಡಿಯಾ (ಐಎನ್‌ಡಿಐಎ) ಎಂಬ ಹೊಸ ಹೆಸರಿನಲ್ಲಿ ಬಹಳಷ್ಟು ಅರ್ಥವಿದೆ. ಅಭಿವೃದ್ಧಿ, ಸಹಮತ, ಒಗ್ಗಟ್ಟಿನ ಪ್ರತೀಕವಾದಂತಿದೆ ಎಂದು ವಿಶ್ಲೇಷಿಸಿದ ಅಖಿಲೇಶ್, ಇಂಡಿಯಾ ಎಂಬ ಹೆಸರಿನಿಂದ ಸಹಜವಾಗಿಯೇ ಬಿಜೆಪಿ ಆತಂಕಕ್ಕೊಳಗಾಗಿದೆ. ಇಂಡಿಯಾ ಹೆಸರು ತನ್ನದು ಎಂದು ಈವರೆಗೂ ನಮ್ಮನ್ನು ಹೆದರಿಸುತ್ತಿದ್ದ ಬಿಜೆಪಿ ಇದೀಗ ಮೈತ್ರಿ ಪಕ್ಷಗಳು ಯಾವಾಗ ಇಂಡಿಯಾ ಎಂದು ಹೆಸರಿಟ್ಟಿತೋ ಆಗಲೇ ಗಾಬರಿಗೊಳಗಾಗಿದೆ ಎಂದು ಅವರು ಹೇಳಿದರು.

ಮುಂದಿನ ದಿನಗಳಲ್ಲಿ ಇಂಡಿಯಾವನ್ನು ಪ್ರಬಲಗೊಳಿಸುತ್ತಾ ಭಾರತೀಯರ ಆಶೋತ್ತರಕ್ಕೆ ತಕ್ಕಂತೆ ದೇಶವನ್ನು ಬಿಜೆಪಿ ಹಿಡಿತದಿಂದ ದೂರ ಮಾಡಲಿದ್ದೇವೆ ಎಂದೂ ಹೇಳಿದರು. ಭಾರತೀಯರು ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳಿಗೆ ವಿದಾಯ ಹೇಳುವ ದಿನವನ್ನು ಎದುರು ನೋಡುತ್ತಿದ್ದು, ಬಿಜೆಪಿಯ ಸೋಲು ಖಚಿತವಾಗಿದೆ. ಮೈತ್ರಿ ಪಕ್ಷಗಳ ಒಗ್ಗಟ್ಟು ಇದಕ್ಕೆ ಕಾರಣವಾಗಲಿದೆ ಎಂದು ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ವಿಶ್ವಾಸ ವ್ಯಕ್ತಪಡಿಸಿದರು.

ಕೊಡಗಿನಲ್ಲಿ ಧಾರಾಕಾರ ಮಳೆ

ಮಡಿಕೇರಿ, ಜು.20– ಕೊಡಗು ಜಿಲ್ಲೆಯಲ್ಲಿ ಗಾಳಿ ಸಹಿತ ಮತ್ತೆ ಮಳೆ ಚುರುಕುಗೊಂಡಿದ್ದು, ಜಿಲ್ಲೆಯ ವಿವಿಧ ಕಡೆಗಳಲ್ಲಿ ಧಾರಾಕಾರ ಮಳೆಯಾಗಿರುವ ಬಗ್ಗೆ ವರದಿಯಾಗಿದೆ.

ಪ್ರಸ್ತುತ ಪುನರ್ವಸು ಮಳೆ ಸುರಿಯುತ್ತಿದ್ದು, ಕೃಷಿ ಕಾರ್ಯಗಳು ಕೂಡ ಚುರುಕುಗೊಂಡಿದೆ. ಕಳೆದ 24 ಗಂಟೆ ಅವಧಿಯಲ್ಲಿ ಸೋ.ಪೇಟೆ ತಾಲೂಕಿನ ಶಾಂತಳ್ಳಿ ಹೋಬಳಿಗೆ ದಾಖಲೆಯ 154 ಮಿ.ಮೀ ಮಳೆಯಾಗಿದೆ. ಪೊನ್ನಂಪೇಟೆ ತಾಲೂಕಿನ ಶ್ರೀಮಂಗಲ ವ್ಯಾಪ್ತಿಗೆ 102 ಮಿ.ಮೀ, ಸೋಮವಾರಪೇಟೆ ಕಸಬಾ ವ್ಯಾಪ್ತಿಗೆ ಒಟ್ಟು 80.40 ಮಿ.ಮೀ ಮಳೆ ಸುರಿದಿದೆ.

ಚೆಸ್ಕಾಂಗೆ ನಷ್ಟ: ಈ ನಡುವೆಯೇ ಗಾಳಿ ಮಳೆಯಿಂದ ಚೆಸ್ಕಾಂ ಇಲಾಖೆಗೆ ಅಪಾರ ನಷ್ಟ ಉಂಟಾಗಿದೆ. ಜೂನ್ 1ರಿಂದ ಇಲ್ಲಿಯವರೆಗೂ ಗಾಳಿ, ಮಳೆ ಮತ್ತು ಮರ ಮುರಿದು ಬಿದ್ದ ಪರಿಣಾಮ ಒಟ್ಟು 1111 ವಿದ್ಯುತ್ ಕಂಬಗಳಿಗೆ ಹಾನಿಯಾಗಿದೆ. ಒಟ್ಟು 71 ಟ್ರಾನ್ಸ್‌ಫಾರ್ಮರ್‌ಗಳು ದುರಸ್ತಿಗೀಡಾಗಿದ್ದು, ಒಟ್ಟು 140.99 ಲಕ್ಷ ರೂ. ನಷ್ಟವಾಗಿದೆ ಎಂದು ಕೊಡಗು ಜಿಲ್ಲಾ ವಿಪತ್ತು ನಿರ್ವಹಣಾ ಘಟಕ ಮಾಹಿತಿ ನೀಡಿದೆ.

ಮನೆ ಹಾನಿ: ಮಳೆಗಾಲ ಪ್ರಾರಂಭದ ಬಳಿಕ ಜಿಲ್ಲೆಯ ವಿವಿಧ ಕಡೆಗಳಲ್ಲಿ ಸುರಿದ ಮಳೆಗೆ ಒಟ್ಟು 49 ಮನೆಗಳಿಗೆ ಹಾನಿಯಾಗಿದೆ. ಈ ಪೈಕಿ 2 ಮನೆಗಳು ಸಂಪೂರ್ಣ ನಾಶವಾಗಿದ್ದರೆ, 2 ಮನೆಗಳಿಗೆ ಬಹುತೇಕ ಹಾನಿಯಾಗಿದೆ

ನಿರ್ಮಿತಿ ಕೇಂದ್ರಗಳಿಗೆ ಕಟ್ಟಡ ಕಾಮಗಾರಿ ವಹಿಸದಂತೆ ಪುರಸಭಾ ಸದಸ್ಯರ ಆಗ್ರಹ

ವಿರಾಜಪೇಟೆ, ಜು.20– ನೂತನ ಕಟ್ಟಡ ಮತ್ತು ಮಾರುಕಟ್ಟೆಯ ವಾಣಿಜ್ಯ ಸಂಕೀರ್ಣದ ನಿರ್ಮಾಣ ಕಾರ್ಯವನ್ನು ಯಾವುದೇ ಕಾರಣಕ್ಕೂ ನಿರ್ಮಿತಿ ಕೇಂದ್ರದವರಿಗೆ ವಹಿಸಬಾರದು ಎಂದು ಪುರಸಭಾ ಸದಸ್ಯರು ಒಕ್ಕೊರಲಿನಿಂದ ಆಗ್ರಹಿಸಿದ್ದಾರೆ.



ನೂತನ ಕಟ್ಟಡ ಮತ್ತು ಮಾರುಕಟ್ಟೆಯ ವಾಣಿಜ್ಯ ಸಂಕೀರ್ಣ ವ್ಯವಸ್ಥಿತವಾಗಿ ಕಟ್ಟಲು ಸರಕಾರಕ್ಕೆ ಪತ್ರ ಬರೆದ ಹಿನ್ನೆಲೆಯಲ್ಲಿ ಪುರಸಭೆ ಸಭಾಂಗಣದಲ್ಲಿ ಕ್ರಿಯಾ ಯೋಜನೆಗೆ ಸದಸ್ಯರ ಸಲಹೆ ಮತ್ತು ಅಭಿಪ್ರಾಯಗಳನ್ನು ಸಂಗ್ರಹಿಸಲು ಕರೆಯಲಾಗಿದ್ದ ಸಭೆಯಲ್ಲಿ ಈ ಅಭಿಪ್ರಾಯಗಳು ಕೇಳಿಬಂದಿತು.

ಸದಸ್ಯ ಮೊಹಮ್ಮದ್ ರಫಿ ಮಾತನಾಡಿ, ಸರಕಾರದ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದವರಿಗೆ ಒಪ್ಪಿಸಿದರೆ 5–10 ವರ್ಷಗಳ ಕಾಲ ಕಾಮಗಾರಿ ನಡೆಸುತ್ತಾರೆ. ಆದ್ದರಿಂದ ಬೇರೆಯವರಿಗೆ ವಹಿಸುವುದು ಉತ್ತಮ ಎಂದರು. ಇದಕ್ಕೆ ಬಹುತೇಕ ಸದಸ್ಯರು ಬೆಂಬಲ ಸೂಚಿಸಿ, ಯಾವುದೇ ಕಾರಣಕ್ಕೂ ಕಾಮಗಾರಿಯನ್ನು ನಿರ್ಮಿತಿ ಕೇಂದ್ರದವರಿಗೆ ಒಪ್ಪಿಸಬಾರದು ಎಂದು ಆಗ್ರಹಿಸಿದರು.

ಸದಸ್ಯ ಡಿ.ಪಿ.ರಾಜೇಶ್ ಮಾತನಾಡಿ, ವಿರಾಜಪೇಟೆಯಲ್ಲಿ ಕಲಾಮಂದಿರ ಇಲ್ಲದಿರುವ ಕಾರಣದಿಂದ ಪುರಭವನದ ನೂತನ ಕಟ್ಟಡದಲ್ಲಿಯೇ ಕಲಾಸಭಾಂಗಣವನ್ನು ಮಾಡಬೇಕು ಹಾಗೂ ಮಾರುಕಟ್ಟೆಗೆ ದೂರದಿಂದ ಬರುವವರಿಗೆ ವಾಹನ ನಿಲುಗಡೆಗೆ ಸ್ಥಳಾವಕಾಶ ಮಾಡಿಕೊಡಬೇಕು ಎಂದರು. ಅದಕ್ಕೆ ದನಿಗೂಡಿಸಿದ ಸದಸ್ಯ ಎಸ್.ಹೆಚ್.ಮತೀನ್, ಈಗ ಪುರಸಭೆಯಾಗಿದೆ. ಮುಂದೆ ನಗರಸಭೆ ಆಗುವ ಸಾಧ್ಯತೆ ಇದ್ದು, ಯಾವುದೇ ಕಾಮಗಾರಿ ನಡೆಸಲು ದೂರದೃಷ್ಟಿ ಇಟ್ಟುಕೊಂಡು ಮಾಡಬೇಕೆಂದು ಸಲಹೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿ, ಪುರಸಭೆ ಕಟ್ಟಡ, ಪುರಭವನ ಹಾಗೂ ಮಾರುಕಟ್ಟೆ ಸಂಕೀರ್ಣ ನಿರ್ಮಾಣ, ಹಳೆಯ ದನದ ದೊಡ್ಡಿ ಸೇರಿದಂತೆ ನಾಲ್ಕು ನೂತನ ಕಟ್ಟಡ ಕಟ್ಟುವುದು ಮತ್ತು ಕೆರೆ ಅಭಿವೃದ್ಧಿಗೊಳಿಸುವುದು. ಈ ಕಾಮಗಾರಿ ನಡೆಸಲು ಸದಸ್ಯರ ಅನುಮತಿ ಸಲಹೆ ಸಹಕಾರವನ್ನು ಕೋರಲಾಗುವುದು ಎಂದು ಸಭೆಗೆ ತಿಳಿಸಿದರು.

ಸದಸ್ಯೆ ಅನಿತಾ ಮಾತನಾಡಿ, ಪಟ್ಟಣದಲ್ಲಿ ವಾಹನ ನಿಲುಗಡೆ ಮಾಡಲು ಸ್ಥಳಾವಕಾಶ ಅಗತ್ಯ. ಜನರಿಗೆ ಮೂಲ ಸೌಲಭ್ಯಗಳನ್ನು ಒದಗಿಸುವುದು ನಮ್ಮ ಕರ್ತವ್ಯ ಎಂದರು.

ಸದಸ್ಯ ಜಲೀಲ್ ಮಾತನಾಡಿ. ಪಟ್ಟಣದಲ್ಲಿ ಚರಂಡಿಗಳು ತುಂಬಿ ಮಳೆಯ ನೀರು ರಸ್ತೆಯಲ್ಲಿ ಹರಿಯುವಂತಾಗಿದೆ. ಸ್ವಚ್ಛತೆ ಕಾಪಾಡುವುದು ಮುಖ್ಯ. ಇದರ ಬಗ್ಗೆ ಕ್ರಮ ಕೈಗೊಳ್ಳುವಂತೆ ಹೇಳಿದಾಗ ಸದಸ್ಯ ಅಗಸ್ಟಿನ್ ಬೆನ್ನಿ ದನಿಗೂಡಿಸಿ ಮಳೆಗಾಲ ಶುರುವಾಗಿದ್ದು ರಸ್ತೆ ಬದಿ ರಾಜಕಾಲುವೆ ಸ್ವಚ್ಛಗೊಳಿಸಬೇಕು ಎಂದರು.

ಬೆಂಗಳೂರು ಮತ್ತು ಹುಣಸೂರಿನಲ್ಲಿ ಕಂಪನಿ ಹೊಂದಿರುವ ಪ್ರಾಯ್ ಮಾಚಯ್ಯ ಅವರು ಮಾತನಾಡಿ, ಪ್ಲಾಸ್ಟಿಕ್ ಪರಿಸರಕ್ಕೆ ಹಾನಿಕರವಾಗಿದೆ. ಪ್ಲಾಸ್ಟಿಕ್ ನಿಷೇಧ ಮಾಡಿರುವುದರಿಂದ ಪರ್ಯಾಯ ವ್ಯವಸ್ಥೆಯಾಗಿ 50 ಮೈಕ್ರೋ ಇರುವ 20 ದಿನಗಳಲ್ಲಿ ಕರಗುವಂಥ ಬ್ಯಾಗ್ ತಯಾರಿಸಲಾಗಿದೆ. ಇದಕ್ಕೆ ಪುರಸಭೆ ಸದಸ್ಯರ, ಪಟ್ಟಣದ ಸಾರ್ವಜನಿಕರ ಸಹಕಾರ ಅಗತ್ಯ ಎಂದರು.

ನಲ್ಲೂರು ಡೈರಿ ನೂತನ ಅಧ್ಯಕ್ಷರಾಗಿ ಎನ್.ಬಿ.ಸುರೇಶ್, ಉಪಾಧ್ಯಕ್ಷರಾಗಿ ಮಹದೇವಯ್ಯ ಆಯ್ಕೆ



ಚಾಮರಾಜನಗರ, ಜು.20– ತಾಲೂಕಿನ ನಲ್ಲೂರು ಹಾಲು ಉತ್ಪಾದಕರ ಸಂಘದ ನೂತನ ಅಧ್ಯಕ್ಷರಾಗಿ ಎನ್.ಬಿ.ಸುರೇಶ್, ಉಪಾಧ್ಯಕ್ಷರಾಗಿ ಮಹದೇವಯ್ಯ ಆಯ್ಕೆಯಾಗಿದ್ದಾರೆ.

ಸಂಘದ ಕಚೇರಿಯಲ್ಲಿ ಅಧ್ಯಕ್ಷ– ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಎನ್.ಬಿ.ಸುರೇಶ್, ಚಂದ್ರಮ್ಮ, ಪರಶಿವಮೂರ್ತಿ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಯ್ಯ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಮಹದೇವಯ್ಯ ಒಬ್ಬರೇ ನಾಮಪತ್ರ ಸಲ್ಲಿಸಿದ ಕಾರಣದಿಂದ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಚಂದ್ರಮ್ಮಗೆ 2 ಮತಗಳು, ಎನ್.ಬಿ.ಸುರೇಶ್‌ಗೆ 10 ಮತಗಳು ಬಂದು. ಚುನಾವಣಾಧಿಕಾರಿಯಾಗಿದ್ದ ಸುಭಾಷಿಣಿ ಅವರು ನೂತನ ಅಧ್ಯಕ್ಷರು ಆಯ್ಕೆ ಘೋಷಣೆ ಮಾಡಿದರು.

ನಿರ್ದೇಶಕರಾದ ಪುಟ್ಟರಾಜು, ಬಸವರಾಜು, ನಾಗೇಂದ್ರ, ಮಲ್ಲಪ್ಪ, ನಟರಾಜು, ಪರಶಿವ, ಸಿದ್ದರಾಜು, ಬಿ.ಸಿದ್ದರಾಜು, ಸಾವಿತ್ರಮ್ಮ, ಮುಖ್ಯ ಕಾರ್ಯನಿರ್ವಾಹಕ ಆನಂದ್ ಹಾಜರಿದ್ದರು.

ಸನ್ಮಾನ: ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ವಿಭಾಗದ ಅಧ್ಯಕ್ಷ ನಲ್ಲೂರು ಸೋಮೇಶ್, ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ಮಹದೇವಸ್ವಾಮಿ, ಗ್ರಾಪಂ ಸದಸ್ಯ ಲೋಕೇಶ್, ಮುಖಂಡರಾದ ಪಂಚೆಸೋಮೇಶ್, ಗ್ರಾಪಂ ಮಾಜಿ ಅಧ್ಯಕ್ಷ ಎನ್.ಎಂ.ಶ್ರೀಕಂಠಸ್ವಾಮಿ, ಎಸ್.ಬಸವಣ್ಣ, ಚಾಮಯ್ಯ ಯ.ಮಹದೇವಯ್ಯ ಶೇಷಯ್ಯ, ಇತರರು ಸನ್ಮಾನಿಸಿದರು.

ಚಾ.ನಗರದಲ್ಲಿ ಗೃಹಲಕ್ಷ್ಮಿ ಯೋಜನೆಗೆ ಚಾಲನೆ

ಯೋಜನೆ ಸದುಪಯೋಗಕ್ಕೆ ಜಿಲ್ಲಾಧಿಕಾರಿ ಕರೆ

ಚಾಮರಾಜನಗರ, ಜು.20– ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ಜಾರಿಗೆ ತರಲಾಗಿರುವ ಗೃಹಲಕ್ಷ್ಮಿ ಯೋಜನೆಯನ್ನು ಜಿಲ್ಲೆಯಲ್ಲಿರುವ ಎಲ್ಲಾ ಅರ್ಹ ಫಲಾನುಭವಿಗಳು ಸದುಪಯೋಗ ಮಾಡಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಸಿ.ಟಿ ತಿಳಿಸಿದರು.

ನಗರದ ಡಿ.ದೇವರಾಜ ಅರಸು ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಆಯೋಜಿಸಲಾಗಿದ್ದ ಗೃಹಲಕ್ಷ್ಮಿ ಯೋಜನೆಯ ನೋಂದಣಿ ಪ್ರಕ್ರಿಯೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಪಡಿತರ ಚೀಟಿಯಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆಗೆ ಪ್ರತಿ ತಿಂಗಳಿಗೆ 2 ಸಾವಿರ ರೂ. ನೀಡುವ ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆ ನೋಂದಣಿಗೆ ಜಿಲ್ಲೆಯಲ್ಲಿ 270 ಸೇವಾ ಕೇಂದ್ರಗಳು ಲಭ್ಯವಿದೆ. ಗ್ರಾಮ ಒನ್, ಕರ್ನಾಟಕ ಒನ್, ಬಾಪೂಜಿ ಸೇವಾ ಕೇಂದ್ರಗಳಲ್ಲಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ತೆರೆದಿರುವ ಸೇವಾ ಕೇಂದ್ರಗಳಲ್ಲಿ ಉಚಿತವಾಗಿ ನೋಂದಣಿಗೆ ಅವಕಾಶ ಮಾಡಿಕೊಡಲಾಗಿದೆ. ಅರ್ಹ ಫಲಾನುಭವಿಗಳು ಯೋಜನೆಯ ಪ್ರಯೋಜನ ಪಡೆಯಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಸೂಚಿತ ಸೇವಾ ಕೇಂದ್ರಗಳಲ್ಲಿ ಸುಸೂತ್ರವಾಗಿ ನೋಂದಣಿ ಮಾಡಿಕೊಂಡು ಸ್ಥಳದಲ್ಲಿಯೇ ಫಲಾನುಭವಿಗಳಿಗೆ ಮಂಜೂರಾತಿ ಪತ್ರ ನೀಡಲಾಗುತ್ತದೆ.



ಈ ಫಲಾನುಭವಿಗಳಿಗೆ ಮುಂದಿನ ತಿಂಗಳಿನಿಂದ ಅವರ ಖಾತೆಗೆ ಹಣ ಜಮೆಯಾಗಲಿದೆ. ಜಿಲ್ಲಾಡಳಿತ, ಗ್ರಾಮೀಣ ಅಭಿವೃದ್ಧಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳ ಸಹಕಾರದೊಂದಿಗೆ ಯೋಜನೆ ತಲುಪಿಸಲು ಸಮರ್ಪಕವಾಗಿ ವ್ಯವಸ್ಥೆ ಮಾಡಲಾಗಿದೆ ಎಂದರು.

ಜಿಲ್ಲೆಯಲ್ಲಿ ಅಂದಾಜು 2.09 ಲಕ್ಷ ಫಲಾನುಭವಿಗಳಿಗೆ ಗೃಹಲಕ್ಷ್ಮಿ ಯೋಜನೆ ಪ್ರಯೋಜನವಾಗಲಿದೆ. ಪೂರ್ವ ಅನುಮೋದನೆಗೊಂಡಿರುವ ಪಡಿತರ ಚೀಟಿಯ ಕುಟುಂಬದ ಯಜಮಾನಿ ಮಹಿಳೆ ಫಲಾನುಭವಿಯು ನೋಂದಾಯಿಸಲು ಮೊಬೈಲ್ ಸಂದೇಶ ಬರಲಿದೆ. ಸಂದೇಶದಲ್ಲಿ ನೋಂದಣಿಗೆ ನಿಗದಿ ಮಾಡಿರುವ ದಿನಾಂಕ, ಸಮಯ, ನೋಂದಣಿ ಕೇಂದ್ರ ವಿವರ ಇರಲಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ನೋಂದಣಿಗೆ ಯಾವುದೇ ಶುಲ್ಕ ನೀಡುವಂತಿಲ್ಲ. ಜಿಲ್ಲೆಯ ಯಾವುದೇ ಭಾಗದಲ್ಲಿ ಹಣ ಕೇಳುವುದು ಕಂಡುಬಂದಲ್ಲಿ ದೂರು ನೀಡಬೇಕು. ಗೃಹಲಕ್ಷ್ಮಿ ಯೋಜನೆ ಫಲಾನುಭವಿಗಳಿಗೆ ನೆರವಾಗಲು ಹಾಗೂ ಮಾಹಿತಿ ನೀಡಲು ಸಹಾಯವಾಣಿಯನ್ನು ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ತೆರೆಯಲಾಗಿದೆ ಎಂದರು.

ನೋಂದಣಿ ಕೇಂದ್ರಕ್ಕೆ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ. ಯಾವುದೇ ಮಾಹಿತಿ, ಸ್ಪಷ್ಟನೆಗಳಿಗೆ ತಾಲೂಕು ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿಗಳನ್ನು ಸಂಪರ್ಕಿಸಬೇಕು. ನೇರವಾಗಿ ನನ್ನನ್ನೂ ಸಹ ಸಂಪರ್ಕಿಸಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಂದ ಮಾಹಿತಿ ಪಡೆದು ನೀಡಲಾಗುವುದು. ಮಹಿಳೆಯರ ಆರ್ಥಿಕ, ಸಾಮಾಜಿಕ ಸಶಕ್ತಿಕರಣಕ್ಕಾಗಿ ಅನುಷ್ಠಾನವಾಗುತ್ತಿರುವ ಗೃಹಲಕ್ಷ್ಮಿ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಗೀತಾಲಕ್ಷ್ಮಿ ತಿಳಿಸಿದರು.

ಇದೇ ಸಂದರ್ಭದಲ್ಲಿ ಯೋಜನೆಗೆ ನೋಂದಣಿಯಾದ ಫಲಾನುಭವಿಗಳಿಗೆ ಮಂಜೂರಾತಿ ಪತ್ರವನ್ನು ವಿತರಿಸಲಾಯಿತು. ನಗರಸಭಾ ಸದಸ್ಯರಾದ ನೀಲಮ್ಮ, ಖಲೀಲ್ ಉಲ್ಲಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಸುಧಾ, ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಉದ್ಘಾಟನಾ ಕಾರ್ಯಕ್ರಮದ ಬಳಿಕ ನಗರದ ಜಿಲ್ಲಾಡಳಿತ ಭವನದಲ್ಲಿ ತೆರೆಯಲಾಗಿರುವ ಸಹಾಯವಾಣಿ ಕೇಂದ್ರಕ್ಕೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಸಿ.ಟಿ ಅವರು ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಸರಸ್ವತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಗೀತಾಲಕ್ಷ್ಮಿ ಇತರರು ಹಾಜರಿದ್ದರು.

ಮಾಜಿ ಸಚಿವ ವಿ.ಸೋಮಣ್ಣ ಹುಟ್ಟುಹಬ್ಬ ಆಚರಣೆ



ಚಾಮರಾಜನಗರ, ಜು.20– ಮಾಜಿ ಸಚಿವ ವಿ.ಸೋಮಣ್ಣ ಅವರ 73 ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗದ ವತಿಯಿಂದ ಪೌರಕಾರ್ಮಿಕರಿಗೆ ಸೀರೆ, ಬಟ್ಟೆ ವಿತರಿಸಲಾಯಿತು.

ನಗರದ ಸಿಡಿಎಸ್ ಭವನದಲ್ಲಿ ವಿ.ಸೋಮಣ್ಣ ಅಭಿಮಾನಿ ಬಳಗದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ನಗರಸಭಾ ಅಧ್ಯಕ್ಷೆ ಆಶಾ ನಟರಾಜು, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ನಗರಸಭಾ ಸದಸ್ಯ ಶಿವರಾಜ್, ಎಪಿಎಂಸಿ ನಿರ್ದೇಶಕ ವೆಂಕಟರಾವ್ ಸಾಠೆ, ಮುಖಂಡರಾದ ನಟರಾಜು, ಕೊತ್ತಲವಾಡಿ ಕುಮಾರ್, ಚಂದ್ರಶೇಖರ್, ಉಡಿಗಾಲ ಮಲ್ಲಿಕಾರ್ಜುನ್, ರಾಜು, ಅಮಚವಾಡಿ ಮಹೇಂದ್ರ, ಕೆಂಪರಾಜು ಇತರರು ಹಾಜರಿದ್ದರು.

ಅನ್ನ ಸಂತರ್ಪಣೆ: ಮಾಜಿ ಸಚಿವ ವಿ.ಸೋಮಣ್ಣ ಅವರ 73ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಅವರ ಅಭಿಮಾನಿ ಬಳಗ, ಇಂಚರ ಗ್ರೂಪ್ಸ್ ವತಿಯಿಂದ ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಈಡುಗಾಯಿ ಒಡೆದು ಸಾರ್ವಜನಿಕರಿಗೆ ಅನ್ನಸಂತರ್ಪಣೆ ಮಾಡಲಾಯಿತು.

ಸ್ಪೈಲ್ ಮಂಜು, ಡಾ.ಭಾರತಿ, ಡಾ.ಪ್ರದೀಪ್, ವಿ.ಸೋಮಣ್ಣ ಅಭಿಮಾನಿ ಬಳಗದ ಕೊತ್ತಲವಾಡಿ ಕುಮಾರ್, ಮಂಜೇಶ್ ಮೂಡ್ಲುಪುರ, ಶಿವುವಿರಾಟ್, ಸಿ.ಎಂ.ಕೃಷ್ಣಮೂರ್ತಿ, ಪೃಥ್ವಿ, ಬಸವರಾಜು ಕಂಠಿ, ಗುರು ಕಾವುದವಾಡಿ, ರಾಕೇಶ್, ಪ್ರಸನ್ನ, ಸುಹಾಸ್, ನಾಗಚೇತ್, ಶಮಿತ್, ರಾಜು ಈಶ್ವರ್ ರಕ್ಷಿತ್, ಯುವಗಿರಿ, ಬಸಪ್ಪ ರಾಜಣ್ಣ, ಗಜ, ಮಹದೇವಸ್ವಾಮಿ, ಸುಭಾಷ್ ಪಟೇಲ್, ಮುದ್ದಪ್ಪ ಇತರರಿದ್ದರು.

ಸಿಹಿ ವಿತರಣೆ: ಹಿರಿಯ ಮುಖಂಡರು ಹಾಗೂ ಮಾಜಿ ಸಚಿವರಾದ ವಿ. ಸೋಮಣ್ಣ ಅವರ 73ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ವಿ. ಸೋಮಣ್ಣ ಅಭಿಮಾನಿಗಳ ಬಳಗದಿಂದ ನಗರದಲ್ಲಿ ಬೀದಿ ಬದಿ ವ್ಯಾಪಾರಿಗಳು ಹಾಗೂ ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮ ವ್ಯಕ್ತಪಡಿಸಿದರು.

ಬಳಗದ ಮಹೇಶ್ ಪಟೇಲ್, ಕೆಲ್ಲಂಬಳ್ಳಿ ನಾಗರಾಜು, ಗ್ರಾಪಂ ಸದಸ್ಯ ರಾಜೇಶ್, ಸಿ.ಡಿ. ಪ್ರಕಾಶ್, ಮಾದಾಪುರ ಪಟೇಲ್ ಸೋಮಣ್ಣ, ಕೊತ್ತಲವಾಡಿ ಪ್ರಕಾಶ್, ಮರಿಯಾಲ ಶಿವಸ್ವಾಮಿ, ಕಾಳನಹುಂಡಿ ದಿನೇಶ್, ವಿ.ಸಿ. ಶ್ರೀಧರ್, ಪ್ರಥಮ್, ನಾಗೇಂದ್ರ, ಮಂಜು ಇತರರು ಇದ್ದರು.





ವರ್ತಕರ ಸಂಘದ ಅಧ್ಯಕ್ಷರಾಗಿ ಎಚ್.ಬಿ. ರಾಜಶೇಖರ್ ಆಯ್ಕೆ

ವರ್ತಕರ ಶ್ರೇಯೋಭಿವೃದ್ಧಿಗೆ ದುಡಿದು ಮಾದರಿ ಸಂಘವನ್ನಾಗಿಸುವೆ: ರಾಜಶೇಖರ್

ಚಾಮರಾಜನಗರ, ಜು. 20– ವರ್ತಕರ ಸಂಘದ 2023–24ನೇ ಸಾಲಿನ ಅಧ್ಯಕ್ಷರಾಗಿ ಎಚ್.ಬಿ. ರಾಜಶೇಖರ್ ಆಯ್ಕೆಯಾದರು.



ನಗರದ ಬಿ. ರಾಚಯ್ಯ ಜೋಡಿ ರಸ್ತೆಯಲ್ಲಿರುವ ವರ್ತಕರ ಭವನದ ಸಂಘದ ಕಚೇರಿ ಸಭಾಂಗಣದಲ್ಲಿ ಅಧ್ಯಕ್ಷ ಹಾಗೂ ನಾಲ್ವರು ಪದಾಧಿಕಾರಿಗಳ ಆಯ್ಕೆ ಚುನಾವಣೆ ನಡೆಯಿತು.

ವರ್ತಕರ ಸಂಘದ ಅಧ್ಯಕ್ಷ ಸ್ಥಾನಕ್ಕೆ ಎಚ್.ಬಿ. ರಾಜಶೇಖರ್ ಹಾಗೂ ಎನ್. ಶಂಕರ್ ಅವರು ನಾಮಪತ್ರ ಸಲ್ಲಿಸಿದರು. 21 ಮಂದಿ ನೂತನ ನಿರ್ದೇಶಕರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು. ಎಚ್.ಬಿ. ರಾಜಶೇಖರ್ 12 ಮತಗಳನ್ನು ಪಡೆದು ಗೆಲುವು ಸಾಧಿಸಿದರೆ, ಎನ್. ಶಂಕರ್ 9 ಮತಗಳನ್ನು ಪಡೆದುಕೊಂಡಿದ್ದರು. ಉಪಾಧ್ಯಕ್ಷರಾಗಿ ಸಿ.ಎಸ್. ಮಹೇಶ್‌ಕುಮಾರ್ ಆಯ್ಕೆಯಾದರು. ಉಳಿದಂತೆ ಕಾರ್ಯದರ್ಶಿಯಾಗಿ ಕೆ.ಎಸ್. ಚಿದಾನಂದಗಣೇಶ್, ಸಹ ಕಾರ್ಯದರ್ಶಿಯಾಗಿ ಎಂ. ಕಮಲ್ ರಾಜ್ ಹಾಗೂ ಖಜಾಂಚಿಯಾಗಿ ಎಚ್.ಬಿ. ವಿಶ್ವಕುಮಾರಸ್ವಾಮಿ ಅವರು ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಗಳಾಗಿ ಸಂಘದ ಮಾಜಿ ಅಧ್ಯಕ್ಷರಾದ ಎಸ್. ಬಾಲಸುಬ್ರಮಣ್ಯ, ಶ್ರೀನಿವಾಸ್ ಎಸ್‌ಆರ್‌ಎಸ್, ಕಾನೂನು ಸಲಹೆಗಾರರ ನಂದಕುಮಾರ್ ಕರ್ತವ್ಯ ನಿರ್ವಹಿಸಿದರು.

ಸಂಘದ ಅಭಿವೃದ್ಧಿಗೆ ಬದ್ಧ: ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಎಚ್.ಬಿ. ರಾಜಶೇಖರ್ ಅಧಿಕಾರ ವಹಿಸಿಕೊಂಡು ಮಾತನಾಡಿ, ಸಂಘದ ನಿರ್ದೇಶಕರು ಹಾಗೂ ಸದಸ್ಯರು ನನ್ನ ಮೇಲೆ ವಿಶ್ವಾಸವಿಟ್ಟು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿರುವುದಕ್ಕೆ ಚಿರಋಣಿ, ಮುಂದಿನ ದಿನಗಳಲ್ಲಿ ವರ್ತಕರ ಅಭಿವೃದ್ಧಿ ಮತ್ತು ಕುಂದುಕೊರತೆಯನ್ನು ಬಗೆಹರಿಸುವ ಜೊತೆಗೆ ವರ್ತಕರು ಮತ್ತು ಗ್ರಾಹಕರ ಸಮನ್ವಯತೆಯನ್ನು ಸಾಧಿಸಿ, ಸಂಘವನ್ನು ಮಾದರಿ ಸಂಘವನ್ನಾಗಿಸಲು ನಿಮ್ಮೆಲ್ಲರ ಸಹಕಾರದೊಂದಿಗೆ ಕಾರ್ಯನಿರ್ವಹಿಸುವುದಾಗಿ ತಿಳಿಸಿದರು. ಎಪಿಎಂಸಿ ನಿರ್ದೇಶಕ ವೆಂಕಟರಾವ್ ಸಾಠೆ ನೂತನ ಅಧ್ಯಕ್ಷರು, ಪದಾಧಿಕಾರಿಗಳನ್ನು ಶಾಲು ಹೊದಿಸಿ ಹಾರ ಹಾಕಿ ಅಭಿನಂದಿಸಿದರು. ಸಂಘದ ಮಾಜಿ ಅಧ್ಯಕ್ಷರು, ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್: ತೆಂಗಿನ ಗರಿ ರಾಶಿಗೆ ಬೆಂಕಿ

ಚಾಮರಾಜನಗರ, ಜು.20– ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ತೆಂಗಿನಗರಿ ರಾಶಿಗೆ ಬೆಂಕಿ ಬಿದ್ದಿದ್ದು, ಅಗ್ನಿಶಾಮಕ ಸಿಬ್ಬಂದಿಗಳ ಕಾರ್ಯಾಚರಣೆಯಿಂದ ಮುಂದಾಗುತ್ತಿದ್ದ ಅನಾಹುತ ತಪ್ಪಿದೆ. ತಾಲೂಕಿನ ಕಿಲಗೆರೆ ಗ್ರಾಮದ ಕುಮಾರ್ ಎಂಬುವವರ ಜಮೀನಿನಲ್ಲಿ ಸಂಗ್ರಹಿಸಿಟ್ಟಿದ್ದ ತೆಂಗಿನ ಗರಿ ರಾಶಿಗೆ ವಿದ್ಯುತ್ ತಂತಿಗಳು ಒಂದಕ್ಕೊಂದು ತಾಗಿ ಉಂಟಾದ ಸರ್ಕ್ಯೂಟ್‌ನಿಂದಾಗಿ ಬೆಂಕಿ ಹೊತ್ತುಕೊಂಡಿದೆ. ಅದರ ಸಮೀಪದಲ್ಲೇ ಮೋಟಾರ್ ಮನೆಯಿದ್ದು, ಅದೃಷ್ಟವಶಾತ್ ಯಾವುದೇ ಹಾನಿಯಾಗಿರುವುದಿಲ್ಲ. ಕೂಡಲೇ ಸಮಯಕ್ಕೆ ಸರಿಯಾಗಿ ಅಗ್ನಿಶಾಮಕದಳ ಆಗಮಿಸಿ ಬೆಂಕಿ ನಂದಿಸುವ ಮೂಲಕ ಮುಂದಾಗುತ್ತಿದ್ದ ಅನಾಹುತವನ್ನು ತಪ್ಪಿಸಿದ್ದಾರೆ.

ಮೈಸೂರು ಮಿತ್ರ

ಶುಕ್ರವಾರ 21 ಜುಲೈ 2023

ಮೊಬೈಲ್ ಜಾಸ್ತಿ ಬಳಸಬೇಡ ಎಂದಿದ್ದಕ್ಕೆ ಜಲಪಾತಕ್ಕೆ ಹಾರಿದ ಬಾಲಕಿ: ಅದೃಷ್ಟವಶಾತ್ ಪಾರು

ಛತ್ತೀಸ್‌ಗಢ, ಜು.20– ಮೊಬೈಲ್ ಜಾಸ್ತಿ ಬಳಸಬೇಡ ಎಂದಿದ್ದಕ್ಕೆ ಶಾಲಾ ಬಾಲಕಿ ಜಲಪಾತಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿರುವ ಘಟನೆ ಛತ್ತೀಸ್‌ಗಢದ ಬಸ್ತಾರ್‌ನಲ್ಲಿರುವ ಚಿತ್ರಕೋಟೆಯಲ್ಲಿ ಎಂಬ ಜಲಪಾತದಲ್ಲಿ ಘಟನೆ ನಡೆದಿದೆ. ತಾಯಿಯಾಗಿ ಮೊಬೈಲ್ ಬಳಸಬೇಡ ಎಂದು ಪೋಷಕರು ಗದರಿದ್ದಕ್ಕೆ ಸುಮಾರು 90 ಅಡಿ ಎತ್ತರದ ಜಲಪಾತದಿಂದ ಈ ಬಾಲಕಿ ಹಾರಿದ್ದು ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾಳೆ. ಬಾಲಕಿ ಜಲಪಾತಕ್ಕೆ ಹಾರುತ್ತಿರುವ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ಭಾರೀ ವೈರಲ್ ಆಗಿದ್ದು, ಅತಿಯಾದ ಮೊಬೈಲ್ ಬಳಕೆ ಮಕ್ಕಳಲ್ಲಿ ಮುಷ್ಟಿಯಾಗಿ ವರ್ತಿಸುತ್ತಿದ್ದಾರೆ ಎಂಬುದಕ್ಕೆ ಈ ದೃಶ್ಯ ಸಾಕ್ಷಿಯಾಗಿದೆ. ಆದ್ದರಿಂದ ಮಕ್ಕಳಿಂದ ಮೊಬೈಲ್ ದೂರವಿಡಿ ಎಂದು ಹಲವರು ಪ್ರತಿಕ್ರಿಯಿಸಿದ್ದಾರೆ.

ಮೂರನೇ ಪುಟದಿಂದ

ಕಲಾಪ ಬಹಿಷ್ಕಾರ

ಪ್ರತಿಪಕ್ಷಗಳು ದೂರು ನೀಡುವುದಕ್ಕೂ ಮುನ್ನವೇ ವಿಧಾನಸಭೆಯ ಕಾರ್ಯದರ್ಶಿ ವಿಶಾಲಾಕ್ಷಿ ಜತೆಗೂಡಿ ಸಭಾಧ್ಯಕ್ಷ ಯು.ಟಿ.ಖಾದರ್, ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ನಿನ್ನೆ ವಿಧಾನಸಭೆಯಲ್ಲಿ ನಡೆದ ಘಟನೆಗಳ ಮಾಹಿತಿ ನೀಡಿ, ನಮ್ಮಿಂದ ಯಾವುದೇ ಲೋಪವಾಗಿಲ್ಲ ಎಂದು ಸ್ಪಷ್ಟನೆ ನೀಡಿದರು. ರಾಜಕೀಯ ಸಮಾವೇಶಕ್ಕೆ ಬಂದ ಗಣ್ಯರನ್ನು ಇರಿಸಲು ಹಿರಿಯ ಅಧಿಕಾರಿಗಳನ್ನು ಬಳಸಿಕೊಂಡಿದ್ದಾರೆಂದು ಪ್ರತಿಪಕ್ಷಗಳು ಸದನದಲ್ಲಿ ಗದ್ದಲ–ಗೊಂದಲ ಉಂಟುಮಾಡಿ ಧರಣಿ ನಡೆಸಿ, ಆ ಸಂದರ್ಭದಲ್ಲಿ ಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದ್ದಾರೆ.

ಅಗೌರವ ತೋರಿದ ಹತ್ತು ಬಿಜೆಪಿ ಶಾಸಕರನ್ನು ಈ ಅಧಿವೇಶನದ ಅವಧಿ ಮುಗಿಯುವವರೆಗೂ ಅಮಾನತು ಮಾಡಿರುವುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ.

ಸಭಾಧ್ಯಕ್ಷರು ರಾಜ್ಯಪಾಲರನ್ನು ಭೇಟಿಯಾಗಿರುವ ವಿಷಯ ತಿಳಿಯುತ್ತಿದ್ದಂತೆ ಬಿಜೆಪಿ ಸದಸ್ಯರು, ಜೆಡಿಎಸ್ ಸದಸ್ಯರೊಂದಿಗೆ ರಾಜಭವನಕ್ಕೆ ತೆರಳಿ ಪ್ರತಿ ದೂರು ಸಲ್ಲಿಸಿದರು. ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ಹಾಗೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಜತೆಗೂಡಿ ರಾಜ್ಯಪಾಲರನ್ನು ಭೇಟಿಯಾಗಿ ಸರ್ಕಾರದ ನಿರ್ದೇಶನದಂತೆ ಸಭಾಧ್ಯಕ್ಷರು ನಡೆದುಕೊಂಡು ಹತ್ತು ಸದಸ್ಯರನ್ನು ಅಮಾನತು ಮಾಡಿದ್ದಾರೆ. ಸದನದ ಒಳಗೆ ಧರಣಿ ಕುಳಿತ ಸದಸ್ಯರನ್ನು ಮಾರ್ಷಲ್‌ಗಳ ಮೂಲಕ ಬಲವಂತವಾಗಿ ಹೊರ ಹಾಕಿಸಿದರು.

ಇದೊಂದು ಪ್ರಜಾಪ್ರಭುತ್ವದ ಕಗ್ಗೊಲೆ. ಸಭಾಧ್ಯಕ್ಷರು ಸದನದ ಎಲ್ಲಾ ಸದಸ್ಯರ ಹಿತ ಕಾಪಾಡಬೇಕು. ಆದರೆ, ಅವರು ಆಡಳಿತ ಪಕ್ಷದ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ. ನಾವು ಅವರ ವಿರುದ್ಧ ಅವಿಶ್ವಾಸ ನಿರ್ಣಯ ನೋಟಿಸ್ ನೀಡಿದ್ದೇವೆ. ನಿನ್ನೆಯ ಘಟನೆಯ ಬಗ್ಗೆ ಸಭಾಧ್ಯಕ್ಷರಿಂದ ವಿವರ ಪಡೆದು ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದ್ದಾರೆ. ರಾಜ್ಯಪಾಲರ ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ನಾಯಕರು, ವಿಧಾನಮಂಡಲದ ಕಲಾಪದಲ್ಲಿ ನಾವು ಮತ್ತು ಜೆಡಿಎಸ್ ಸದಸ್ಯರು ಉಳಿದ ಅವಧಿಗೆ ಭಾಗವಹಿಸುವುದಿಲ್ಲ. ಸರ್ಕಾರ 3.27 ಲಕ್ಷ ಕೋಟಿ ರೂ. ಗಾತ್ರದ ಮುಂಗಡಪತ್ರವನ್ನು ಏಕಪಕ್ಷೀಯವಾಗಿ ಅನುಮೋದನೆ ಪಡೆದುಕೊಳ್ಳಲಿ. ಸಭಾಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ತಂದಿದ್ದೇವೆ. ಅದು ಇತ್ಯರ್ಥವಾಗುವ ತನಕ ನಮ್ಮ ನಿಲುವು ಬದಲಾವಣೆ ಇಲ್ಲ. ಮುಂಬರುವ ಚಳಿಗಾಲದ ಅಧಿವೇಶನದಲ್ಲೂ ಹೋರಾಟ ನಡೆಸುವ ಎಚ್ಚರಿಕೆ ನೀಡಿದ್ದಾರೆ.

ದೇಶದಲ್ಲೇ ನಮ್ಮ 'ಗ್ಯಾರಂಟಿ' ದಾಖಲೆ

ಗೃಹಜ್ಯೋತಿಗೆ 13 ಸಾವಿರ ಕೋಟಿ, ಶಕ್ತಿಗೆ 2800 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ ಎಂದರು. ದಿನಪತ್ರಿಕೆಗಳಲ್ಲಿ ಬಜೆಟ್ ಬಗ್ಗೆ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಮುಖ್ಯಮಂತ್ರಿಗಳು ಉಲ್ಲೇಖಿಸಿದರು. 2022–23 ಬಜೆಟ್‌ನಲ್ಲಿ ಗಾತ್ರ 2,65,720 ಕೋಟಿ ಇತ್ತು. ನಮ್ಮ ಸರ್ಕಾರದ ಬಜೆಟ್ 3,27,747 ಕೋಟಿ, 62,027 ಸಾವಿರ ಕೋಟಿ ಜಾಸ್ತಿಯಿದೆ. ಬೆಳವಣಿಗೆಯ ಪ್ರಮಾಣ ಶೇ.22 ಇದೆ. ರೈತರಿಗೆ 3 ಲಕ್ಷದವರೆಗೆ ಬಡ್ಡಿರಹಿತ ಸಾಲ ಮುಂಚೆ ನೀಡುತ್ತಿದ್ದೆವು. ಈಗ 5 ಲಕ್ಷದವರೆಗೆ ಮೊತ್ತವನ್ನು ಹೆಚ್ಚಿಸಲಾಗಿದೆ. 10 ಲಕ್ಷದವರೆಗೆ 3 % ಬಡ್ಡಿ ಇದ್ದಿದ್ದು , ಈಗ ಅದನ್ನು 15 ಲಕ್ಷಕ್ಕೆ ಏರಿಸಲಾಗಿದೆ. ಶಾಲಾ ವಿದ್ಯಾರ್ಥಿಗಳಿಗೆ 9 , 10 ತರಗತಿ ವಿದ್ಯಾರ್ಥಿಗಳಿಗೂ ಸೇರಿ ವಾರದಲ್ಲಿ 2 ದಿನ ಮೊಟ್ಟೆ ನೀಡಲಾಗುತ್ತಿದೆ ಎಂದು ವಿವರಿಸಿದರು.

ನಾವು 5 ವರ್ಷದಲ್ಲಿ 14,54,663 ಮನೆಗಳನ್ನು ಕಟ್ಟಿಸಿದ್ದೆವು. ನಾವು ಹಿಂದಿನ ಸರ್ಕಾರಕ್ಕಿಂತ 6 ಲಕ್ಷ ಮನೆಗಳನ್ನು ಹೆಚ್ಚಾಗಿ ನಿರ್ಮಿಸಿದ್ದೇವೆ. ನಮ್ಮ ಸರ್ಕಾರದ ಅವಧಿಯಲ್ಲಿ 14,169 ಹಟ್ಟಿಗಳಿಗೆ ಹಕ್ಕುಪತ್ರ ನೀಡಿದ್ದೆವು. ಅವರ ಸರ್ಕಾರ 8037 ಕಿ.ಮೀ ಮಾತ್ರ ನಿರ್ಮಿಸಿದ್ದಾರೆ ಎಂದು ತಿಳಿಸಿದರು. ಎಸ್‌ಸಿಎಸ್‌ಪಿ/ಟಿಎಸ್‌ಪಿ ಕಾನೂನು ಬಂದ ನಂತರ, ನಮ್ಮ ಸರ್ಕಾರ 5 ವರ್ಷದಲ್ಲಿ 88530 ಕೋಟಿ ಖರ್ಚು ಮಾಡಲಾಗಿದೆ. ನಮ್ಮದು ಬಡವರ ಪರವಾದ ಸರ್ಕಾರ. ನಮ್ಮ ಬಜೆಟ್ ಗಾತ್ರ 2018–19ರಲ್ಲಿ 202297 ಕೋಟಿ ಇತ್ತು. ಆಗ 21691.5 ಎಸ್‌ಸಿ, ಎಸ್‌ಟಿಗಳಿಗೆ ಮೀಸಲಿಟ್ಟಿದ್ದೆವು. ಶಿಕ್ಷಣ, ಸಮಾಜಕಲ್ಯಾಣ, ಕೃಷಿ, ವಿದ್ಯುತ್, ಬೆಂಗಳೂರು ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಸಾಮಾಜಿಕ, ಆರ್ಥಿಕ ವಲಯಕ್ಕೆ ಕಡಿಮೆ ನೀಡಿಲ್ಲ. ನೀರಾವರಿ, ವಸತಿ, ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ನಮ್ಮ ಸರ್ಕಾರ ಎಲ್ಲರನ್ನು ಒಳಗೊಂಡ ಅಭಿವೃದ್ಧಿಯ ಧ್ಯೇಯವನ್ನು ನಂಬಿದೆ ಎಂದರು.

2023–24ನೇ ಸಾಲಿನಲ್ಲಿ ನಮ್ಮ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಈ ಆರ್ಥಿಕ ವರ್ಷಕ್ಕೆ ಸರ್ಕಾರದ ಮುಂಗಡ ಪತ್ರವನ್ನು ಮಂಡಿಸಿದ್ದು, ಹೊಸ ಸರ್ಕಾರ ಬಂದ ಮೇಲೆ ಜನರ ಆಶೋತ್ತರಗಳಿಗೆ ಸ್ಪಂದಿಸಲು, ಸರ್ಕಾರದ ನೀತಿ ನಿಲುವುಗಳು, ಪ್ರಣಾಳಿಕೆಯ ಭರವಸೆಗಳನ್ನು ಒಳಗೊಂಡಿರುವ ಆಯವ್ಯಯ ಮಂಡಿಸುವುದು ನಮ್ಮ ಕರ್ತವ್ಯ. ಬಜೆಟ್ ಮೇಲೆ 62 ಜನ ಆಡಳಿತ ಹಾಗೂ ವಿರೋಧ ಪಕ್ಷದವರು ಸೇರಿ ಮಾತನಾಡಿದ್ದಾರೆ. ಸುಮಾರು 12 ಗಂಟೆ 52 ನಿಮಿಷಗಳ ಕಾಲ ಚರ್ಚೆಯಲ್ಲಿ ಭಾಗವಹಿಸಿದ್ದಾರೆ. ಟೀಕೆ ಹಾಗೂ ಮೆಚ್ಚುಗೆ ವ್ಯಕ್ತಪಡಿಸಿರುವುದರಿಂದನ್ನೂ ಸ್ವಾಗತಿಸುತ್ತೇನೆ ಎಂದು ತಿಳಿಸಿ ಚರ್ಚೆಯಲ್ಲಿ ಭಾಗವಹಿಸಿ ಅನಿಸಿಕೆಗಳನ್ನು ವ್ಯಕ್ತ ಮಾಡಿದ ವಿರೋಧ ಪಕ್ಷದವರಿಗೆ ಧನ್ಯವಾದಗಳನ್ನು ತಿಳಿಸಿದರು.

ಜು.27ರಂದು ಬಂದ್‌ಗೆ ಕರೆ

23 ಸಂಘಟನೆಗಳ ಮುಖಂಡರಾದ ರಾಧಾಕೃಷ್ಣ ಹೊಳ್ಳ, ಜಿ. ನಾರಾಯಣ ಸ್ವಾಮಿ, ರಘು ನಾರಾಯಣಗೌಡ, ಎಂ.ಮಂಜುನಾಥ್, ಗಂಡಸಿ ಸದಾನಂದ ಸ್ವಾಮಿ ಭಾಗಿಯಾಗಿದ್ದರು.

ಸರ್ಕಾರದ ಮುಂದೆ ಹಲವು ಬೇಡಿಕೆಗಳು: ವೈಟ್‌ಬೋರ್ಡ್ ವಾಹನಗಳು ನಿಯಮ ಉಲ್ಲಂಘಿಸಿ ಬಾಡಿಗೆಗೆ ಓಡಿಸುವುದನ್ನು ತಡೆಯಬೇಕು ಮತ್ತು ಅಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಚಾಲಕರ ಶಾಲಾ–ಕಾಲೇಜು ಮಕ್ಕಳಿಗೆ ಧನ ಸಹಾಯ ನೀಡಬೇಕು. ಸರ್ಕಾರಿ ವಾಹನದಲ್ಲಿ ನಿರ್ದಿಷ್ಟ ಪ್ರಯಾಣಿಕರಿಗೆ ಮಾತ್ರ ಪ್ರಯಾಣಿಸಲು ಅವಕಾಶ ನೀಡಬೇಕು. ಶಕ್ತಿ ಯೋಜನೆಗೆ ಹೊಸ ಮಾರ್ಗಸೂಚಿ ರೂಪಿಸಬೇಕು. ಪ್ರವಾಸಿ ಹಾಗೂ ಕಾಂಟ್ರ್ಯಾಕ್ಟ್ ಕ್ಯಾರೇಜ್ ಬಸ್‌ಗಳಿಗೆ ತೆರಿಗೆ ಕಡಿತಗೊಳಿಸಬೇಕು. ಐದು ಪರ್ಸೆಂಟ್‌ಗಳಿಗಿಂತ ಹೆಚ್ಚು ಕಮಿಷನ್ ಪಡೆಯುತ್ತಿರುವ ಓಲಾ ಮತ್ತು ಊಬರ್ ಮತ್ತು ರೆಡ್ ಬಸ್‌ಗಳಂತಹ ಆನ್‌ಲೈನ್ ಕಂಪನಿಗಳಿಗೆ ನಿರ್ಬಂಧ ಹೇರಬೇಕು. ಚಾಲಕರಿಗೆ ವಸತಿ ಯೋಜನೆ ಸೇರಿದಂತೆ ಹಲವು ಬೇಡಿಕೆಗಳನ್ನು ಮುಂದಿಡಲಾಗಿದೆ.

ಬಂದ್‌ಗೇನು ಕಾರಣ?: ರಾಜ್ಯ ಸರ್ಕಾರದ ಕೆಲವು ನೀತಿಗಳಿಂದ ಖಾಸಗಿ ಸಾರಿಗೆಗೆ ನಷ್ಟವಾಗುತ್ತಿದೆ. ಈ ಬಗ್ಗೆ ಸರ್ಕಾರವನ್ನು ಎಚ್ಚರಿಸಲು ಖಾಸಗಿ ಸಾರಿಗೆ ವಾಹನಗಳ ಮಾಲೀಕರು ಹಾಗೂ ಚಾಲಕರು ಪ್ರತಿಭಟನೆಗೆ ಮುಂದಾಗಿದ್ದಾರೆ. ಶಕ್ತಿ ಯೋಜನೆ ಮತ್ತಿತರರಿಂದ ವೈಟ್ ಬೋರ್ಡ್ ವಾಹನಗಳನ್ನು ವಾಣಿಜ್ಯ ವಾಹನವಾಗಿ ಉಪಯೋಗಿಸುತ್ತಿರುವುದು, ದ್ವಿಚಕ್ರ ವಾಹನಗಳಿಗೆ ಮತ್ತು ಪರವಾನಗಿ ನೀಡುತ್ತಿರುವುದು ಸೇರಿದಂತೆ ಹಲವು ಯೋಜನೆಗಳಿಂದ ಖಾಸಗಿ ಸಾರಿಗೆ ನಲುಗಿ ಹೋಗಿದೆ. ಇದರಿಂದ ಇದನ್ನೇ ನಂಬಿಕೊಂಡು ಜೀವನ ಸಾಗಿಸುತ್ತಿರುವ ಚಾಲಕರ ಜೀವನ ದುಸ್ತರವಾಗಿದೆ. ಸರ್ಕಾರದ ಈ ನೀತಿಗಳಿಂದ ಆಟೋ, ಕ್ಯಾಬ್ ಹಾಗೂ ಖಾಸಗಿ ಬಸ್ ಚಾಲಕರು ಸಾಲ, ಇಎಂಐ ಕಟ್ಟಲು ಮತ್ತು ಜೀವನ ಸಾಗಿಸಲು ಕಷ್ಟಸಾಧ್ಯವಾಗಿದೆ. ಇದರಿಂದ ರಾಜ್ಯದ 23 ಸಾರಿಗೆ ಸಂಘಟನೆಗಳು ಸೇರಿ ಪ್ರತಿಭಟನೆಗೆ ಮುಂದಾಗುತ್ತಿದ್ದೇವೆ ಎಂದು ಖಾಸಗಿ ಸಾರಿಗೆ ಮಾಲೀಕರು ಆರೋಪಿಸಿದ್ದಾರೆ.

ಉಗ್ರರ ಸೆರೆ: ಮೈಸೂರಲ್ಲಿ ಕಟ್ಟೆಚ್ಚರ


ಮೈಸೂರಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ 9 ಚೆಕ್‌ಪೋಸ್ಟ್‌ಗಳಲ್ಲೂ ದಿನದ 24 ಗಂಟೆಯೂ ಪೊಲೀಸರು ವಾಹನಗಳನ್ನು ತಪಾಸಣೆ ಮಾಡಿ ಸಂಶಯ ಬಂದಲ್ಲಿ ವಿಚಾರಣೆಗೊಳಪಡಿಸಲಾಗುತ್ತಿದೆ. ಸಣ್ಣಪುಟ್ಟ ಘರ್ಷಣೆ, ಗದ್ದಲಗಳಾದಲ್ಲಿ, ಆ ವ್ಯಾಪ್ತಿಯ ಪೊಲೀಸರು ಕಡ್ಡಾಯವಾಗಿ ಶಾಂತಿ ಸಭೆ ನಡೆಸುವಂತೆಯೂ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು. ಮೈಸೂರಿನ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಬಂದೋಬಸ್ತ್ ಸ್ಕೀಂ ಮಾಡಿ ತಂಡವನ್ನು ಸಜ್ಜುಗೊಳಿಸಲಾಗಿದೆ. ಯಾವುದೇ ಅಹಿತಕರ ಘಟನೆಗಳು ಸಂಭವಿಸಿದರೂ, ಆ ತಂಡ ತಕ್ಷಣವೇ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ನಿಯಂತ್ರಿಸಬೇಕು ಎಂದ ಮುತ್ತುರಾಜ್, ಆಸ್ಪತ್ರೆ, ಆರೋಗ್ಯ, ಸಂಬಂಧಿಸಿದಂತೆ, ಹಿತೈಷಿಗಳ ಸಾವಿನಂತಹ ತುರ್ತು ಸಂದರ್ಭಗಳನ್ನು ಹೊರತುಪಡಿಸಿ ಸಿಬ್ಬಂದಿಗಳು, ಅಧಿಕಾರಿಗಳಿಗೆ ರಜೆ ಕಡಿತಗೊಳಿಸಲಾಗಿದೆ ಎಂದು ಅವರು ನುಡಿದರು.

ಎಲ್ಲಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ರಾತ್ರಿ ಮತ್ತು ಹಗಲಿನ ಗಸ್ತಿನಲ್ಲಿದ್ದು, ನಿಗಾ ವಹಿಸಬೇಕು. ಯಾವುದೇ ಮಾಹಿತಿ ಬಂದರೂ, ತಕ್ಷಣ ಸ್ಪಂದಿಸಿ ಕ್ರಮಕೈಗೊಳ್ಳಲು ಮುಂದಾಗುವಂತೆ ತಿಳಿಸಲಾಗಿದೆ. ಘರ್ಷಣೆ, ಅಪಾಯ ಉಂಟಾಗುವಂತಹ ಮಾಹಿತಿ ಹರಿದು ಬಿಟ್ಟವರನ್ನು ಪತ್ತೆ ಮಾಡಿ ಅಗತ್ಯ ಕ್ರಮ ವಹಿಸಬೇಕೆಂದು ಅವರು ತಿಳಿಸಿದರು. ಒಟ್ಟಾರೆ ದಿನದ 24 ಗಂಟೆಯೂ ಪೊಲೀಸರು ಸನ್ನದ್ಧರಾಗಿದ್ದು, ನಿಗಾ ವಹಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರ ವಹಿಸಬೇಕು. ರಾತ್ರಿ ವೇಳೆ ಬಾರ್, ರೆಸ್ಟೋರೆಂಟ್‌ಗಳ ಬಳಿ ಮಫ್ತಿಯಲ್ಲಿ ಹೋಗಿ ಯಾರಾದರೂ ಗಲಾಟೆ ಮಾಡಿದಲ್ಲಿ ಕರೆತಂದು ವಿಚಾರಣೆ ನಡೆಸುವಂತೆಯೂ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಮುತ್ತುರಾಜ್ ತಿಳಿಸಿದರು.

ಆಷಾಢ ಶುಕ್ರವಾರ ಪೂಜೆ: ಚಾಮುಂಡಿಬೆಟ್ಟಕ್ಕೆ 91.74 ಲಕ್ಷ ರೂ. ಆದಾಯ

ಮೂರನೇ ಶುಕ್ರವಾರ ಅತೀ ಹೆಚ್ಚು, ವರ್ಧಂತಿ ದಿನ ಅತೀ ಕಡಿಮೆ ಸಂಗ್ರಹ

ಮೈಸೂರು,ಜು.20(ಎಂಟಿವೈ)– ಆಷಾಢ ಶುಕ್ರವಾರದಂದು ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಾಲಯದಲ್ಲಿ ನಡೆದ ವಿಶೇಷ ಪೂಜಾ ಮಹೋತ್ಸವದಲ್ಲಿ ಅಪಾರ ಸಂಖ್ಯೆಯ ಭಕ್ತರು ಆಗಮಿಸಿದ್ದರು. ಇದರಿಂದ ಲಕ್ಷಾಂತರ ರೂ. ಆದಾಯ ಬಂದಿದೆ. ವಿಶೇಷ ದರ್ಶನ ಪಡೆಯಲು ಭಕ್ತರು ಟಿಕೆಟ್ ಖರೀದಿಸಿದ್ದರಿಂದ ದೇವಾಲಯಕ್ಕೆ 91,74,540 ರೂ. ಆದಾಯ ಸಂಗ್ರಹವಾಗಿದೆ.



> ಪ್ರತಿ ವರ್ಷದಂತೆ ಆಷಾಢ ಶುಕ್ರವಾರದ ದಿನದಂತೆ ಟಿಕೆಟ್ ಪಡೆದು ಭಕ್ತರು ದೇವಾಲಯಕ್ಕೆ ಪ್ರವೇಶಿಸಿದ್ದಾರೆ. ಇದರಿಂದ 50 ರೂ, ಹಾಗೂ 300 ರೂ. ಮೌಲ್ಯದ ಟಿಕೆಟ್ ಪಡೆದ ಭಕ್ತರಿಂದ ಈ ಬಾರಿ 91,74,540 ರೂ. ಆದಾಯ ಸಂಗ್ರಹವಾಗಿದೆ. ಈ ಬಾರಿ ಅಚ್ಚುಕಟ್ಟಾಗಿ ವಿಶೇಷ ಪೂಜಾ ಮಹೋತ್ಸವ ಜರುಗಿದೆ.
> –ಗೋವಿಂದರಾಜು, ಚಾಮುಂಡಿಬೆಟ್ಟದ ದೇವಾಲಯದ ಆಡಳಿತಾಧಿಕಾರಿ

ಕೊರೊನಾ ಹಾವಳಿ ನಂತರ ಈ ಬಾರಿ ಅದ್ದೂರಿಯಾಗಿ ಆಷಾಢ ಮಾಸದ ಶುಕ್ರವಾರದ ಪೂಜಾ ಮಹೋತ್ಸವವನ್ನು ಆಚರಿಸಲಾಯಿತು. ರಾಜ್ಯ ಸರ್ಕಾರ ಮಹತ್ವಾಕಾಂಕ್ಷೆ ಯೋಜನೆಯಾದ 'ಶಕ್ತಿ ಯೋಜನೆ' ಜಾರಿಗೊಳಿಸಿದ ಹಿನ್ನೆಲೆಯಲ್ಲಿ ಈ ಬಾರಿ ಮಹಿಳಾ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬೆಟ್ಟಕ್ಕೆ ಆಗಮಿಸಿದರು. ಆದರೆ ನಿರೀಕ್ಷಿಸಿದ ಪ್ರಮಾಣದಲ್ಲಿ ದೇವಾಲಯಕ್ಕೆ ಆದಾಯ ಬಂದಿಲ್ಲ. ಈ ಬಾರಿ ಒಂದು ಕೋಟಿ ರೂ.ಗಿಂತ ಹೆಚ್ಚಿನ ಆದಾಯ ಬರಬಹುದೆಂಬ ನಿರೀಕ್ಷೆಯಿತ್ತು. ವರ್ಧಂತಿ ಮಹೋತ್ಸವದ ದಿನ ಭಕ್ತರ ಸಂಖ್ಯೆ ಕಡಿಮೆ ಇದ್ದುದರಿಂದ ಆದಾಯವೂ ಕ್ಷೀಣಿಸಿದೆ.

ಮೂರನೇ ಶುಕ್ರವಾರ ಹೆಚ್ಚು ಆದಾಯ: ಪ್ರಸಕ್ತ ಸಾಲಿನಲ್ಲಿ ಆಷಾಢ ಮಾಸದಲ್ಲಿ ನಾಲ್ಕು ಶುಕ್ರವಾರ ಹಾಗೂ ಒಂದು ದಿನ ವರ್ಧಂತಿ ಆಚರಿಸಲಾಯಿತು. ದೇವಾಲಯಕ್ಕೆ ಪ್ರವೇಶ ಪಡೆಯಲು ಭಕ್ತರಿಗೆ ಮೂರು ಸಾಲುಗಳ ವ್ಯವಸ್ಥೆ ಮಾಡಲಾಗಿತ್ತು. ಒಂದು ಸಾಲು ಧರ್ಮ ದರ್ಶನಕ್ಕೆ ಇನ್ನೊಂದು ಸಾಲು 50 ರೂ. ಟಿಕೆಟ್ ಪಡೆದವರಿಗೆ, ಮತ್ತೊಂದು ಸಾಲು 300 ರೂ. ಟಿಕೆಟ್ ಪಡೆದವರಿಗೆ ಮೀಸಲಿಡಲಾಗಿತ್ತು. ಐದು ದಿನವೂ ಟಿಕೆಟ್ ಪಡೆದು ದೇವಾಲಯಕ್ಕೆ ತೆರಳಿದ ಭಕ್ತರಿಂದ ದೇವಾಲಯಕ್ಕೆ 91,74,540 ರೂ. ಆದಾಯ ಸಂಗ್ರಹವಾಗಿದೆ.

ಮೊದಲ ಶುಕ್ರವಾರ (ಜೂ.23) 50 ರೂ.ಟಿಕೆಟ್ ಪಡೆದ ಭಕ್ತರಿಂದ 3,17,790 ರೂ, 300 ರೂ. ಟಿಕೆಟ್ ಪಡೆದವರಿಂದ 14,05,500 ರೂ. ಸೇರಿದಂತೆ 17,23,290 ರೂ. ಸಂಗ್ರಹವಾಗಿದೆ.

ಎರಡನೇ ವಾರ (ಜೂ.30) 50 ರೂ.ಟಿಕೆಟ್ ಪಡೆದವರಿಂದ 3,39,870 ರೂ., 300 ರೂ. ಟಿಕೆಟ್‌ನಿಂದ 18,71,400 ರೂ. ಒಳಗೊಂಡಂತೆ 22,11,270 ರೂ. ಆದಾಯ ಸಂಗ್ರಹವಾಗಿದೆ.

ಮೂರನೇ ಶುಕ್ರವಾರ (ಜು.7) 50 ರೂ. ಟಿಕೆಟ್ ಪಡೆದ ಭಕ್ತರಿಂದ 2,89,490 ರೂ., 300 ರೂ. ಟಿಕೆಟ್‌ನಿಂದ 20,18,900 ರೂ. ಸೇರಿದಂತೆ 23,08,390 ರೂ. ಆದಾಯ ಸಂಗ್ರಹವಾಗಿದೆ.

ವರ್ಧಂತಿ ದಿನ (ಜು.10)ದಂದು 50 ರೂ. ಟಿಕೆಟ್ ಪಡೆದವರಿಂದ 1,63,160 ರೂ., 300 ರೂ. ಟಿಕೆಟ್ ಪಡೆದವರಿಂದ 6,26,400 ರೂ. ಸೇರಿದಂತೆ ಕೇವಲ 7,89,560 ರೂ. ಆದಾಯ ಸಂಗ್ರಹವಾಗಿದೆ.

ನಾಲ್ಕನೇ ಶುಕ್ರವಾರ(ಜು.14) 50 ರೂ. ಟಿಕೆಟ್ ಪಡೆದ ಭಕ್ತರಿಂದ 2,83,230 ರೂ., 300 ರೂ ಟಿಕೆಟ್ ಪಡೆದವರಿಗೆ 12,58,800 ರೂ. ಸೇರಿದಂತೆ 21,42,030 ರೂ. ಆದಾಯ ಸಂಗ್ರಹವಾಗಿದೆ.

ಬಿಗಿ ಕ್ರಮವೂ ಆದಾಯ ಕಡಿತಕ್ಕೆ ಕಾರಣ: ಈ ಬಾರಿ ಅತಿ ಹೆಚ್ಚಿನ ಭದ್ರತೆ ಕೈಗೊಂಡಿದ್ದೇ ದೇವಾಲಯದ ಆದಾಯ ಕಡಿಮೆಯಾಗಲು ಕಾರಣ ಎನ್ನಲಾಗಿದೆ.

ಈ ಬಾರಿ ಬೆಟ್ಟಕ್ಕೆ ಆಗಮಿಸಿದ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ಆದರೆ ಬಹುತೇಕ ಮಂದಿ ದೇವಾಲಯದತ್ತ ನುಸುಳುವುದಕ್ಕೂ ಸಾಧ್ಯವಾಗದೇ ವಾಪಸಾಗಿದ್ದರು. ಬೆಟ್ಟಕ್ಕೆ ಬರುವ ಗಣ್ಯರಿಗೆ ದೇವಾಲಯ ಪ್ರವೇಶಿಸಲು ಸುಲಭವಾಗಲೆಂಬ ಕಾರಣದಿಂದ ಮಾಡಲಾಗಿದ್ದ ಬಿಗಿ ಬಂದೋಬಸ್ತ್‌ನಿಂದಾಗಿ ಭಕ್ತರು ದೇವಾಲಯ ಮುಂಭಾಗದ ದ್ವಾರದ ಬಳಿ ಹೋಗಲು ಸಾಧ್ಯವಾಗದ ಕಾರಣ, ಅನೇಕ ಮಂದಿ ದೂರದಿಂದಲೇ ದೇವಾಲಯಕ್ಕೆ ಕೈ ಮುಗಿದು ವಾಪಸಾಗಿದ್ದಾರೆ. ಮುಂದಿನ ವರ್ಷದಲ್ಲಾದರೂ ದೇವಾಲಯ ಸುತ್ತ ಭಕ್ತರು ಓಡಾಡುವುದಕ್ಕೆ ಅವಕಾಶ ಕೊಡಬೇಕು. ಕೆಲವರು ಮುಂಬಾಗಿಲಿನ ಬಳಿ ಕೈ ಮುಗಿದು ವಿಶೇಷ ಪ್ರಾರ್ಥನೆ ಸಲ್ಲಿಸಿ ತೆರಳಲು ಬಯಸುವುದರಿಂದ, ಅದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಭಕ್ತರು ಮನವಿ ಮಾಡಿದ್ದಾರೆ.

ಅಧಿಕಾರಿ ವರ್ಗಾವಣೆ ಮಾಡಬೇಡಿ; ಪ್ರತಿಭಟನೆ



ಮೈಸೂರು, ಜು.20(ಜಿಎ)–ಮೈಸೂರು ಜಿಲ್ಲೆಯ ಎಂ.ಆರ್.ಡಬ್ಲ್ಯೂ, ವಿ.ಆರ್.ಡಬ್ಲ್ಯೂ, ಯೂ.ಆರ್.ಡಬ್ಲ್ಯೂ ಅವರ ವಿವಿಧ ಬೇಡಿಕೆ ಈಡೇರಿಸುವಂತೆ ಪ್ರತಿಭಟನೆ ನಡೆಸಿದರು.

ಮೈಸೂರಿನ ಸಿದ್ದಾರ್ಥನಗರದಲ್ಲಿರುವ ನೂತನ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಜಮಾಯಿಸಿದ ವಿಕಲಚೇತನರ ಎಂ.ಆರ್.ಡಬ್ಲ್ಯೂ, ವಿ.ಆರ್.ಡಬ್ಲ್ಯೂ, ಯೂ.ಆರ್.ಡಬ್ಲ್ಯೂ ಜಿಲ್ಲಾ ಒಕ್ಕೂಟದ ಪದಾಧಿಕಾರಿಗಳು ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ನಿರ್ದೇಶಕಿ ಲತಾಕುಮಾರಿ ಅವರನ್ನು ವರ್ಗಾವಣೆ ಮಾಡದಂತೆ ಒತ್ತಾಯಿಸಿ, ಮತ್ತು ವಿವಿಧ ಬೇಡಿಕೆ ಈಡೇರಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಅವರು, ಲತಾಕುಮಾರಿ ಅವರು, 2022ರಿಂದ ಎಂ.ಆರ್.ಡಬ್ಲ್ಯೂ, ವಿ.ಆರ್.ಡಬ್ಲ್ಯೂ, ಯೂ.ಆರ್.ಡಬ್ಲ್ಯೂ ಅವರಿಗೆ ಬೇಕಾದ ಏಕರೂಪದ ಗುರುತಿನ ಚೀಟಿ ನೀಡಿರುವುದು, ಗೂಗಲ್ ಮೀಟ್ ಮೂಲಕ ನುರಿತ ತಜ್ಞರಿಂದ ತರಬೇತಿ ಆಯೋಜಿಸಿ ಕಾರ್ಯಕರ್ತರ ಬಲವರ್ಧನೆಗೆ ಆದ್ಯತೆ ನೀಡುವುದರ ಜೊತೆಗೆ ಉದ್ಯೋಗ ಮತ್ತು ತರಬೇತಿಗಾಗಿ ಸಿಎಸ್‌ಆರ್ ಹಣ ಬಳಸಿಕೊಳ್ಳಲು ಕ್ರಮವಹಿಸಿದ್ದಾರೆ ಎಂದರು.

ಸಮಾಜದಿಂದ ಹಾಗೂ ಕುಟುಂಬದಿಂದಲೂ ತಿರಸ್ಕೃತವಾದ ನೊಂದ ವಿಕಲಚೇತನರ ಬದುಕು ಹಸನಾಗಲು ಅನೇಕ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಮಾಜಮುಖಿ ಮತ್ತು ದಕ್ಷತೆಗೆ ಉದಾಹರಣೆಯಾಗಿರುವ ಅಧಿಕಾರಿಯನ್ನು ವರ್ಗಾವಣೆ ಮಾಡಬಾರದು ಎಂದು ಒತ್ತಾಯಿಸಿದರು.

ಎಂ.ಆರ್.ಡಬ್ಲ್ಯೂ, ವಿ.ಆರ್.ಡಬ್ಲ್ಯೂ, ಯೂ.ಆರ್.ಡಬ್ಲ್ಯೂ ಕಾರ್ಯಕರ್ತರನ್ನು ವಿಶೇಷ ನಿಯಮಾವಳಿ ರಚಿಸಿ ಖಾಯಂಗೊಳಿಸಬೇಕು, ನಿವೃತ್ತಿ ಇಡುಗಂಟು ಜಾರಿಗೊಳಿಸಬೇಕು, ಗ್ರಾಮೀಣ ಪುನರ್ವಸತಿ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಕಾರ್ಯಕರ್ತರಿಗೆ ವೇತನ ಸಹಿತ ಪ್ರಸೂತಿ ರಜೆ ನೀಡಬೇಕು, ವಿಕಲಚೇತನರಿಗೆ ಪ್ರತ್ಯೇಕ ಸಚಿವಾಲಯ ರಚಿಸಬೇಕು, ಮರಣ ನಂತರ ಪರಿಹಾರ ಧನವನ್ನು ಕ್ರಮವಾಗಿ 30, 25 ಲಕ್ಷ ರೂ. ನೀಡಬೇಕು. ಅಭಿವೃದ್ಧಿ ನಿಗಮ ರಚಿಸಬೇಕೆಂದು ಮನವಿ ಸಲ್ಲಿಸಿದರು.

ನಾಳೆ ಡಾ.ಹೆಚ್.ಸಿ.ಮಹದೇವಪ್ಪ ಅವರ 'ಸಂವಿಧಾನದ ನೆರಳಲ್ಲಿ' ಪುಸ್ತಕ ಬಿಡುಗಡೆ



ಮೈಸೂರು,ಜು.20(ಪಿಎಂ)– ಸಮಾಜ ಕಲ್ಯಾಣ ಸಚಿವರೂ ಆದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರ 'ಸಂವಿಧಾನದ ನೆರಳಲ್ಲಿ (ಸಾಮಾಜಿಕ–ರಾಜಕೀಯ ಬರಹಗಳು)' ಪುಸ್ತಕ ಬಿಡುಗಡೆ ಸಮಾರಂಭವನ್ನು ಜು.22ರಂದು ಆಯೋಜಿಸಲಾಗಿದೆ ಎಂದು ಡಾ.ಹೆಚ್.ಸಿ. ಮಹದೇವಪ್ಪ ಅಭಿಮಾನಿಗಳ ಬಳಗದ ಡಾ.ಮಹೇಶ್ ಸೋಸಲೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಚಲನಚಿತ್ರ ಸಂಗೀತ ನಿರ್ದೇಶಕ ಡಾ.ಹಂಸಲೇಖ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಪುಸ್ತಕ ಕುರಿತು ವಿಮರ್ಶಕರೂ ಆದ ನಾಟಕಕಾರ ಡಾ.ಕೆ.ವೈ. ನಾರಾಯಣಸ್ವಾಮಿ ಮಾತನಾಡಲಿದ್ದಾರೆ. ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಅಧ್ಯಕ್ಷತೆ ವಹಿಸಲಿದ್ದು, ಕೃತಿ ಕರ್ತೃಗಳೂ ಆದ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉಪಸ್ಥಿತರಿರಲಿದ್ದಾರೆ ಎಂದರು.

ಹೆಚ್.ಕೆ.ರಮೇಶ್ ಅವರ ನಿರೂಪಣೆಯಲ್ಲಿ ಅಮೂಲ್ಯ ಪುಸ್ತಕ ಪ್ರಕಾಶನ ಪುಸ್ತಕ ಹೊರ ತಂದಿದೆ. ಪುಸ್ತಕಕ್ಕೆ ಹಿರಿಯ ಲೇಖಕ ನಟರಾಜ ಹುಳಿಯಾರ್ ಅವರ ಮುನ್ನುಡಿ ಇದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆನ್ನುಡಿ ಬರೆದಿದ್ದಾರೆ. ಹಿರಿಯ ಪತ್ರಕರ್ತ ದಿನೇಶ್ ಅಮೀನ್‌ಮಟ್ಟು ಅವರ ಅಭಿಪ್ರಾಯ ಇದೆ ಎಂದು ಹೇಳಿದರು.

ಸಂವಿಧಾನ, ಸಮಾಜ ಮತ್ತು ಪ್ರಜಾಪ್ರಭುತ್ವ ಕುರಿತು ಡಾ.ಮಹದೇವಪ್ಪ ಅವರ ಆಲೋಚನೆಗಳನ್ನು ಪುಸ್ತಕ ಒಳಗೊಂಡಿದೆ. ಒಟ್ಟು 297 ಪುಟಗಳ ಈ ಪುಸ್ತಕದಲ್ಲಿ 6 ಭಾಗಗಳಲ್ಲಿ ವಿಚಾರಗಳನ್ನು ಮಂಡಿಸಲಾಗಿದೆ ಎಂದು ತಿಳಿಸಿದರು. ಬಳಗದ ಅಶೋಕಪುರಂ ಮಹೇಶ್, ಪ್ರದೀಪ್, ಜೀವನ್, ನಟರಾಜ್ ಶಿವಣ್ಣ ಗೋಷ್ಠಿಯಲ್ಲಿದ್ದರು.

ವಿಷ್ಣುವರ್ಧನ್ ಸ್ಮಾರಕಕ್ಕೆ ಸಾವಿರಾರು ಅಭಿಮಾನಿಗಳ ಭೇಟಿ



ಮೈಸೂರು, ಜು.20(ಜಿಎ)–ನಟ ಡಾ. ವಿಷ್ಣುವರ್ಧನ್ ಅವರ ಸ್ಮಾರಕಕ್ಕೆ ನಿತ್ಯವೂ ಎರಡು ಸಾವಿರಕ್ಕೂ ಅಧಿಕ ಅಭಿಮಾನಿಗಳು ಮತ್ತು ಪ್ರವಾಸಿಗರು ಭೇಟಿ ನೀಡುತ್ತಿದ್ದು, ಮೈಸೂರಿನ ಮತ್ತೊಂದು ಪ್ರವಾಸಿ ತಾಣವಾಗಿ ರೂಪುಗೊಳ್ಳುತ್ತಿದೆ.

ಜನವರಿ 29 ರಂದು ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೈಸೂರಿನ ಮಾನಂದವಾಡಿ ರಸ್ತೆಯ ಉದ್ಬೂರಿನ ಗೇಟ್ ಬಳಿ 5 ಎಕರೆಯಲ್ಲಿ ನಿರ್ಮಾಣವಾಗಿರುವ ನಟ ಡಾ. ವಿಷ್ಣುವರ್ಧನ್ ಅವರ ಸ್ಮಾರಕವನ್ನು ಲೋಕಾರ್ಪಣೆ ಮಾಡಿದರು. ಅಂದಿನಿಂದ ಇಂದಿನವರೆಗೂ ನಿತ್ಯವೂ ಪ್ರವಾಸಿಗರು ಮತ್ತು ಅಭಿಮಾನಿಗಳ ದಂಡು ಸ್ಮಾರಕದ ವೀಕ್ಷಣೆಗೆ ಆಗಮಿಸುತ್ತಿದೆ.


ವಿಷ್ಣುವರ್ಧನ್ ಅಗಲಿದ ನಂತರದ ವರ್ಷಗಳಿಂದ ಸ್ಮಾರಕ ನಿರ್ಮಾಣ ಸಂಬಂಧ ವಿಷ್ಣುವರ್ಧನ್ ಅವರ ಕುಟುಂಬ ಸತತ ಪ್ರಯತ್ನ ಪಡುತ್ತಿದ್ದರೂ ಏನಾದರೂ ವಿವಾದ ಉಂಟಾಗಿ ಅಡೆ–ತಡೆ ಉಂಟಾಗುತ್ತಿತ್ತು. ಕೊನೆಗೆ ಮೈಸೂರಿನ ಮಾನಂದವಾಡಿ ರಸ್ತೆಯ ಉದ್ಬೂರಿನ ಗೇಟ್ ಬಳಿ ಸರ್ಕಾರ 5 ಎಕರೆ ಜಾಗ ಗುರುತಿಸಿ ಮಂಜೂರು ಮಾಡಿತು. ಸ್ಮಾರಕ ನಿರ್ಮಾಣ ಸಂಬಂಧ ಸರ್ಕಾರ ವಿಷ್ಣುವರ್ಧನ್ ಸ್ಮಾರಕ ಪ್ರತಿಷ್ಠಾನ ಟ್ರಸ್ಟ್ ಮಾಡಿ 11 ಕೋಟಿ ರೂ. ಮಂಜೂರು ಮಾಡಿತು. ಕೊರೊನಾದಿಂದ ಕಾಮಗಾರಿ ವಿಳಂಬವಾಗಿತ್ತು. ಅಂತು ಇಂತು ಎಲ್ಲಾ ಅಡೆ–ತಡೆಗಳನ್ನು ಮೆಟ್ಟಿನಿಂತು 2023 ಜನವರಿ 29 ರಂದು ಲೋಕಾರ್ಪಣೆಯಾಯಿತು.

ಸ್ಮಾರಕ ಲೋಕಾರ್ಪಣೆಗೊಂಡ ದಿನದಿಂದ ಇಂದಿನವರೆಗೂ ಪ್ರವಾಸಿಗರ ದಂಡು ಹರಿದು ಬರುತ್ತಿದ್ದು, ಟ್ರಸ್ಟಿಗಳು ಹೇಳುವ ಹಾಗೇ ನಿತ್ಯ ಎರಡು ಸಾವಿರಕ್ಕೂ ಅಧಿಕ ಮಂದಿ ಆಗಮಿಸುತ್ತಿದ್ದು, ಈವರೆಗೂ ಅಂದಾಜು 40 ಸಾವಿರಕ್ಕೂ ಅಧಿಕ ಪ್ರವಾಸಿಗರು, ಅಭಿಮಾನಿಗಳು ಭೇಟಿ ನೀಡಿದ್ದಾರೆ.

ಸ್ಮಾರಕದಲ್ಲಿ ವಿಷ್ಣುವರ್ಧನ್ ಅವರ 6 ಅಡಿ ಎತ್ತರದ ಪುತ್ಥಳಿಯು ಪ್ರಮುಖ ಆಕರ್ಷಣೆಯಾಗಿದ್ದು, ಅದರಲ್ಲಿಯೂ ವಿಷ್ಣುವರ್ಧನ್ ಅವರ 700 ಫೋಟೊ ಒಳಗೊಂಡ ಗ್ಯಾಲರಿ, ವಾಟರ್ ಪಾಂಡ್, ಚಿತ್ರೋತ್ಸವ ಮತ್ತು ನಾಟಕೋತ್ಸವ ನಡೆಸಲು 250 ಆಸನಗಳ ಆಡಿಟೋರಿಯಂ ಮತ್ತು ಉದ್ಯಾನವನ ಜೊತೆಗೆ ದೊಡ್ಡ ಕರಗ ಎಲ್ಲರನ್ನು ಆಕರ್ಷಿಸುತ್ತಿದೆ.

ಸ್ಮಾರಕ ಅದ್ಭುತವಾಗಿ ನಿರ್ಮಾಣವಾಗಿದ್ದು, ಸರ್ಕಾರ ಮತ್ತಷ್ಟು ಮುತುವರ್ಜಿ ವಹಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಿದರೆ, ಮೈಸೂರಿನ ಮತ್ತೊಂದು ಪ್ರವಾಸಿ ತಾಣವಾಗುವುದರಲ್ಲಿ ಸಂಶಯವಿಲ್ಲ ಎಂದು ಕೆಲ ಪ್ರವಾಸಿಗರು ಸಲಹೆ ನೀಡಿದ್ದಾರೆ.

ಈ ಸ್ಮಾರಕವು ಪ್ರವಾಸಿ ಮತ್ತು ಶೈಕ್ಷಣಿಕ ತಾಣವಾಗಿ ಮಾರ್ಪಾಡಾಗಲಿದೆ ಸದ್ಯಕ್ಕೆ 2.5 ಎಕರೆ ಸ್ಥಳದಲ್ಲಿ ಸ್ಮಾರಕ ನಿರ್ಮಾಣವಾಗಿದೆ ಸ್ಮಾರಕ ಹಲವಾರು ವಿಶೇಷತೆಗಳಿಂದ ಕೂಡಿದ್ದು, ಉಳಿದ 2.5 ಎಕರೆ ಸ್ಥಳದಲ್ಲಿ ಪುಣೆ ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್‌ಟಿಟ್ಯೂಟ್ ಆಫ್ ಇಂಡಿಯಾದ ಶಾಖೆಯೂ ಸಹ ನಿರ್ಮಾಣವಾಗಿ ಚಿತ್ರರಂಗದ ಶಿಬಿರ ಮತ್ತು ನಾಟಕ ಶಿಬಿರಗಳು ಏರ್ಪಡಿಸುತ್ತೇವೆಂದು ನಟ ಅನಿರುದ್ಧ 'ಮೈಸೂರು ಮಿತ್ರ'ನಿಗೆ ತಿಳಿಸಿದರು.



'ಮೈಸೂರು ಮಿತ್ರ ಹಾಗೂ 'ಸ್ಟಾರ್ ಆಫ್ ಮೈಸೂರು' ರೇಸಿಂಗ್ ಪ್ರತಿನಿಧಿ ಪಿ.ಜಿ.ಚಂದ್ರಶೇಖರ್ ಅವರಿಗೆ ಮೈಸೂರು ರೇಸ್ ಕ್ಲಬ್ ವತಿಯಿಂದ ಎಂಆರ್‌ಸಿ ಸ್ಟೀವರ್ಡ್ ಬಿ.ಯು. ಚೆಂಗಪ್ಪ ಅವರಿಂದ ಟಿಪ್‌ಸ್ಟರ್ ಟ್ರ್ಯಾಲಿ ಟ್ರೋಫಿ ಮೊದಲನೇ ಬಹುಮಾನ ವಿತರಿಸಿದರು. ಈ ವೇಳೆ ಎಂಆರ್‌ಸಿ ಛೇರ್ಮನ್‌ರಾದ ವೈ.ಬಿ.ಗಣೇಶ್ ಮತ್ತು ಕ್ಲಬ್‌ನ ಸ್ಟೀವರ್ಡ್ಸ್ ಮತ್ತು ಕಮಿಟಿ ಸದಸ್ಯರು ಉಪಸ್ಥಿತರಿದ್ದರು.

ಪದವಿ ಪರೀಕ್ಷೆ ಮುಂದೂಡಿಕೆ



ಮೈಸೂರು, ಜು.20(ಜಿಎ)–ಪದವಿ ವಿದ್ಯಾರ್ಥಿಗಳು ಪರೀಕ್ಷೆಗಳನ್ನು ಮುಂದೂಡುವಂತೆ ಒತ್ತಾಯಿಸಿ ನಡೆಸಿದ ಪ್ರತಿಭಟನೆಗೆ ಜಯ ಸಂದಿದ್ದು, ವಿವಿ ಪದವಿ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ಮೈಸೂರು ವಿಶ್ವವಿದ್ಯಾನಿಲಯದ ಪದವಿ ಪರೀಕ್ಷೆಗಳನ್ನು ಮುಂದೂಡುವಂತೆ ಒತ್ತಾಯಿಸಿ ಮೈಸೂರು ವಿವಿ ಕ್ರಾಫರ್ಡ್ ಹಾಲ್ ಎದುರು ಜು.17 ಮತ್ತು ಗುರುವಾರ ಎಐಡಿಎಸ್‌ಓ ಜಿಲ್ಲಾ ಸಮಿತಿ ನೇತೃತ್ವದಲ್ಲಿ ವಿವಿಧ ಪದವಿ ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರು.

ಕೇವಲ ಎರಡೇ ತಿಂಗಳು ತರಗತಿಗಳು ನಡೆದಿದ್ದು, ಸಂಪೂರ್ಣವಾಗಿ ಪಾಠಗಳು ನಡೆದಿಲ್ಲದ ಕಾರಣ ವಿದ್ಯಾರ್ಥಿಗಳು ಆತಂಕಕ್ಕೀಡಾಗಿದ್ದರು. ಸರಿಯಾಗಿ ಪಾಠ ಮಾಡದೇ ಪರೀಕ್ಷೆ ಇಟ್ಟಿರುವುದು ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ. ಹೀಗಾಗಿ ಪದವಿ ಪರೀಕ್ಷೆಯ ಮುಂದೂಡಿಕೆ ಬಗ್ಗೆ ಸುತ್ತೋಲೆ ಹೊರಡಿಸುವಂತೆ ವಿದ್ಯಾರ್ಥಿಗಳು ಮೈಸೂರು ವಿಶ್ವ ವಿದ್ಯಾಲಯಕ್ಕೆ ಒತ್ತಾಯಿಸಿದರು. 4 ತಿಂಗಳು ಕಾಲ ಮಾಡುವ ಪಾಠವನ್ನ 2 ತಿಂಗಳಲ್ಲಿ ಮಾಡಿದ್ದು, ಅದನ್ನೂ ಕೂಡ ಸಮರ್ಪಕವಾಗಿ ಮಾಡಿಲ್ಲ. ನಮಗೆ ತಿಂಗಳುಗಳ ಕಾಲ ಸಮಯ ಬೇಡ, ಕೇವಲ 15 ದಿನಗಳ ಮಟ್ಟಿಗಾದರೂ ಸಮಯ ನೀಡಿ ಎಂದು ಆಗ್ರಹಿಸಿದರು.

ಇದಕ್ಕೆ ಸ್ಪಂದಿಸಿದ ಮೈಸೂರು ವಿವಿ. ರಿಜಿಸ್ಟ್ರಾರ್ ಪರೀಕ್ಷೆಗಳನ್ನು ಇನ್ನು ಎರಡು ದಿನಗಳಲ್ಲಿ ಮುಂದೂಡಲು ತೀರ್ಮಾನಿಸುವಂತೆ ಭರವಸೆ ನೀಡಿದ್ದರು. ಮೂರು ದಿನಗಳು ಕಳೆದರು ಯಾವುದೇ ನಿಖರ ಮಾಹಿತಿ ದೊರೆತಿರಲಿಲ್ಲ. ಈ ಹಿನ್ನೆಲೆ ವಿದ್ಯಾರ್ಥಿಗಳು ಕ್ರಾಫರ್ಡ್ ಹಾಲ್ ಎದುರು ಜಮಾಯಿಸಿ ಅಧಿಕೃತ ಸುತ್ತೋಲೆ ಹೊರಡಿಸಬೇಕೆಂದು ಪಟ್ಟುಹಿಡಿದರು. ನಂತರ ಇದಕ್ಕೆ ಉತ್ತರವಾಗಿ ರಿಜಿಸ್ಟ್ರಾರ್ ವಿದ್ಯಾರ್ಥಿಗಳಿಗೆ ಪದವಿ ಪರೀಕ್ಷೆಗಳನ್ನು ಆಗಸ್ಟ್ 1ಕ್ಕೆ ಮುಂದೂಡಲಾಗಿದೆ ಎಂದು ಘೋಷಿಸಿದರು. ಇದು ವಿದ್ಯಾರ್ಥಿಗಳ ಸುದೀರ್ಘ ಹೋರಾಟಕ್ಕೆ ಸಂದ ಜಯವಾಗಿದೆ ಎಂದು ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿಯು ತಿಳಿಸಿತು.

ಪ್ರತಿಭಟನೆಯಲ್ಲಿ ಎಐಡಿಎಸ್‌ಓ ಜಿಲ್ಲಾ ಅಧ್ಯಕ್ಷ ಸುಭಾಷ್, ಕಾರ್ಯದರ್ಶಿ ಚಂದ್ರಕಲಾ, ಪದಾಧಿಕಾರಿಗಳಾದ ನಿತಿನ್, ಸ್ವಾತಿ, ಚಂದ್ರಿಕಾ, ಹೇಮಲತಾ ಹಾಗೂ ಮಹಾರಾಣಿ, ಮಹಾರಾಜ, ಕುವೆಂಪುನಗರದ ಸರ್ಕಾರಿ ಪದವಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಜು.23ರಂದು ಡಾ.ಹೆಚ್.ತಿಪ್ಪೇರುದ್ರಸ್ವಾಮಿಯವರ ಸಂಸ್ಮರಣಾ ಕೃತಿಗಳ ಲೋಕಾರ್ಪಣೆ



ಡಾ.ತಿಪ್ಪೇರುದ್ರಸ್ವಾಮಿ



ಮೈಸೂರು,ಜು.20(ಪಿಎಂ)– ಡಾ.ಹೆಚ್.ತಿಪ್ಪೇರುದ್ರಸ್ವಾಮಿ ಸಂಸ್ಮರಣ ಸಮಿತಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ನಗರ ಮತ್ತು ಜಿಲ್ಲಾ ಘಟಕಗಳು, ಕದಳಿ ಮಹಿಳಾ ವೇದಿಕೆ, ಸಂವಹನ ಪ್ರಕಾಶನದ ಸಂಯುಕ್ತಾಶ್ರಯದಲ್ಲಿ ಡಾ.ಹೆಚ್.ತಿಪ್ಪೇರುದ್ರಸ್ವಾಮಿಯವರ 95ನೇ ಸಂಸ್ಮರಣೆ ದತ್ತಿ ಉಪನ್ಯಾಸ, ಸಂಸ್ಮರಣಾ ಕೃತಿಗಳ ಲೋಕಾರ್ಪಣೆ ಸಮಾರಂಭವನ್ನು ಜು.23ರಂದು ಆಯೋಜಿಸಲಾಗಿದೆ ಎಂದು ಸಂಸ್ಮರಣಾ ಸಮಿತಿ ಸಂಚಾಲಕಿ ಹಾಗೂ ತಿಪ್ಪೇರುದ್ರಸ್ವಾಮಿಯವರು ಪುತ್ರಿ ಡಾ.ಹೆಚ್.ಟಿ.ಶೈಲಜಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ನವಜ್ಯೋತಿ ಸಭಾಂಗಣದಲ್ಲಿ ಬೆಳಗ್ಗೆ 10.30ಕ್ಕೆ ಸಮಾರಂಭ ನಡೆಯಲಿದೆ. ಸಾನ್ನಿಧ್ಯ ವಹಿಸಲಿರುವ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, 'ಬಯಲು ಬೆಳಗು' ಕೃತಿಯನ್ನು ಬಿಡುಗಡೆ ಮಾಡಲಿದ್ದಾರೆ. ದಾವಣಗೆರೆ ಹೊನ್ನಾಳಿಯ ಹಿರೇಕಲ್ಮಠದ ಶ್ರೀ ಒಡೆಯರ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ 'ನೆನಪಿನ ಬುತ್ತಿ' ಕೃತಿ ಬಿಡುಗಡೆ ಮಾಡಲಿದ್ದಾರೆ ಎಂದರು.

ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ 'ಸಾಹಿತ್ಯಾವಲೋಕನ' ಕೃತಿ ಬಿಡುಗಡೆ ಮಾಡಲಿದ್ದಾರೆ. ಅಧ್ಯಕ್ಷತೆ ವಹಿಸಲಿರುವ ನಿವೃತ್ತ ಪ್ರಾಧ್ಯಾಪಕ ಡಾ.ವೀರಣ್ಣ ರಾಜೂರ 'ಬಯಲು ಬೆಳಗು' ಕೃತಿ ಪರಿಚಯಿಸಿ, ದತ್ತಿ ಉಪನ್ಯಾಸ ನೀಡಲಿದ್ದಾರೆ. ಗೌರವ ಅತಿಥಿಯಾಗಿ ಪಾಲ್ಗೊಳ್ಳಲಿರುವ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) 'ನೆನಪಿನ ಬುತ್ತಿ' ಕೃತಿ ಪರಿಚಯ ಮಾಡಲಿದ್ದಾರೆ. ಇದೇ ಸಂದರ್ಭದಲ್ಲಿ ಈ ಎಲ್ಲಾ ಕೃತಿಗಳ ಸಂಪಾದಕರನ್ನು ಸನ್ಮಾನಿಸಲಾಗುವುದು ಎಂದು ತಿಳಿಸಿದರು.

ಡಾ.ಹೆಚ್.ತಿಪ್ಪೇರುದ್ರಸ್ವಾಮಿ ಅವರು ಕನ್ನಡನಾಡು ಕಂಡ ಅಪರೂಪದ ವಿದ್ವಾಂಸರು. ಕನ್ನಡಕ್ಕಾಗಿ ಜೀವನವಿಡೀ ದುಡಿದ ಹೆಗ್ಗಳಿಕೆ ಹೊಂದಿದ್ದಾರೆ. ಇವರು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಉನ್ನತಮಟ್ಟದ ಕೃತಿಗಳನ್ನು ರಚಿಸಿದ್ದಾರೆ. ಇವರ 95ನೇ ಸಂಸ್ಮರಣೆ ಪ್ರಯುಕ್ತ 'ಸಾಹಿತ್ಯಾವಲೋಕನ' ಬೃಹತ್ ಕೃತಿಯನ್ನು ಹೊರತರಲಾಗುವುದು. 153 ವಿದ್ವಾಂಸರು ತಿಪ್ಪೇರುದ್ರಸ್ವಾಮಿಯವರ ಸಾಹಿತ್ಯವನ್ನು ಅವಲೋಕಿಸಿ ಬರವಣಿಗೆ ಮಾಡಿದ ಕೃತಿ ಇದಾಗಿದೆ. 732 ಪುಟಗಳನ್ನು ಈ ಕೃತಿ ಒಳಗೊಂಡಿದೆ. ತಿಪ್ಪೇರುದ್ರಸ್ವಾಮಿ ಮತ್ತು ಅವರ ಸಾಹಿತ್ಯ ಕುರಿತು ಅವರ ಆಪ್ತ ವಲಯದಲ್ಲಿದ್ದ 348 ಮಂದಿಯ ಬರವಣಿಗೆ ಹೊಂದಿರುವ 'ಬಯಲು ಬೆಳಗು' ಕೃತಿ 848 ಪುಟಗಳನ್ನು ಒಳಗೊಂಡಿದೆ. 'ನೆನಪಿನ ಬುತ್ತಿ' ಡಾ.ಹೆಚ್.ತಿಪ್ಪೇರುದ್ರಸ್ವಾಮಿಯವರ ಆತ್ಮಕಥೆಯಾಗಿದೆ ಎಂದು ವಿವರಿಸಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ, ಜಿಲ್ಲಾ ಘಟಕದ ಅಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶಾರದಾ ಶಿವಲಿಂಗಸ್ವಾಮಿ, ಸಂವಹನ ಪ್ರಕಾಶನದ ಮಾಲೀಕ ಡಿ.ಎನ್.ಲೋಕಪ್ಪ ಗೋಷ್ಠಿಯಲ್ಲಿದ್ದರು.

'ಬ್ಯಾಡ್' ಹುಡುಗಿ ಮಾನ್ವಿತಾ!

'ಕೆಂಡಸಂಪಿಗೆ', 'ಟಗರು' ಸೇರಿದಂತೆ ಅನೇಕ ಚಿತ್ರಗಳಲ್ಲಿ ಅಭಿನಯಿಸಿರುವ ನಟಿ ಮಾನ್ವಿತಾ ಕಾಮತ್, ಪ್ರಸ್ತುತ ಪಿ.ಸಿ.ಶೇಖರ್ ನಿರ್ದೇಶನದ 'ಬ್ಯಾಡ್' ಚಿತ್ರದಲ್ಲಿ ನಾಯಕಿಯಾಗಿ ನಟಿಸುತ್ತಿದ್ದಾರೆ. ನನ್ನದು ತುಂಬಾ ಬೋಲ್ಡ್ ಆದಂಥ, ಯಾವುದಕ್ಕೂ ಅಂಜದ ಹುಡುಗಿಯ ಪಾತ್ರ. ನಾನು ಈವರೆಗೂ ಮಾಡಿರದ ಪಾತ್ರವನ್ನು ಈ ಚಿತ್ರದಲ್ಲಿ ನಿರ್ವಹಿಸುತ್ತಿದ್ದೇನೆ ಎಂದರು. ನಿರ್ದೇಶಕ ಶೇಖರ್ ಮಾತನಾಡಿ ಬ್ಯಾಡ್ ವಿಲೇಜ್ ಬ್ಯಾಕ್‌ಡ್ರಾಪ್‌ನಲ್ಲಿ ನಡೆಯುವ ಕಥೆ. ಕಾಮ, ಕ್ರೋಧ, ಮೋಹ ಸೇರಿದಂತೆ ಅರಿಷಡ್ವರ್ಗಗಳನ್ನು ಪ್ರತಿನಿಸುವ ಆರು ಪಾತ್ರಗಳು ನಮ್ಮ ಚಿತ್ರದಲ್ಲಿದೆ. ಈ ಆರು ಪಾತ್ರಗಳಲ್ಲದೆ, ಇನ್ನೊಂದು ಪಾತ್ರ ಕೂಡ ಇದೆ. ಆ ಪಾತ್ರದಲ್ಲಿ ಮಾನ್ವಿತ ಅಭಿನಯಿಸುತ್ತಿದ್ದಾರೆ ಎಂದರು.

ಎಸ್.ಆರ್.ವೆಂಕಟೇಶ್‌ಗೌಡ ಅವರ ನಿರ್ಮಾಣದ ಈ ಚಿತ್ರಕ್ಕೆ ಶಕ್ತಿಶೇಖರ್ ಅವರ ಛಾಯಾಗ್ರಹಣ, ಅರ್ಜುನ್ ಜನ್ಯ ಅವರ ಸಂಗೀತ ನಿರ್ದೇಶನವಿದೆ. ಸಚಿನ್ ಬಿ.ಹೊಳಗುಂಡಿ ಸಂಭಾಷಣೆ ಬರೆದಿದ್ದಾರೆ. 'ಪ್ರೀತಿಯ ರಾಯಭಾರಿ' ಚಿತ್ರದಲ್ಲಿ ನಟಿಸಿದ್ದ ನಕುಲ್‌ಗೌಡ, ಮಾನ್ವಿತ ಕಾಮತ್, ಸಾಯಿಕೃಷ್ಣ, ಅಪೂರ್ವ ಭಾರದ್ವಾಜ್, ಮಂಜುನಾಥ್, ಅಶ್ವಿನಿ ಮುಂತಾದವರು ಈ ಚಿತ್ರದ ಉಳಿದ ತಾರಾಬಳಗದಲ್ಲಿದ್ದಾರೆ.





ದೈವಶಕ್ತಿ ದುಷ್ಟಶಕ್ತಿಗಳ ಸಂಘರ್ಷವೇ 'ಆರ'

ಹೊಸಬರ ಹೊಸ ಪ್ರಯತ್ನದ ಮತ್ತೊಂದು ಸಿನಿಮಾ ರಿಲೀಸ್‌ಗೆ ಸಿದ್ಧವಾಗುತ್ತಿದೆ. ದುಷ್ಟ ಶಕ್ತಿ, ದೈವಶಕ್ತಿಯ ಸಂಘರ್ಷದ ಕಥಾಹಂದರ ಒಳಗೊಂಡ ಆ ಚಿತ್ರದ ಹೆಸರು ಆರ. ಇದೊಂದು ಸ್ಪಿರಿಚುಯಲ್ ಡ್ರಾಮಾ ಮತ್ತು ಥ್ರಿಲ್ಲರ್ ಜಾನರ್ ಸಿನಿಮಾ ಎನ್ನಬಹುದು. ಅಶ್ವಿನ್ ವಿಜಯ ಮೂರ್ತಿ ಅವರ ನಿರ್ದೇಶನದ ಈ ಚಿತ್ರದಲ್ಲಿ ಸಂಪೂರ್ಣ ಹೊಸ ಪ್ರತಿಭೆಗಳೇ ಅಭಿನಯಿಸಿದ್ದಾರೆ, ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯ ಕ್ರಮ ಇತ್ತೀಚೆಗೆ ನಡೆಯಿತು.

ನಾಯಕನಾಗಿ ರೋಹಿತ್ ಹಾಗೂ ನಾಯಕಿ ಯಾಗಿ ದೀಪಿಕಾ ಆರಾಧ್ಯ ಕಾಣಿಸಿಕೊಂಡಿ ದ್ದಾರೆ, ಕಥೆ, ಚಿತ್ರಕಥೆ, ಸಂಭಾಷಣೆಯನ್ನು ನಾಯಕ ರೋಹಿತ್ ಬರೆದಿದ್ದು, ಆನಂದ್ ನೀನಾಸಂ, ಸತ್ಯರಾಜ್, ನಿಖಿಲ್, ಶ್ರೀಪಾದ್, ಪ್ರತೀಕ್, ಲೋಕೇಶ್ ಹಾಗೂ ಇನ್ನಿತರರು 'ಆರ' ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಸಸ್ಪೆನ್ಸ್, ಥ್ರಿಲ್ಲರ್‌ನಂಥ ಎಲ್ಲಾ ರೀತಿಯ ಎಮೋಷನ್‌ಗಳನ್ನು ಒಳಗೊಂಡ ಚಿತ್ರ ಇದಾ ಗಿದ್ದು, ಆರ ಎಂಬ ಯುವಕನ ಸುತ್ತ ನಡೆಯುವ ಕಥೆ, ಆತ ಸ್ಪಿರಿಚುಯಲ್ ಎನರ್ಜಿಯಿಂದ ಹೇಗೆಲ್ಲ ಬೆಳೆಯುತ್ತಾನೆ ಎಂಬುದನ್ನು ಈ ಚಿತ್ರದಲ್ಲಿ ಹೇಳಲಾಗಿದೆ. ಆತನ ತಾತ ಹಿಂದಿನಿಂದಲೂ ಕಾಡಿನ ಸಂರಕ್ಷಣೆ ಮಾಡಿಕೊಂಡು ಬಂದಿರುತ್ತಾನೆ. ಒಮ್ಮೆ ಕಾಡಿನ ರಕ್ಷಣೆ ಕೈತಪ್ಪಿ ಹೋಗು ವಂಥ ಸಂದರ್ಭ ಬರುತ್ತದೆ, ಆಗ ಮೊಮ್ಮಗ ಮುಂದೆ ನಿಂತು ಹೇಗೆ ತನ್ನ ತಾತನ ಕಾಡನ್ನು ನಿಸರ್ಗವನ್ನು ಸಂರಕ್ಷಿಸುತ್ತಾನೆ, ಕೈತಪ್ಪಿ ಹೋಗುವ ಕಾಡನ್ನು ಹಣ, ಭೂಮಿ, ಹೆಣ್ಣಿನ ಮುಖಾಂತರ ಹೇಗೆ ಸಂರಕ್ಷಿಸಿಕೊಳ್ಳುತ್ತಾನೆ ಎಂಬುದನ್ನು ಈ ಚಿತ್ರದ ಮೂಲಕ ಹೇಳಲಾಗಿದೆ, ನಿರ್ದೇಶಕ ಅಶ್ವಿನ್ ವಿಜಯಮೂರ್ತಿ ಮಾತನಾಡಿ, ಒಬ್ಬ ಹುಡುಗ ತನ್ನ ಜೀವನದಲ್ಲಿ ಆಧ್ಯಾತ್ಮಿಕವಾಗಿ ಯಾವ ರೀತಿಯ ಸವಾಲುಗಳನ್ನು ಎದುರಿಸುತ್ತಾನೆ. ಆ ಸವಾಲು ಹೆಣ್ಣಿನ ಮೂಲಕ, ಹಣದ ಮೂಲಕ ಹೀಗೆ ಯಾವ ರೀತಿಯಾದರೂ ಬರಬಹುದು. ಅಲ್ಲದೆ ಸಂಬಂಧಗಳ ಮೂಲಕವಾದರೂ ಬರಬಹುದು. ಈ ಸವಾಲು ಗಳನ್ನು ಎದುರಿಸಿ ನಾಯಕ ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತಾನಾ? ಎಂಬುದನ್ನು ಕಮರ್ಷಿಯಲ್ ಹಾಗೂ ಆಧ್ಯಾತ್ಮಿಕವಾಗಿ ಈ ಚಿತ್ರದಲ್ಲಿ ಹೇಳಿದ್ದೇವೆ ಎಂದರು


ಉಡುಪಿಯ ಸುತ್ತಮುತ್ತಲ ಪ್ರದೇಶಗಳಲ್ಲಿ ಈ ಚಿತ್ರದ ಚಿತ್ರೀಕರಣ ನಡೆಸಲಾಗಿದ್ದು, ಉಡುಪಿ ಭಾಗದ ಕನ್ನಡವನ್ನು ಬಳಸಲಾಗಿದೆ. ಸುಜಾತ ಚಡಗ ಹಾಗೂ ಚಂದ್ರಶೇಖರ್ ಸಿ, ಜಂಬಿಗಿ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಇದೇ 28ಕ್ಕೆ 'ಆರ' ರಾಜ್ಯಾದ್ಯಂತ ತೆರೆಗೆ ಬರಲಿದೆ.



'ಹಾಸ್ಟೆಲ್ ಹುಡುಗರು' ಥಿಯೇಟರ್‌ಗೆ ಬರುತ್ತಿದ್ದಾರೆ!

'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ತನ್ನ ಶೀರ್ಷಿಕೆಯಿಂದಲೇ ಕುತೂಹಲ ಹುಟ್ಟುಹಾಕಿರುವ ಈ ಚಿತ್ರ ಇಂದು ರಾಜ್ಯಾದ್ಯಂತ ತೆರೆಕಾಣುತ್ತಿದೆ. ಈ ಚಿತ್ರದಲ್ಲಿ ನಟಿ ರಮ್ಯಾ, ರಿಷಬ್ ಶೆಟ್ಟಿಯಂಥ ಸೆಲಬ್ರಿಟಿಗಳೂ ನಟಿಸಿದ್ದಾರೆ. ಅತಿಥಿ ಪಾತ್ರದಲ್ಲಿ ರಮ್ಯಾ ನಟಿಸಿದ್ದಾರೆ. ಚಿತ್ರತಂಡಕ್ಕೆ ಲೀಗಲ್ ನೋಟಿಸ್ ಕಳುಹಿಸುವುದರೊಂದಿಗೆ ಬಿಡುಗಡೆ ಅನುಮಾನ ಮೂಡಿಸಿತ್ತು ತಾನು ಪ್ರೊಮೋಗೆಂದು ಭಾಗವಹಿಸಿದ್ದ ದೃಶ್ಯಗಳ ವಿಡಿಯೊ ಹಾಗೂ ಫೋಟೊಗಳನ್ನು ಚಿತ್ರತಂಡ ತನ್ನ ಅನುಮತಿಯಿಲ್ಲದೆ ಸಿನಿಮಾದಲ್ಲೂ ಬಳಸಿಕೊಂಡಿದೆ ಎಂದು ಆರೋಪಿಸಿ ರಮ್ಯಾ ಒಂದು ಕೋಟಿ ರೂ, ಪರಿಹಾರ ನೀಡುವಂತೆ ನೋಟಿಸ್ ನೀಡಿದ್ದರು. ಹೀಗಾಗಿ ಗುರುವಾರ ನಡೆಯಬೇಕಿದ್ದ ಚಿತ್ರದ ಸೆಲೆಬ್ರಿಟಿ ಪ್ರೀಮಿಯರ್ ಶೋಗಳು ಕೂಡ ಕ್ಯಾನ್ಸಲ್ ಆಗಿದ್ದು, ಚಿತ್ರ ರಿಲೀಸಾಗುವುದು ಕೂಡ ಅನುಮಾನ ಎಂಬಂತಾಗಿತ್ತು. ಆದರೆ ಕೋರ್ಟ್ ರಮ್ಯಾ ಅವರ ವಾದವನ್ನು ತಳ್ಳಿ ಹಾಕಿರುವುದರಿಂದ ಈ ಚಿತ್ರ ರಿಲೀಸಾಗುತ್ತಿದೆ ನಿತಿನ್ ಕೃಷ್ಣಮೂರ್ತಿ ಅವರ ನಿರ್ದೇಶನದ ಈ ಚಿತ್ರದಲ್ಲಿ ಕಿರಿಕ್ ಮಾಡುವ ವಾರ್ಡನ್ ಕಾಟದಿಂದ ತಪ್ಪಿಸಿಕೊಳ್ಳಲು ಹಾಸ್ಟೆಲ್ ಹುಡುಗರು ಏನೆಲ್ಲಾ ಮಾಡುತ್ತಾರೆ. ಅದರಿಂದ ಮುಂದೆ ಏನು ಸಮಸ್ಯೆ ಅನುಭವಿಸುತ್ತಾರೆ ಎಂಬುದನ್ನು ಹಾಸ್ಯಮಿಶ್ರಿತ ದೃಶ್ಯಗಳೊಂದಿಗೆ ತೋರಿಸಲಾಗಿದೆ. ರಿಷಬ್ ಶೆಟ್ಟಿ, ಪವನ್‌ಕುಮಾರ್, ಶೈನ್‌ಶೆಟ್ಟಿ ಹಾಗೂ ದಿಗಂತ್ ಕೂಡ ಚಿತ್ರದಲ್ಲಿ ಅತಿಥಿ ಪಾತ್ರ ಮಾಡಿದ್ದಾರೆ. ಪುನೀತ್ ರಾಜ್‌ಕುಮಾರ್, ರಕ್ಷಿತ್ ಶೆಟ್ಟಿ, ಸುದೀಪ್‌ರಂಥ ಸ್ಟಾರ್‌ಗಳು ಸಾಥ್ ಕೊಟ್ಟಿರುವ ಈ ಚಿತ್ರವನ್ನು ಪ್ರಜ್ವಲ್ ಬಿಪಿ, ವರುಣ್‌ಕುಮಾರ್ ಗೌಡ, ನಿತಿನ್ ಕೃಷ್ಣಮೂರ್ತಿ, ಅರ ವಿಂದ್ ಕಶ್ಯಪ್ ನಿರ್ಮಿಸಿದ್ದಾರೆ.

ಸಿನಿಪದಬಂಧ–483



ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________



ವಿಜೇತರು: ಚಂದ್ರಶೇಖರಾರಾಧ್ಯ
ಅಗಸನಪುರ, ಮಳವಳ್ಳಿ ತಾಲೂಕು-571475



ಉಮ್ಮತ್ತೂರು ಇಂದುಶೇಖರ್
ಮೊ.9880820462

ಸಿನಿ ಪದಬಂಧ 482ರ ಉತ್ತರ

ಕಾ	ಕ್ರೈ	ಲ್			ಸಿ					ರಾಂ
ಸಿ				ಮ	ರಿ	ಯಾ	ಮೈ	ಡಾ	ಲಿಂ	ಗ್
ನ		ಶ			ಚಂ		ನಾ			ನಂ
ಸ	ತ್ಯಂ	ಶಿ	ವಂ	ಸುಂ	ದ	ರಂ			ಬಿಂ	ಬ
ರ		ಕು			ನ			ರ		ರ್
		ಮಾ	ರ್ಜಾ	ಲ		ಕೆ	ನ	ಮೇ		
ಬ		ರ್			ಕ			ಶ್		ವಾ
ನ	ಗ್ಮ			ಶ್ರೀ	ರ	ಸ್ತು	ಶು	ಭ	ಮ	ಸ್ತು
ಶಂ		ಪಂ			ಡಿ			ಟ್		ಪ್ರ
ಕ	ರ್ನಾ	ಟ	ಕ	ಸು	ಪು	ತ್ರ				ಕಾ
ರಿ					ರ			ಝೇಂ	ಕಾ	ರ

ಎಡದಿಂದ ಬಲಕ್ಕೆ

1. ನಟಿ ರೂಪಿಕಾಳ "ನೂಪುರ"ದ ಸದ್ದು ನಾದ ಹೊಮ್ಮಿಸಿದೆ 3
2. ವಸಂತ್ ಕುಮಾರ್ ಆಚರಿಸಿದ ಗೆಲುವಿನ ಹಬ್ಬ! 5
5. ಕಿಲ್ಲಿಂಗ್ ವೀರಪ್ಪನ್‌ನ 'ಮುತ್ತುಲಕ್ಷ್ಮಿ' ಆರಂಭದಲ್ಲಿ 'ಯಾಗ'ವಿದೆ 4
6. ನರಕಾಧಿಪತಿಯ ಜೊತೆ ಆತನ ಸೇವಕನೂ ಇದ್ದಾನೆ 5
9. ಸುನಿಲ್ ಕುಮಾರ್ ದೇಸಾಯಿಯ "ಹುಣ್ಣಿಮೆಯ ಹೆಣ್ಣು" 7
10. ಲೂಸ್ ಮಾದ ಕುಬೇರನ ಸೇವಕ 2
11. _ _ ಇದ್ದೋನೇ ಬಾಸು 2
12. ಶಿವಣ್ಣ – ಸುನಿತಾ ಅಭಿನಯಕ್ಕೆ ಚಿ. ದತ್ತರಾಜ್ ನಿರ್ದೇಶಕ 7
14. ಈ ಛಾಯಾಗ್ರಾಹಕ ಜಾತಿ ಅಲಂಕರಿಸಿದ್ದಾನೆ 5
15. ವಕೀಲ ರವಿ ಬ್ರಹ್ಮಾವರ್ ಪಾತ್ರ ನೆನಪಿಸುವ ಕೆ.ವಿ.ರಾಜು ನಿರ್ದೇಶನದ ಚಿತ್ರ 4
16. ಟೈಗರ್ ಪ್ರಭಾಕರ್–ಆರತಿ ಅಭಿನಯದಿ ತಾರೆ ಬಿರುಕಾಗಿದೆ 5
17. ನಾಯಿ ಹಿಂಬಾಲಿಸಿದ ಅದರ ಛಾಯೆ 3

ಮೇಲಿನಿಂದ ಕೆಳಕ್ಕೆ

1. ಈ ಸಂಸ್ಕೃತ ವಾಕ್ಯದಿ ಸಮಯವೇ ಎಲ್ಲದಕ್ಕೂ ಉತ್ತರ ನೀಡಲಿದೆ! 8
2. ಹಕ್ಕ–ಬುಕ್ಕರು ಆಳಿದ ಸಾಮ್ರಾಜ್ಯದಿ ಕಾಣಿಸಿಕೊಂಡ ಕುವರ 11
3. ಯಾರಿಗೂ ಹೇಳ್ಬೇಡಿ ಚಿತ್ರದಲ್ಲಿನ ಮನೆಗಳ ಸಮೂಹ 3
4. ತಾಳಿ ಕಟ್ಟುವ ಶುಭವೇಳೆ ಮಾಂಗಲ್ಯಂ ತಂತುನಾನೇನ ಮಂತ್ರದ ಜೊತೆ ಪಿಪ್ಪಿ ಪಿಪ್ಪಿ ಡುಂ ಡುಂ! 4
7. ಸಹ ನಟ 'ದೊರೆ'ಯ ಊರು 3
8. "ಮೈ ಲಾರ್ಡ್ ನನ್ನ ವಾದ ಕೇಳಿ ಕೇಳಿ.....", ಗೀತೆಯ ಚಿತ್ರ 8
12. ಪುಷ್ಪಕ ವಿಮಾನ ಏರಿದವಳಿಗೆ ಮತ್ತೇರಿದೆ ! 3
13. ಕ್ರಿಕೆಟ್ ಆಟಗಾರ ಸುಮಿತ್ ಗೆ ಈ 'ಸಮರ' ವೇಕೆ !? 4

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015



ಈ ವಾರ 'ಅಪರೂಪ' ತೆರೆಗೆ

ಆಕಾಶ್, ಅರಸು ಖ್ಯಾತಿಯ ಮಹೇಶ್ ಬಾಬು ಅವರ ನಿರ್ದೇಶನದ 'ಅಪರೂಪ' ಇಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಮೊನ್ನೆ ಈ ಚಿತ್ರದ ಟ್ರೈಲರನ್ನು ನಟ ಡಾಲಿ ಧನಂಜಯ್ ಬಿಡುಗಡೆ ಮಾಡಿ ಮಾತನಾಡುತ್ತಾ, ಕನ್ನಡ ಚಿತ್ರರಂಗಕ್ಕೆ ಮಹೇಶ್‌ಬಾಬು ಅವರು ತುಂಬಾ ಹಿಟ್‌ಗಳನ್ನು ಕೊಟ್ಟಿದ್ದಾರೆ. ಅಪರೂಪ ಇನ್ನೊಂದು ಹಿಟ್ ಲಿಸ್ಟ್‌ಗೆ ಸೇರಲಿ. ಸುಘೋಷ್ ಅವರ ಸ್ಕ್ರೀನ್ ಪ್ರೆಸೆನ್ಸ್ ತುಂಬಾ ಚೆನ್ನಾಗಿದೆ. ಅದ್ಭುತವಾಗಿ ಡ್ಯಾನ್ಸ್ ಕೂಡ ಮಾಡಿದ್ದಾರೆ. ಕನ್ನಡ ಇಂಡಸ್ಟ್ರಿಗೆ ಅವರಿಗೆ ಸ್ವಾಗತ. ಹೃತಿಕಾ ಅವರ ಅಭಿನಯ ಡ್ಯಾನ್ಸ್ ಕೂಡ ಚೆನ್ನಾಗಿದೆ. ಇಡೀ ತಂಡಕ್ಕೆ ಒಳ್ಳೆಯದಾಗಲಿ ಎಂದರು. ನಿರ್ದೇಶಕ ಮಹೇಶ್‌ಬಾಬು ಮಾತನಾಡಿ, ಈ ಕಾರ್ಯಕ್ರಮಕ್ಕೆ ಪ್ರೋತ್ಸಾಹ ಕೊಟ್ಟಿರುವ ಧನಂಜಯ್ ಅವರಿಗೆ ಧನ್ಯವಾದ.

'ಅಪರೂಪ' ಅನ್ನೋದು ಲವ್ ಸ್ಟೋರಿ. ನಾನು ಹೆಚ್ಚಾಗಿ ಲವ್‌ಸ್ಟೋರಿಯ ಸಿನಿಮಾಗಳನ್ನೇ ಮಾಡಿದ್ದೇನೆ. ಈ ಚಿತ್ರದಲ್ಲಿ "ಲನ್‌ಗಳಿಲ್ಲ. "ಹೀರೋ–"ಹೀರೋಇನ್‌ಗಳೇ "ವಿಲನ್‌ಗಳು. ಹೊಸ ನಾಯಕ ನಾಯಕಿಯ ಮೇಲೆ ನಿಮ್ಮ ಹಾರೈಕೆ ಇರಲಿ ಎಂದರು. ಚಿತ್ರದ ನಾಯಕ ಸುಘೋಷ್ ಮಾತನಾಡಿ, ಟ್ರೈಲರ್ ನಿಮಗೆ ಇಷ್ಟವಾಗಿದೆ ಎಂದುಕೊಳ್ಳುತ್ತೇನೆ.

ಮೈಸೂರು ಮಿತ್ರ

ಉರುಳಿಗೆ ಸಿಲುಕಿ ಚಿರತೆ ಸಾವು

ಜಮೀನಿನ ಮಾಲೀಕ ಪರಾರಿ, ಸ್ಥಳಕ್ಕೆ ಅರಣ್ಯಾಧಿಕಾರಿಗಳ ಭೇಟಿ

ಹೆಚ್.ಡಿ.ಕೋಟೆ, ಜು.20– ತಾಲೂಕಿನ ಹೆಗ್ಗಡಾಪುರ ಗ್ರಾಮದ ದೇವನಾಯಕ ಎಂಬುವರ ಜಮೀನಿನಲ್ಲಿ ಸುಮಾರು ಒಂದೂವರೆ ವರ್ಷದ ಹೆಣ್ಣು ಚಿರತೆಯೊಂದು ಉರುಳಿಗೆ ಸಿಲುಕಿ, ಸಾವನ್ನಪ್ಪಿರುವ ಘಟನೆ ಗುರುವಾರ ಬೆಳಕಿಗೆ ಬಂದಿದೆ.



ಅರಣ್ಯ ಇಲಾಖೆ ಖಚಿತ ಮಾಹಿತಿ ಮೇರೆಗೆ ಸ್ಥಳಕ್ಕೆ ಭೇಟಿ ನೀಡಿ ತನಿಖೆ ಕೈಗೊಂಡಿದೆ. ಈ ಸಂಬಂಧ ಡಿಸಿಎಫ್ ಬಸವರಾಜು ಮಾರ್ಗದರ್ಶನದಲ್ಲಿ ಎಸಿಎಫ್ ಲಕ್ಷ್ಮಿಕಾಂತ್, ಮೇಟಿಕುಪ್ಪೆ ವಲಯ ಅರಣ್ಯ ಅಧಿಕಾರಿ ಹರ್ಷಿತ್ ಅರಣ್ಯ ಇಲಾಖೆಯ ಸಿಬ್ಬಂದಿವರ್ಗದವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಚಿರತೆಯ ಮರಣೋತ್ತರ ಪರೀಕ್ಷೆಯನ್ನು ಅರಣ್ಯ ಇಲಾಖೆಯ ಪಶುವೈದ್ಯಾಧಿಕಾರಿ ಡಾ. ಮುಜೀಬ್ ನಡೆಸಿದರು. ಈ ಸಂಬಂಧ ಪ್ರಕರಣ ಹೆಚ್.ಡಿ.ಕೋಟೆ ಪಟ್ಟಣದ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಜಮೀನಿನ ಮಾಲೀಕ ದೇವನಾಯಕ ತಲೆಮರೆಸಿಕೊಂಡಿದ್ದು, ತನಿಖೆ ಕೈಗೊಳ್ಳಲಾಗಿದೆ ಎಂದು ವಲಯ ಅರಣ್ಯ ಅಧಿಕಾರಿ ಪ್ರಸನ್ನ ಕುಮಾರ್ ತಿಳಿಸಿದ್ದಾರೆ. ಇದೇ ವೇಳೆ ಎಸ್‌ಆರ್‌ಎಫ್‌ಓ ಅರುಣ್ ಕುಮಾರ್ ಸಿಬ್ಬಂದಿಗಳಾದ ತಿಮ್ಮಯ್ಯ, ಚಂದನ್ ಭಾಗವಹಿಸಿದ್ದರು.

ಹೆಚ್.ಡಿ.ಕೋಟೆ ಬಳಿ ಗುಂಪು ಘರ್ಷಣೆ; ಮೂವರಿಗೆ ಗಾಯ

ಹಳೆ ವೈಷಮ್ಯದ ಹಿನ್ನೆಲೆಯಲ್ಲಿ ಘಟನೆ, ಸ್ಥಳಕ್ಕೆ ಪೊಲೀಸರು ಭೇಟಿ

ಹೆಚ್.ಡಿ.ಕೋಟೆ, ಜು.20– ಎರಡು ಗುಂಪುಗಳ ನಡುವೆ ಘರ್ಷಣೆಯಿಂದ ಮೂವರು ಯುವಕರು ಗಾಯಗೊಂಡಿರುವ ಘಟನೆ ತಾಲೂಕಿನ ಮಾದಾಪುರ ಗ್ರಾಮದಲ್ಲಿ ಸಂಭವಿಸಿದೆ.

ಗ್ರಾಮದ ಒಂದು ಗುಂಪಿನ ಲಿಂಗರಾಜು ಪುತ್ರ ಮನೋಜ್ ತಲೆಗೆ ತೀವ್ರ ಪೆಟ್ಟಾಗಿದ್ದು, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಮತ್ತೊಂದು ಗುಂಪಿನ ಇಬ್ಬರೂ ಯುವಕರು ತಮಗೂ ಪೆಟ್ಟಾಗಿದೆ ಎಂದು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಳೆದ ದೀಪಾವಳಿ ಹಬ್ಬದ ಸಂದರ್ಭದಲ್ಲಿ ಎರಡು ಗುಂಪುಗಳ ನಡುವೆ ಗಲಾಟೆ ನಡೆದು ನ್ಯಾಯ ಪಂಚಾಯತಿ ಮೂಲಕ ವಿವಾದ ಬಗೆಹರಿಸಲಾಗಿತ್ತಾದರೂ ಪ್ರಕರಣ ಬೂದಿ ಮುಚ್ಚಿದ ಕೆಂಡದಂತೆ ಇತ್ತು ಎನ್ನಲಾಗಿದೆ.

ಬುಧವಾರ ಸಂಜೆ ಒಂದು ಗುಂಪಿನ ಯುವಕ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಮತ್ತೊಂದು ಗುಂಪಿನ ಯುವಕರು ಜಗಳ ತೆಗೆದು ಗಲಾಟೆ ಮಾಡಿದ್ದಾರೆ. ಇದಾದ ನಂತರ ಗಲಾಟೆ ಮಾಡಿದ ಯುವಕರ ಗುಂಪಿನ ಪೈಕಿ ಶಿವ ಎಂಬ ಯುವಕ ಮನೋಜ್ ಫೋನ್‌ಗೆ ಕರೆ ಮಾಡಿ ನಿಮ್ಮ ಬೀದಿಯ ಯುವಕ ನಮ್ಮ ಬೀದಿಗೆ ಬಂದು ಗಲಾಟೆ ಮಾಡುತ್ತಿದ್ದಾನೆ. ನೀನು ಇಲ್ಲಿಗೆ ಬಾ ಅವನನ್ನು ಕರೆದುಕೊಂಡು ಹೋಗು ಎಂದು ಕರೆದಿದ್ದಾನೆ. ಮನೋಜ್ ನಾನು ಕೆಲಸ ಮಾಡುತ್ತಿದ್ದೇನೆ ಸಂಜೆ ಬರುತ್ತೇನೆ ಎಂದು ಹೇಳಿದ್ದಾನೆ. ನಂತರ ಸಂಜೆ ಗ್ರಾಮಕ್ಕೆ ಬಂದಾಗ ಯುವಕರ ಗುಂಪು ಏಕಾಏಕಿ ಮನಬಂದಂತೆ ಕಲ್ಲಿನಿಂದ ತಲೆಗೆ ಹೊಡೆದು ಗಾಯಗೊಳಿಸಿದ್ದಾರೆ. ಪೊಲೀಸರು ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಆಸ್ಪತ್ರೆಗೂ ಬೇಟಿ ನೀಡಿ ಗಾಯಗೊಂಡ ಯುವಕನ ಹತ್ತಿರ ದೂರು ಪಡೆದು ದೌರ್ಜನ್ಯ ಪ್ರಕರಣ ದಾಖಲು ಮಾಡಿ ಮುಂದಿನ ಕ್ರಮ ಕೈಗೊಂಡಿದ್ದಾರೆ.



ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಪ್ರಕರಣ

ಮರು ತನಿಖೆಗೆ ಆಗ್ರಹಿಸಿ ನರಸೀಪುರದಲ್ಲಿ ಪ್ರತಿಭಟನೆ

ತಿ.ನರಸೀಪುರ, ಜು.20– ಧರ್ಮಸ್ಥಳದ ಸೌಜನ್ಯ ಅತ್ಯಾಚಾರ ಪ್ರಕರಣವನ್ನು ಮರು ತನಿಖೆ ಮಾಡುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ಸದಸ್ಯರು ತಾಲೂಕು ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.



ತಾಲೂಕು ಕಚೇರಿ ಎದುರು ಜಮಾವಣೆಗೊಂಡ ಸಮಿತಿಯ ಸದಸ್ಯರು ಪ್ರಕರಣದಲ್ಲಿ ಆರೋಪಿಯಾಗಿದ್ದ ಸಂತೋಷ್‌ನನ್ನು ನಿರಪರಾಧಿ ಎಂದು ಬಿಡುಗಡೆ ಮಾಡಿದ ಸಿಬಿಐ ನ್ಯಾಯಾಲಯದ ನಡೆಯನ್ನು ಖಂಡಿಸಿ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಸಮಿತಿಯ ಜಿಲ್ಲಾ ಪ್ರಧಾನ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಮಾತನಾಡಿ, ಧರ್ಮಸ್ಥಳದ ಆಸುಪಾಸಿನಲ್ಲಿ 462 ಪ್ರಕರಣಗಳು ನಡೆದಿವೆ. 90ಕ್ಕೂ ಹೆಚ್ಚು ಪ್ರಕರಣಗಳು ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳಾಗಿದ್ದು, ಎಲ್ಲ ಪ್ರಕರಣಗಳಲ್ಲಿ ಬಹುಪಾಲು ಧರ್ಮಸ್ಥಳದ ಸುತ್ತ ಮುತ್ತ ಭೂ ಮಾಫಿಯಾದಿಂದ ಆಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಸೌಜನ್ಯ ಎಂಬ ಅಮಾಯಕ ಬಾಲಕಿ ಮೇಲಿನ ಅತ್ಯಾಚಾರ ಮತ್ತು ಕೊಲೆಯ ಘಟನೆ ಬಗ್ಗೆ ನ್ಯಾಯಯುತ ತನಿಖೆಯಾಗಬೇಕಿತ್ತು ಎಂದು ಹೇಳಿದರು.

ಕೃತ್ಯವೆಸಗಿದ ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕಿತ್ತು ಆದರೆ ಪೊಲೀಸ್ ಇಲಾಖೆಯವರು ಸಂತೋಷ್ ರಾವ್ ಎಂಬಾತನನ್ನು ಆರೋಪಿಯನ್ನಾಗಿಸಿ ಆತನ ವಿರುದ್ಧ ದಾಖಲು ಮಾಡಿದ್ದ ಪ್ರಕರಣವನ್ನು ಸಿಬಿಐ ನ್ಯಾಯಾಲಯದಲ್ಲಿ ವಜಾಮಾಡಿ ಆರೋಪಿಯನ್ನು ನಿರಪರಾಧಿ ಎಂದು ಬಿಡುಗಡೆಗೊಳಿಸಿರುವುದು ನಾಗರೀಕ ಸಮಾಜದಲ್ಲಿ ಅನುಮಾನ ಹುಟ್ಟುವಂತೆ ಮಾಡಿದೆ.ಈ ಘಟನೆಯಿಂದ ಅಪರಾಧಿಗಳಿಗೆ ರಕ್ಷಣೆ ನಿರಪರಾಧಿಗಳಿಗೆ ಶಿಕ್ಷೆ ನೀಡುವ ನಯವಂಚಕತನ ಎದ್ದು ಕಾಣುತ್ತಿದೆ. ಸಿಬಿಐ ನ್ಯಾಯಾಲಯ ನೀಡಿರುವ ತೀರ್ಪಿನಿಂದ ಸೌಜನ್ಯ ಕೊಲೆ ಪಾತಕಿಗಳಿಗೆ ರಕ್ಷಣೆ ಕೊಡಲಾಗಿದೆ ಎಂದು ಆರೋಪಿಸಿದರು.

ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಡಾ.ಚಂದ್ರಶೇಖರ್ ಮಾತನಾಡಿ, 11 ವರ್ಷಗಳ ಹಿಂದೆ ನಡೆದ ಘಟನೆಗೆ ನ್ಯಾಯ ಸಿಗದ ನಮ್ಮ ನ್ಯಾಯ ಪ್ರಧಾನ ವ್ಯವಸ್ಥೆಗಳ ಅಸ್ತಿತ್ವದ ಬಗ್ಗೆ ಗೌರವ ಉಳಿಯಬೇಕಾದರೆ ಸೌಜನ್ಯಳ ಸಾವಿಗೆ ನ್ಯಾಯ ಸಿಗಲೇಬೇಕು. ಹಾಗೂ ಅಪರಾಧಿಗಳ ಆಶ್ರಯ ದಾತರಿಗೂ ಶಿಕ್ಷೆಯಾಗಬೇಕು, ಸರ್ಕಾರ ಈ ಪ್ರಕರಣದ ಬಗ್ಗೆ ಗಂಭೀರ ಆಲೋಚನೆ ಮಾಡಿ ಸೌಜನ್ಯಳ ಕೊಲೆ ಪ್ರಕರಣವನ್ನು ಮರುತನಿಖೆಗೆ ಆದೇಶಿಸಬೇಕೆಂದು ಅವರು ಆಗ್ರಹಿಸಿದರು.

ದಸಂಸ ತಾಲೂಕು ಸಂಚಾಲಕ ಕೆಂಪಯ್ಯನಹುಂಡಿ ರಾಜು, ಪ್ರಧಾನ ಸಂಚಾಲಕ ಬನ್ನಹಳ್ಳಿ ಬಸವರಾಜು, ರೈತ ಮುಖಂಡ ಕಿರಗಸೂರು ಶಂಕರ್, ಎಲ್.ರಾಜಶೇಖರ್, ಸುರೇಶ್, ರಾಮು, ಕ್ಯಾನಾಯಕನಹುಂಡಿ ಮರಿಸ್ವಾಮಿ, ಮಹದೇವ, ರಂಗಸ್ವಾಮಿ, ಸೋಮಣ್ಣ ಮನು, ಜಯಣ್ಣ, ರವಿಕಾಂತ, ಕೇಶವ ಮೂರ್ತಿ, ಇತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಲಾರಿ ಡಿಕ್ಕಿ; ಮೊಪೆಡ್ ಸವಾರ ಸಾವು



ತಿ.ನರಸೀಪುರ, ಜು.20– ಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ಮೊಪೆಡ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಕಾವೇರಿ–ಕಪಿಲಾ ಜೋಡಿ ರಸ್ತೆಯಲ್ಲಿ ಗುರುವಾರ ಸಂಜೆ ಸಂಭವಿಸಿದೆ.

ಪಟ್ಟಣದ ದಾಸನಾಯಕರ ಬೀದಿಯ ಮಹದೇವ ನಾಯಕ ಎಂಬುವರ ಪುತ್ರ ಗಾರೆ ಕೆಲಸಗಾರ ರುದ್ರ(40) ಮೃತ ದುರ್ದೈವಿ.

ರುದ್ರ ಗುರುವಾರ ಸಂಜೆ ತಿರುಮಕೂಡಲು ಕಡೆಯಿಂದ ಖಾಸಗಿ ಬಸ್ ನಿಲ್ದಾಣದ ಕಡೆಗೆ ಹೋಂಡಾ ಆಕ್ಟಿವಾ (ಕೆಎ–09 2179)ದಲ್ಲಿ ಬರುತ್ತಿದ್ದ ವೇಳೆ ಅದೇ ಮಾರ್ಗವಾಗಿ ಹಿಂದಿನಿಂದ ಬಂದ ಲಾರಿ(ಕೆಎಲ್–12ಎಂ 9963) ಬೆಸ್ಕಾಂ ಕಚೇರಿಯ ಮುಂಭಾಗದಲ್ಲಿ ಮೊಪೆಡ್‌ಗೆ ಡಿಕ್ಕಿ ಹೊಡೆಯಿತು ಎನ್ನಲಾಗಿದೆ. ಇದರಿಂದ ತಲೆಗೆ ಬಲವಾದ ಪೆಟ್ಟು ಬಿದ್ದು, ರಕ್ತಸ್ರಾವವಾಗಿ ರುದ್ರ ಸ್ಥಳದಲ್ಲೇ ಮೃತ ಪಟ್ಟಿದ್ದಾನೆ. ಘಟನಾ ಸ್ಥಳಕ್ಕೆ ಡಿವೈಎಸ್‌ಪಿ ಗೋವಿಂದರಾಜು, ಪಿಎಸ್‌ಐ ತಿರುಮಲ್ಲೇಶ್ ಹಾಗೂ ಸಿಬ್ಬಂದಿವರ್ಗ ಭೇಟಿ ನೀಡಿದ್ದರು. ಘಟನಾ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹುಣಸೂರಲ್ಲಿ ಎಲ್‌ಐಸಿ ಪ್ರತಿನಿಧಿಗಳ ಪ್ರತಿಭಟನೆ

ಹುಣಸೂರು, ಜು.20– ತಮ್ಮ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಅಖಿಲಾ ಭಾರತ ವಿಮಾ ಪ್ರತಿನಿದಿಗಳ ಸಂಘಟನೆ (LICAOI) ಕಾರ್ಯಕರ್ತರು ಎಲ್‌ಐಸಿ ಕಚೇರಿ ಮುಂದೆ ಪೋಸ್ಟರ್ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು.



ಭಾರತೀಯ ಜೀವ ವಿಮಾ ಪ್ರತಿನಿಧಿಗಳ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ಎಲ್‌ಐಸಿ ಪ್ರತಿನಿಧಿಗಳು ಇಂದು ದೇಶವ್ಯಾಪಿ ಕರೆ ನೀಡಿದ್ದ ಮೇರೆಗೆ ಎಲ್‌ಐಸಿ ಕಚೇರಿಯ ಎದುರು ಪೋಸ್ಟರ್ ಪ್ರದರ್ಶಿಸಿ ಪ್ರತಿಭಟನೆ ನಡೆಸಿ ಕೇಂದ್ರ ಸರಕಾರದ ವಿರುದ್ಧ ಘೋಷಣೆ ಕೂಗಿ ಗಮನ ಸೆಳೆದರು.

ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷ ರಾಧಾಕೃಷ್ಣ ಮಾತನಾಡಿ, ದೇಶದ ಆರ್ಥಿಕ ಸದೃಢತೆಯಲ್ಲಿ ಎಲ್‌ಐಸಿ ಸಂಸ್ಥೆಯು ಪ್ರಮುಖ ಪಾತ್ರ ವಹಿಸಿದೆ. ಸಂಸ್ಥೆಯ ಬೆಳವಣಿಗೆಯಲ್ಲಿ ದೇಶದಲ್ಲಿರುವ ಲಕ್ಷಾಂತರ ಪ್ರತಿನಿಧಿಗಳು ಹಗಲು ರಾತ್ರಿ ಜನಸಾಮಾನ್ಯರ ಹತ್ತಿರ ಹೋಗಿ ಎಲ್‌ಐಸಿ ಪಾಲಿಸಿಗಳನ್ನು ಮಾಡಿಸುವ ಮೂಲಕ ದೇಶದಲ್ಲಿ ನಡೆಯುವ ಅಭಿವೃದ್ಧಿ ಕಾರ್ಯಗಳಿಗೆ ಬಂಡವಾಳ ಹೂಡುತ್ತಿದ್ದಾರೆ. ಇಂತಹ ಪ್ರತಿನಿಧಿಗಳನ್ನು ಎಲ್‌ಐಸಿ ಆಡಳಿತ ಮಂಡಳಿ ಮತ್ತು ಕೇಂದ್ರ ಸರ್ಕಾರ ನಿರ್ಲಕ್ಷ ಮಾಡಿದ್ದು ಗುಂಪು ವಿಮೆ ಮತ್ತು ಎಲ್‌ಐಸಿ ಕಮಿಷನ್ ಹೆಚ್ಚಳ ಮಾಡುವುದು ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸುವಂತೆ ದಶಕಗಳಿಂದ ಹೋರಾಟಗಳ ನಡೆಸಿದರೂ ನಿರ್ಲಕ್ಷ ಮಾಡಲಾಗುತ್ತಿದೆ ಎಂದು ಆಪಾದಿಸಿದರು.

ಇದನ್ನು ಖಂಡಿಸಿ ಗುರುವಾರ ದೇಶವ್ಯಾಪಿಯಾಗಿ ಜನರ ಮತ್ತು ಗ್ರಾಹಕರ ಗಮನ ಸೆಳೆಯಲು ಎಲ್‌ಐಸಿ ಕಚೇರಿಗಳ ಎದುರು ಪೋಸ್ಟರ್ ಪ್ರದರ್ಶನ ಮಾಡಿ ಪ್ರತಿಭಟಿಸಲಾಗುತ್ತಿದೆ. ಎಲ್‌ಐಸಿ ಆಡಳಿತ ಮಂಡಳಿ ಮತ್ತು ಕೇಂದ್ರ ಸರ್ಕಾರ ಕೂಡಲೇ ಎಲ್‌ಐಸಿ ಪ್ರತಿನಿಧಿಗಳ ಸುರಕ್ಷತೆ ಮತ್ತು ಕ್ಷೇಮಕ್ಕಾಗಿ ಗುಂಪು ವಿಮೆ ಮತ್ತು ವರ್ಯೋಮಾನ ಹೆಚ್ಚಳ ಸೇರಿದಂತೆ ಹಲವು ಬೇಡಿಕೆಗಳನ್ನು ಕೂಡಲೇ ಈಡೇರಿಸಬೇಕು ಎಂದು ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂಘಟನೆಯ ಸದಸ್ಯರಾ ನಾಗರಾಜು ವಿ.ಬಸವರಾಜು ಕಲ್ಕುಣಿಕೆ, ಆರ್.ಟಿ.ರವಿ, ವೀರಭದ್ರ ಎ., ಸಿದ್ದಯ್ಯ ಶಿವರುದ್ರ ದೇವಕೀರ್ತಿ ಎನ್. ಮುಂತಾದವರು ಭಾಗವಹಿಸಿದ್ದರು.

ಸರಗೂರು ಆರೋಗ್ಯ ಕೇಂದ್ರಕ್ಕೆ ಡಿಹೆಚ್‌ಓ ಭೇಟಿ

ಪ್ರಯೋಗಾಲಯ, ವಾರ್ಡ್‌ಗಳು, ಹೆರಿಗೆ ಕೊಠಡಿಗಳ ಪರಿಶೀಲನೆ

ಸರಗೂರು, ಜು.20– ಸರಗೂರು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಉತ್ತಮ ಆರೋಗ್ಯ ಸೇವೆ ದೊರಕಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಎಂದು ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕುಮಾರಸ್ವಾಮಿ ತಿಳಿಸಿದರು.



ಸರಗೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಸಂಜೆ ಅನಿರೀಕ್ಷಿತ ಭೇಟಿ ನೀಡಿದ ಅವರು, ಆಸ್ಪತ್ರೆಯ ಎಲ್ಲಾ ಕೊಠಡಿಗಳು. ಪ್ರಯೋಗಾಲಯ, ವಾರ್ಡ್‌ಗಳು, ಹೆರಿಗೆ ಕೊಠಡಿ ಅಲ್ಲಿನ ವೈದ್ಯಾಧಿಕಾರಿಗಳಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಎಲ್ಲವನ್ನು ಪರಿಶೀಲಿಸಿ ಸೂಚನೆ ಮತ್ತು ಸಲಹೆಗಳನ್ನು ನೀಡಿದರು.

ಇದೇ ಸಂದರ್ಭದಲ್ಲಿ ಸೋಮೇಶ್ವರ ಕಟ್ಟಡ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಹೆಚ್.ರಮೇಶ್ ಮಾತನಾಡಿ, ರಾತ್ರಿ ಪಾಳಿದಲ್ಲಿ ನುರಿತ ವೈದ್ಯರನ್ನು ನೇಮಿಸಬೇಕು. ಸರ್ಕಾರದಿಂದ ಬರುವ ಆರೋಗ್ಯ ಪರಿಕರಗಳನ್ನು ಹಾಗೂ ಔಷಧಿಗಳನ್ನು ರೋಗಿಗಳಿಗೆ ತಲುಪಿಸುವ ನಿಟ್ಟಿನಲ್ಲಿ ಕಾರ್ಯರೂಪಕ್ಕೆ ತರಬೇಕು ಹಾಗೂ ಹೆರಿಗೆ, ಅಪಘಾತ ಇನ್ನಿತರ ತುರ್ತು ಸಂದರ್ಭಗಳಲ್ಲಿ ಆಂಬುಲೆನ್ಸ್ ಸೇವೆ ಸಮರ್ಪಕವಾಗಿ ದೊರಕಬೇಕು ಎಂದರು.

ಇದಕ್ಕೆ ಉತ್ತರಿಸಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ ಆರೋಗ್ಯ ಕೇಂದ್ರದಲ್ಲಿ ಉತ್ತಮ ಆರೋಗ್ಯ ಸೇವೆ ನೀಡಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ ಹಾಗೂ ಸಾರ್ವಜನಿಕರಿಂದ ದೂರು ಬಾರದಂತೆ ಕೆಲಸ ನಿರ್ವಹಿಸಲು ಸೂಚನೆಯನ್ನು ನೀಡುತ್ತೇನೆ ಎಂದರು.

ಪಪಂ ಸದಸ್ಯ ನೂರಾಳ ಸ್ವಾಮಿ ಹಾಗೂ ಶ್ರೀವತ್ಸ ವನಸಿರಿ ಉಮೇಶ್, ರಾಖಿಪ್ರಕಾಶ್, ತಾಲೂಕು ಆರೋಗ್ಯಾಧಿಕಾರಿ ಡಾ. ರವಿಕುಮಾರ್, ಡಾ.ಸೋಮಣ್ಣ ಡಾ.ಪಾರ್ಥಸಾರಥಿ. ಡಾ. ಪ್ರಭು. ಡಾ.ದೇವಿಕಾ, ಸಿಬ್ಬಂದಿ ಹಾಜರಿದ್ದರು.

ದಸಂಸ ಡಾ.ಡಿ.ಜಿ.ಸಾಗರ್ ಬಣದ ತಾಲೂಕು ಸಮಿತಿ ವಜಾ

ಹೆಚ್.ಡಿ.ಕೋಟೆ, ಜು.20– ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಾ.ಡಿ.ಜಿ. ಸಾಗರ್ ಬಣದ ತಾಲೂಕು ಸಮಿತಿಯನ್ನು ವಜಾಗೊಳಿಸಿದೆ ಎಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಘಟನಾ ಸಂಚಾಲಕ ಇಟ್ನಾ ರಾಜಣ್ಣ ತಿಳಿಸಿದರು.



ಪಟ್ಟಣದಲ್ಲಿ ಬುಧವಾರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ತಾಲೂಕು ಸಮಿತಿಯ ಸದಸ್ಯರು ಈಚೆಗೆ ಯಾವುದೇ ಸಭೆ ಸೇರದೆ, ಸಭೆಯಲ್ಲಿ ತೀರ್ಮಾನಿಸದೆ ಸಮಿತಿಯ ತಲೆಬರಹವಿರುವ ಲೆಟರ್ ಹೆಡ್‌ನಲ್ಲಿ ತಾಲೂಕು ಮಟ್ಟದ ಅಧಿಕಾರಿಗಳನ್ನು ಹೆದರಿಸುವ ಕಾರ್ಯ ನಡೆಯುತ್ತಿದೆ. ಆದ್ದರಿಂದ ಆ ಸಮಿತಿಯನ್ನು ವಜಾ ಗೊಳಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಸಮಿತಿಯ ತಾಲೂಕು ಸಂಚಾಲಕ ಪುಟ್ಟಮಾದು ಕೋಟೆ, ಆಂತರಿಕ ತಾಲೂಕು ಸಂಚಾಲಕ ಬೆಳತ್ತೂರು ನಾಗೇಶ್, ಕೃಷಿ ಮತ್ತು ಕೂಲಿ ಕಾರ್ಮಿಕರ ಸಂಚಾಲಕ ಮಾಲಗಯ್ಯ, ಅಲ್ಪ ಸಂಖ್ಯಾತರ ಸಂಚಾಲಕ ಎಸ್.ಸಮೀರ್, ಖಜಾಂಚಿ ಲಿಂಗರಾಜು, ಸೇರಿದಂತೆ ಇತರರೆಲ್ಲರನ್ನೂ ಪದವಿಯಿಂದ ವಜಾಗೊಳಿಸಲಾಗಿದೆ ಎಂದು ತಿಳಿಸಿದರು. ಅಲ್ಲದೇ ಅವರು ನಮ್ಮ ಸಂಘಟನೆಯ ಹೆಸರನ್ನು ಎಲ್ಲೂ ಬಳಸಬಾರದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು. ಗೋಷ್ಠಿಯಲ್ಲಿ ಆಟೋ ಕುಮಾರ್ ಇದ್ದರು.

ರಕ್ತದಾನ ಮಾನವೀಯ ಕಾರ್ಯ, ರಕ್ತಕೊಟ್ಟು ಜೀವ ಉಳಿಸಿ

ನಂಜನಗೂಡು, ಜು.20– ರಕ್ತದಾನ ಶ್ರೇಷ್ಠ ದಾನವಾಗಿದ್ದು, ರಕ್ತ ಕೃತಕವಾಗಿ ತಯಾರಿಸುವ ವಸ್ತುವಲ್ಲ, ಒಬ್ಬ ವ್ಯಕ್ತಿಯ ಜೀವ ಉಳಿಸುವ ಶಕ್ತಿ ಮನುಷ್ಯನ ರಕ್ತಕ್ಕಿದೆ. ಆದ್ದರಿಂದ ರಕ್ತದಾನ ಮಾಡುವುದು ಒಂದು ಮಾನವೀಯ ಕಾರ್ಯವಾಗಿದೆ ಎಂದು ಬಿಜೆಪಿ ಮುಖಂಡ ಕುಂಬ್ರಳ್ಳಿ ಸುಬ್ಬಣ್ಣ ಹೇಳಿದರು.



ನಗರದ ಗೌರಿಘಟ್ಟದ ಬೀದಿಯ ನಾಯಕರ ಸಮುದಾಯ ಭವನದಲ್ಲಿ ಕುಂಬ್ರಹಳ್ಳಿ ಸುಬ್ಬಣ್ಣ ಅಭಿಮಾನಿ ಬಳಗದವರು ಏರ್ಪಡಿಸಿದ್ದ ರಕ್ತದಾನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಕ್ತದಾನ ಮಾಡುವುದರಿಂದ ದಾನಿಯ ಆರೋಗ್ಯ ಉತ್ತಮವಾಗುವ ಜೊತೆಗೆ ರಕ್ತದ ಒತ್ತಡ, ಹೃದಯಾಘಾತದಿಂದ ದೂರವಿರಲು ಸಹಾಯವಾಗುತ್ತದೆ. ಜೊತೆಗೆ ಅವಶ್ಯವಿರುವ ವ್ಯಕ್ತಿಗೆ ರಕ್ತದಾನ ಮಾಡುವುದರಿಂದ ಒಂದು ಜೀವ ಉಳಿಸಿದ ಪುಣ್ಯ ನಮಗೆ ಸಿಗುತ್ತದೆ. ಆದ್ದರಿಂದ ಯುವಕರು ದುಶ್ಚಟಗಳಿಂದ ದೂರವಿದ್ದು ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವ ಮೂಲಕ ರಕ್ತದಾನ ಮಾಡಿ ಜೀವ ಉಳಿಸಿ ಎಂದರಲ್ಲದೆ ಅಭಿಮಾನಿಗಳ ಬಳಗದವರು ಸಮಾಜದಲ್ಲಿರುವ ಅಶಕ್ತರು, ಬಡವರಿಗೆ ನೆರವಾಗುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಹಾಗೂ ಬಡವರ ಮಕ್ಕಳ ಶಿಕ್ಷಣಕ್ಕೆ ನೆರವು ನೀಡುವಂತಹ ಕಾರ್ಯಕ್ರಮಗಳನ್ನು ರೂಪಿಸಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸಮಾಜ ಸೇವಕ ಯು.ಎನ್. ಪದ್ಮನಾಭರಾವ್ ಮಾತನಾಡಿದರು. ಪಾಲಾಕ್ಷ ಚಾರಿಟಬಲ್ ಟ್ರಸ್ಟ್ ಮತ್ತು ಜೀವದಾರ ರಕ್ತ ನಿಧಿ ಕೇಂದ್ರದ ಸಿಬ್ಬಂದಿಗಳು ರಕ್ತದಾನ ಶಿಬಿರದಲ್ಲಿ ಭಾಗವಹಿಸಿ ದಾನಿಗಳ ರಕ್ತ ಸಂಗ್ರಹಿಸಿದರು. ಶಿಬಿರದಲ್ಲಿ ಸುಮಾರು 38ಕ್ಕೂ ಹೆಚ್ಚಿನ ಜನರು ರಕ್ತದಾನ ಮಾಡಿದರು.

ರಕ್ತದಾನ ಶಿಬಿರದಲ್ಲಿ 39 ಮಂದಿ ರಕ್ತದಾನ

ಇದೇ ಸಂದರ್ಭದಲ್ಲಿ ತಾಪಂ ಮಾಜಿ ಅಧ್ಯಕ್ಷ ಬಿ.ಎಸ್. ಮಹದೇವಪ್ಪ, ಜಿಪಂ ಮಾಜಿ ಸದಸ್ಯ ಎಸ್‌ಎಂ. ಕೆಂಪಣ್ಣ, ತಾಪಂ ಮಾಜಿ ಸದಸ್ಯ ಹೆಮ್ಮರಗಾಲ ಶಿವಣ್ಣ, ಮಹದೇವ ನಾಯಕ, ಕೊಂಗಳ್ಳಿ ಬಸವರಾಜು, ಬಿಜೆಪಿ ತಾಲೂಕು ಅಧ್ಯಕ್ಷ ಪಿ.ಮಹೇಶ್ ಹೊರಳವಾಡಿ, ನಗರಸಭಾ ಮಾಜಿ ಅಧ್ಯಕ್ಷ ಎಚ್‌ಎಸ್.ಮಹದೇವ ಸ್ವಾಮಿ, ಮುಖಂಡರಾದ ಜಗದೀಶ್, ಜಿ. ಬಸವರಾಜು, ಅರುಣ್‌ಗೌಡ, ಶ್ರೀಕಂಠ, ಮರಳೂರು ಮಹೇಶ್, ಪ್ರಕಾಶ್ ಸೇರಿದಂತೆ ಹಲವು ಪ್ರಮುಖರು ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಓಪನ್ಹೈಮರ್ (ಇಂ): ಬೆ.10ಕ್ಕೆ, ಮ.1.35ಕ್ಕೆ, ಸಂ.5.10ಕ್ಕೆ, ರಾ.8.45ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಬಾರ್ಬಿ (ಇಂ): ಬೆ.10.55ಕ್ಕೆ, ರಾ.7.20ಕ್ಕೆ, ಪರಂವಃ (ಕ): ಮ.1.50ಕ್ಕೆ, ದೇವರ ಕನಸ್ಸು (ಕ): ಸಂ.4.45ಕ್ಕೆ, ಹಿಡಿಂಭ (ತೆ): ರಾ.9.50ಕ್ಕೆ.
ಸ್ಕ್ರೀನ್ 3	ವಾಲಟ್ಟಿ (ಮ): ಬೆ.11ಕ್ಕೆ, ಕೊಲೈ (ತ): ಮ.1.25ಕ್ಕೆ, ಬೇಬಿ (ತೆ): ಮ.3.55ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.7.15ಕ್ಕೆ, ಅನೀತಿ (ತ): ರಾ.10.05ಕ್ಕೆ.
ಸ್ಕ್ರೀನ್ 4	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.15ಕ್ಕೆ, ಡೇವಿಡ್ (ಕ): ಮ.1.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಸಂ.4ಕ್ಕೆ, ರಾ.7.10ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ
ಸ್ಕ್ರೀನ್ 2	ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
ಸ್ಕ್ರೀನ್ 3	ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
ಸ್ಕ್ರೀನ್ 4	ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಮಧುರ ಕಾವ್ಯ (ಕ): ಬೆ.10.45ಕ್ಕೆ, ಮಾವೀರನ್ (ತ): ಮ.1.20ಕ್ಕೆ, ರಾ.9ಕ್ಕೆ, ಪರಂವಃ (ಕ): ಸಂ.4.25ಕ್ಕೆ, ದೇವರ ಕನಸು (ಕ): ಸಂ.6.35ಕ್ಕೆ
ಸ್ಕ್ರೀನ್ 2	ಓಪನ್ಹೈಮರ್ (ಇಂ): ಬೆ.10.15ಕ್ಕೆ, ಮ.1.45ಕ್ಕೆ, ಸಂ.5.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 3	ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಬೆ.10.20ಕ್ಕೆ, ಮಿಷನ್ ಇಂಪಾಸಿಬಲ್: ಡೆಡ್ ರೆಕನಿಂಗ್ ಪಾರ್ಟ್ ಒನ್ (ಇಂ): ಮ.1.05ಕ್ಕೆ, ಸಂ.6.25ಕ್ಕೆ, ಬಾರ್ಬಿ (ಇಂ): ಸಂ.4.10ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಬಾರ್ಬಿ (ಇಂ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.10ಕ್ಕೆ, ಸಂ.4ಕ್ಕೆ, ರಾ.6.45ಕ್ಕೆ, ವಾಲಟ್ಟಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	**(ದೂ: 2521923)**
ಹಿಡಿಂಬ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಅಪರೂಪ (ಕ)	2 ಪ್ರದರ್ಶನಗಳು
ಉಮಾ ಚಿತ್ರಮಂದಿರ	**(ದೂ: 2520009)**
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಡಾನ್ ಕುಮಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಮಾವೀರನ್ (ತ)	4 ಪ್ರದರ್ಶನಗಳು
ಸಂಗಂ	
ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ)	4 ಪ್ರದರ್ಶನಗಳು
ಲಿಡೋ	
ಬೇಬಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ಹಿಡಿಂಬ (ತೆ)	4 ಪ್ರದರ್ಶನಗಳು
ಪ್ರಭಾ	
ಮಧುರಕಾವ್ಯ (ಕ)	4 ಪ್ರದರ್ಶನಗಳು

ಬೈಕ್‌ಗೆ ಕಾರು ಡಿಕ್ಕಿ; ವ್ಯಕ್ತಿ ಸಾವು

ಗುಂಡ್ಲುಪೇಟೆ, ಜು.20–ಬೈಕ್‌ಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸಾವನ್ನಪ್ಪಿದ ಘಟನೆ ಗುಂಡ್ಲುಪೇಟೆ–ಊಟಿ ಮುಖ್ಯ ರಸ್ತೆಯ ಬಸವಾಪುರ ಗೇಟ್ ಬಳಿ ಸಂಭವಿಸಿದೆ. ಗುಂಡ್ಲುಪೇಟೆ ನಿವಾಸಿ ಕಿಟ್ಟರಾಚನಾಯಕ(64) ಅಪಘಾತದಲ್ಲಿ ಮೃತಪಟ್ಟವರಾಗಿದ್ದು, ಇವರು ಜು.19ರಂದು ಮಧ್ಯಾಹ್ನ 12 ಗಂಟೆ ಸುಮಾರಿನಲ್ಲಿ ಗುಂಡ್ಲುಪೇಟೆಯಿಂದ ಹಂಗಳ ಕಡೆಗೆ ಬೈಕ್ (ಕೆಎ–10 ಯು 4596)ರಲ್ಲಿ ಹೋಗುತ್ತಿದ್ದಾಗ ಹಿಂಬದಿಯಿಂದ ವೇಗವಾಗಿ ಬಂದ ಕಾರು (ಕೆಎ 09 ಸಿ5139) ಇವರ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಅವರು ತೀವ್ರವಾಗಿ ಗಾಯಗೊಂಡಿದ್ದರು. ಗುಂಡ್ಲುಪೇಟೆ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಈ ಸಂಬಂಧ ಗುಂಡ್ಲುಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅನಂತ ಜ್ಞಾನದ ಮೂಲಕ ಭಗವಂತನ ಸಾಕ್ಷಾತ್ಕಾರ ಸಾಧ್ಯ

● ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಸ್ವಾಮಿ ಗೌತಮಾನಂದಜೀ ಬೋಧನೆ
● ಮೈಸೂರು ರಾಮಕೃಷ್ಣ ಆಶ್ರಮದಲ್ಲಿ ವಿಶೇಷ ಪ್ರವಚನ–ಆಶೀರ್ವಚನ



ಮೈಸೂರು, ಜು.20(ಎಂಕೆ)– ಅನಂತ ಜ್ಞಾನದ ಮೂಲಕ ಭಗವಂತನ ಸಾಕ್ಷಾತ್ಕಾರ ಸಾಧ್ಯ ಎಂದು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾದ ಸ್ವಾಮಿ ಗೌತಮಾನಂದಜೀ ಮಹಾರಾಜ್ ತಿಳಿಸಿದರು.

ಶ್ರೀ ರಾಮಕೃಷ್ಣ ಆಶ್ರಮದಲ್ಲಿ ಗುರುವಾರ ವಿಶೇಷ ಪ್ರವಚನ ಹಾಗೂ ಆಶೀರ್ವಚನ ನೀಡಿದ ಅವರು, ಅನಂತ ಜೀವನ, ಅನಂತ ಸುಖ ಹಾಗೂ ಅನಂತ ಜ್ಞಾನಕ್ಕಾಗಿ ಪ್ರಯತ್ನ ಮಾಡುವ ಪರಿಯೇ ಭಗವಂತನನ್ನು ಕಾಣುವ ದಾರಿಯಾಗಿದೆ. ಆತ್ಮದ ರೂಪದಲ್ಲಿ ಅಮರನಾಗಿರುವ ಭಗವಂತನು ಅನಂತ ಜ್ಞಾನ, ಸುಖ–ಶಾಂತಿ ಉಳ್ಳವನಾಗಿದ್ದು, ಸೀಮಿತ ಸುಖಬೇಕಾ... ಭಗವಂತನನ್ನು ಕಾಣುವ ಅನಂತ ಸುಖ ಬೇಕಾ ಎಂಬುದನ್ನು ನಾವುಗಳು ನಿರ್ಧರಿಸಬೇಕಾಗಿದೆ ಎಂದರು.

ಭಗವಂತನಲ್ಲಿರುವ ಅನಂತ ಜ್ಞಾನವೂ ಆತನ ರೂಪ ಪಡೆದಿರುವ ನಮ್ಮಲ್ಲಿಯೂ ಇದೆ. ಸ್ವಲ್ಪ ಪ್ರಯತ್ನ ಮಾಡಿದರೆ ಆ ಅನಂತ ಜ್ಞಾನವನ್ನು ನಾವು ಪಡೆದುಕೊಳ್ಳಬಹುದು. ಇದಕ್ಕಾಗಿ ದೃಢ ಸಂಕಲ್ಪ ಮಾಡಬೇಕು. ಭಗವಂತನನ್ನು ನೋಡಬೇಕು ಎಂಬ ಮಹದಾಸೆ ಇಟ್ಟುಕೊಂಡರೆ ಸಾಧ್ಯವಾಗಲಿದೆ ಎಂದು ಸಲಹೆ ನೀಡಿದರು.

ಜನರು ಎಲ್ಲಿಗೆ ಓಡುತ್ತಿದ್ದಾರೆ, ಏತಕ್ಕಾಗಿ ಪರದಾಡುತ್ತಿದ್ದಾರೆ ಎಂಬುದನ್ನು ಗಮನಿಸಿದರೆ ಮೂರು ವಿಷಯಗಳು ಗಮನಕ್ಕೆ ಬರುತ್ತವೆ. ಅವುಗಳಲ್ಲಿ ಮೊದಲನೆಯದು ದೀರ್ಘಕಾಲಿನ ಜೀವನ ನಡೆಸುವುದು. ಎರಡನೇಯದು ಸುಖ ಪಡೆಯುವುದು ಮತ್ತು ಜ್ಞಾನಕ್ಕಾಗಿ ಪರದಾಡುವುದು ಮೂರನೆಯದಾಗಿದೆ. ಸ್ವಾರ್ಥ ಸಾಧನೆಗಾಗಿ ಓಡಾಡುವುದೇ ದೀರ್ಘಕಾಲಿನ ಜೀವನ, ಸಂಬಂಧಿಕರು ಮತ್ತು ಸ್ನೇಹಿತರೊಂದಿಗೆ ಹರಟೆ ಹೊಡೆಯುವುದೇ ಸುಖ ಹಾಗೂ ಎರಡ್ಮೂರು ಡಾಕ್ಟರೇಟ್ ಪಡೆದರೆ ಜ್ಞಾನ ಸಂಪಾದನೆ ಎಂದುಕೊಂಡಿದ್ದಾರೆ. ಅದಕ್ಕಾಗಿಯೇ ಶ್ರೀರಾಮಕೃಷ್ಣರು, ಮನುಷ್ಯನಿಗೆ ನೂರೇ ವರ್ಷ ಕಣಯ್ಯ... ಇರುವಷ್ಟು ದಿನ ಎಷ್ಟು ಬೇಕಾದರೂ ಸುಖ ಅನುಭವಿಸು... ನೂರು ವರ್ಷವಾದ ಮೇಲೆ ಗಂಟು ಕಟ್ಟಲೇಬೇಕು ಎಂದು ಹೇಳಿದ್ದಾರೆಂದು ಸ್ಮರಿಸಿದರು.

> **“** ಇಂದು ಓದುವವರು ಹೆಚ್ಚಾಗಿದ್ದಾರೆ. ಆದರೆ ಓದಿಗೆ ತಕ್ಕಂತೆ ಅನುಷ್ಠಾನಗೊಳಿಸುವವರು ವಿರಳಾತೀ ವಿರಳ. ಪದವಿಗಳನ್ನು ಪಡೆಯುವುದೇ ಗೀಳಾಗಿದೆ. ಪಡೆದ ಜ್ಞಾನವನ್ನು ಪ್ರಾಯೋಗಿಕವಾಗಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ ಭಗವಂತನ ಸಾಕ್ಷಾತ್ಕಾರ ಪಡೆಯುವುದೇ ಜೀವನದ ಗುರಿಯಾಗಬೇಕು.
>
> –ಸ್ವಾಮಿ ಗೌತಮಾನಂದಜೀ ಮಹಾರಾಜ್, ಉಪಾಧ್ಯಕ್ಷರು, ರಾಮಕೃಷ್ಣ ಮಹಾಸಂಘ

ಈಗ ನೂರು ವರ್ಷ ಬದುಕುವವರ ಸಂಖ್ಯೆ ಬಹಳ ಕಡಿಮೆ. ಬದುಕಿದ್ದರೂ ಅಷ್ಟೂ ವರ್ಷಗಳ ಕಾಲ ಓದಲು ಸಾಧ್ಯವಿಲ್ಲ. 10 ಸಾವಿರ ವರ್ಷದಿಂದ ಈ ದೇಶದ ಋಷಿಮುನಿಗಳು ಕೊಟ್ಟಿರುವ ಜ್ಞಾನವನ್ನು ಸೀಮಿತ ವಯಸ್ಸಿನಲ್ಲಿ ತಿಳಿದುಕೊಳ್ಳಲು ಸಾಧ್ಯವೇ ಎಂದರಲ್ಲದೆ ಜ್ಞಾನ ಅಗತ್ಯಕ್ಕೆ ಅನುಗುಣವಾಗಿರಬೇಕು. ನೂರು ವರ್ಷವಿರಲೀ 80 ವರ್ಷ ಬದುಕುವುದೇ ದೊಡ್ಡದಾಗಿರುವ ಕಾಲದಲ್ಲಿ 70–80 ವರ್ಷ ತುಂಬುತ್ತಿದ್ದಂತೆಯೇ ಸಹಸ್ರ ಚಂದ್ರ ದರ್ಶನ ಹಾಗೂ ದೊಡ್ಡ ದೊಡ್ಡ ಕಾರ್ಯಕ್ರಮಗಳನ್ನು ಮಾಡಿಕೊಳ್ಳುತ್ತಾರೆ. ದೇಹಕ್ಕೆ ಹುಟ್ಟು–ಸಾವಿದೆ. ಆದರೆ ಆತ್ಮಕ್ಕೆ ಹುಟ್ಟು–ಸಾವಿಲ್ಲ. ಪ್ರಪಂಚದಲ್ಲಿ ನೀನಿರುವ ಇತಿಹಾಸ ಏನಾಗಿದೆ ಎಂಬುದನ್ನು ತಿಳಿದುಕೊಳ್ಳುವುದರ ಜೊತೆಗೆ ಭಗವಂತನ ಬಗ್ಗೆ ತಿಳಿದರೆ ಆಧ್ಯಾತ್ಮದ ಜ್ಞಾನವೂ ಲಭಿಸುತ್ತದೆ ಎಂದು ಕಿವಿಮಾತು ಹೇಳಿದರು.

ಜಪ ಶಕ್ತಿ: ಭಗವಂತನನ್ನು ಕಾಣಲು ಇರುವ ಅತ್ಯಂತ ಸರಳ ಹಾಗೂ ಶಕ್ತಿಯುತ ಮಾರ್ಗವೆಂದರೆ ಜಪ(ಪ್ರಾರ್ಥನೆ) ಮಾಡುವುದು. ಜಪದಿಂದಲೇ ಮನಸ್ಸಿಗೆ ಒಳ್ಳೆಯದಾಗುತ್ತದೆ. ಕೆಟ್ಟ ಆಲೋಚನೆಗಳು ದೂರವಾಗಿ ಭಗವಂತನ ಸಾಕ್ಷಾತ್ಕಾರವಾಗುತ್ತದೆ. ಎಲ್ಲರಿಗೂ ಜಪ ಮಾಡಲು ಸಾಧ್ಯವಿದೆ. ಅದಕ್ಕಾಗಿ ಸಂಕಲ್ಪ ಮಾಡಬೇಕು. ಭಗವಂತನನ್ನು ಕಾಣುವ ದಾರಿಯಲ್ಲಿ ನಾನು ಜಪ ಮಾಡಿ ಒಂದು ಮೆಟ್ಟಿಲು ಹತ್ತಿದರೆ, ಉಳಿದ ಮೆಟ್ಟಿಲುಗಳಿಂದ ಭಗವಂತನೇ ಇಳಿದುಬಂದು ಕೈ ಹಿಡಿದು ತನ್ನತ್ತ ಕರೆದುಕೊಳ್ಳುತ್ತಾನೆ ಎಂದರು.

ವಿವೇಕಾನಂದರ ಸ್ಮರಣೆ

ಮೈಸೂರಿನಲ್ಲಿ ಶ್ರೀ ರಾಮಕೃಷ್ಣ ಆಶ್ರಮ ಅಭಿವೃದ್ಧಿಯಾಗಿರುವುದನ್ನು ನೋಡಿದರೆ ಸಂತೋಷವಾಗುತ್ತದೆ. ಸ್ವಾಮಿ ವಿವೇಕಾನಂದರ ಸ್ಮರಣೆ, ಪ್ರವಚನ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀ ರಾಮಕೃಷ್ಣ ಆಶ್ರಮ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮತ್ತಿತರರು ಉಪಸ್ಥಿತರಿದ್ದರು.

‘ಅಡುಗೆ ಮನೆಯಲ್ಲೊಂದು ಹುಲಿ’ ನಾಟಕ ಪ್ರದರ್ಶನ



ಮೈಸೂರು, ಜು. 20– ಮೈಸೂರು ಮತ್ತು ಸುತ್ತಮುತ್ತಲಿನ ಸದಭಿರುಚಿಯ, ಸಹೃದಯ ರಂಗಾಸಕ್ತರಿಗಾಗಿ ನಟನವು ವಾರಾಂತ್ಯ ರಂಗ ಪ್ರದರ್ಶನಗಳನ್ನು ನಡೆಸುತ್ತಿದ್ದು, ಜು.23ರಂದು ಸಂಜೆ 6.30ಕ್ಕೆ ರಾಮಕೃಷ್ಣ ನಗರದಲ್ಲಿರುವ ನಟನ ರಂಗಶಾಲೆಯಲ್ಲಿ ಖ್ಯಾತ ನಾಟಕಕಾರ, ರಾಷ್ಟ್ರ ಪ್ರಶಸ್ತಿ ವಿಜೇತ, ನಿರ್ದೇಶಕ, ನಿರ್ಮಾಪಕ, ನಟ ಬಿ. ಸುರೇಶ ಅವರ ‘ಅಡುಗೆ ಮನೆಯಲ್ಲೊಂದು ಹುಲಿ’ ನಾಟಕವು ನಟನ ರಂಗಶಾಲೆಯ ಪ್ರಾಂಶುಪಾಲರೂ, ಯುವ ರಂಗ ನಿರ್ದೇಶಕರೂ ಆದ ಮೇಘ ಸಮೀರ ಅವರ ವಿನ್ಯಾಸ ಮತ್ತು ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿದೆ.

ಇದೊಂದು ಸುಳ್ಳಿನ ಪಯಣದ ಕಥಾನಕವನ್ನು ಹೇಳುವ ನಾಟಕ. ಹಾಗೆ ನೋಡಿದರೆ ‘ನಾಟಕ’ ಎನ್ನುವುದೇ ಒಂದು ಸುಳ್ಳಿನ ಆಟ. ಆದರೆ ಈ ಆಟ ಸುಳ್ಳಿನ ಮೂಲಕವೇ ಸತ್ಯವನ್ನು ಶೋಧಿಸುವಂತದ್ದು. ಹೀಗೆ ಸುಳ್ಳಿನ ಮುಖಾಂತರ ನಮ್ಮ ಸಮಾಜದ ಅನೇಕ ಸತ್ಯಗಳನ್ನು ಹುಡುಕುವ ಒಂದು ಅಪರೂಪದ ವಿಡಂಬನಾತ್ಮಕ ನಾಟಕ ‘ಅಡುಗೆ ಮನೆಯಲ್ಲೊಂದು ಹುಲಿ’. ಮಾಹಿತಿಗಾಗಿ 7259537777, 9480468327, 9845595505 ಸಂಪರ್ಕಿಸಬಹುದು.

ಕುರುಬ ಸಮುದಾಯವನ್ನು ಎಸ್ಟಿಗೆ ಸೇರಿಸುವಂತೆ ರಾಜ್ಯ ಸರ್ಕಾರದಿಂದ ಶಿಫಾರಸು

ಬೆಂಗಳೂರು, ಜು.20– ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಿದೆ. ಸಚಿವ ಸಂಪುಟ ಸಭೆಯಲ್ಲಿ ಈ ಕುರಿತು ನಿರ್ಧಾರ ಮಾಡಲಾಗಿದ್ದು, ಈ ಸಂಬಂಧ ಎಸ್‌ಟಿಗೆ ಸೇರಿಸುವಂತೆ ಶಿಫಾರಸು ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. ಈ ಹಿಂದೆ 2020–21ರಲ್ಲಿ ಸಮುದಾಯದ ಮುಖಂಡರು, ಸ್ವಾಮೀಜಿಗಳು ಕುರುಬ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಆಗ್ರಹಿಸಿ ಬೃಹತ್ ಸಂಖ್ಯೆಯಲ್ಲಿ ಪಾದಯಾತ್ರೆ ನಡೆಸಿದ್ದರು. ಈ ಸಂಬಂಧ ವರದಿ ತಯಾರಿಸುವಂತೆ ಕರ್ನಾಟಕ ರಾಜ್ಯ ಬುಡಕಟ್ಟು ಸಂಸ್ಥೆಗೆ ಅಂದಿನ ಸರ್ಕಾರ ಸೂಚಿಸಿತ್ತು.ಕರ್ನಾಟಕ ರಾಜ್ಯ ಬುಡಕಟ್ಟು ಸಂಸ್ಥೆ ವರದಿ ನೀಡಿದ್ದು, ಇದರಲ್ಲಿನ ಶಿಫಾರಸುಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಮಂಗಳವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

ಅಮೆರಿಕದಲ್ಲಿ ಸಿಡಿಲು ಬಡಿದು ಭಾರತೀಯ ವಿದ್ಯಾರ್ಥಿನಿ ಮೆದುಳಿಗೆ ಹಾನಿ

ಹ್ಯೂಸ್ಟನ್, ಜು.20– ಅಮೆರಿಕದ ಹ್ಯೂಸ್ಟನ್ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಗೆ ಸಿಡಿಲು ಬಡಿದು ಜೀವನ್ಮರಣದ ಮಧ್ಯೆ ಹೋರಾಡುತ್ತಿದ್ದಾರೆ. ಹ್ಯೂಸ್ಟನ್ ವಿಶ್ವವಿದ್ಯಾಲಯದಲ್ಲಿ ಮಾಹಿತಿ ತಂತ್ರಜ್ಞಾನ ಓದುತ್ತಿದ್ದ ವಿದ್ಯಾರ್ಥಿನಿ ಸುಸ್ರೂನ್ಯ ಕೋಡೂರು ಜುಲೈ 4 ನೇ ವಾರಾಂತ್ಯದಲ್ಲಿ ಸ್ಯಾನ್ ಜಸಿಂಟೋ ಸ್ಮಾರಕ ಉದ್ಯಾನವನದಲ್ಲಿ ತನ್ನ ಸ್ನೇಹಿತರೊಂದಿಗೆ ಕೊಳದ ಬಳಿ ನಡೆದುಕೊಂಡು ಹೋಗುತ್ತಿದ್ದಾಗ ಸಿಡಿಲು ಬಡಿದಿದೆ.

ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಾಮರಾಜನಗರ

ಅಸಲು ದಾವಾ ಸಂಖ್ಯೆ : 138 / 2016

ವಾದಿಗಳು: 1) ಆಲ್ವಿನ್ ಕ್ರಿಸ್ಟೋಫರ್ ಬಿನ್ ಗುರುಶಾಂತ, ಸುಮಾರು 28 ವರ್ಷ, ಜನತಾ ಕಾಲೋನಿ, ಹೀರಿಸಾವೆ ಅಂಚೆ, ಚನ್ನರಾಯಪಟ್ಟಣ ತಾಲ್ಲೋಕು, ಹಾಸನ ಜಿಲ್ಲೆ.
2) ರೂತ್ ಲಿಡಿಯಾ ಬಿನ್ ಗುರುಶಾಂತ ಕೋಂ ಆನಂದರಾಜ್, ಸುಮಾರು 30 ವರ್ಷ, ರಾಜಪ್ಪ ಲೇಔಟ್, 1ನೇ ಕ್ರಾಸ್, ಜನ್ನಾಪುರ ಅಂಚೆ, ಜಯಶ್ರೀ ವೃತ್ತ, ಭದ್ರಾವತಿ, ಶಿವಮೊಗ್ಗ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು

ಶ್ರೀ ಭಾಸ್ಕರ್ ಮನೋರಾಜ್ ಮತ್ತು ಇತರರು 3. ವಿಜಯ ಕ್ರೀಸ್ಟೋಫರ್ ಮೃತ, ಇವರ ವಾರಸುದಾರರು, 3(ಎ) ಕವಿತಾ ಕೋಂ ಲೇಟ್ ವಿಜಯಕ್ರೀಸ್ಟೋಫರ್ ಬಿನ್ ಸಿದ್ದಯ್ಯ, ವಯಸ್ಸು 32 ವರ್ಷ. 3(ಬಿ) ಸಾಮುಲ್ ವಿ. ಕ್ರೀಸ್ಟೋಫರ್ (ಚಿಂಟು), ಬಿನ್ ಲೇಟ್ ವಿಜಯಕ್ರೀಸ್ಟೋಫರ್, ಮೈನರ್.
ಈ ಮೇಲೆ ಹೇಳಿದ 3(ಬಿ)ರವರು ಮೈನರ್ ಆಗಿದ್ದು, ಸದರಿಯವರನ್ನು ಪ್ರತಿನಿಧಿಸುವವರು ತಾಯಿ ಕವಿತಾ ಆಗಿರುತ್ತಾರೆ. ಇವರ ವಾಸ: ಕೋಡಿಉಗನೆ ಗ್ರಾಮ, ವೆಂಕಟಯ್ಯನ ಛತ್ರ ಅಂಚೆ, ಹರದನಹಳ್ಳಿ ಹೋಬಳಿ, ಚಾಮರಾಜನಗರ ತಾಲ್ಲೋಕು ಮತ್ತು ಜಿಲ್ಲೆ. ಪಿನ್ ಕೋಡ್ ನಂ. 571127.

ಸಾರ್ವಜನಿಕ ಪ್ರಕಟಣೆ

ವಾದಿಗಳು ಘನ ನ್ಯಾಯಾಲಯದಲ್ಲಿ ಪ್ರತಿವಾದಿಗಳ ವಿರುದ್ಧ ದಾವಾ ಷೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ಭಾಗಾಂಶ ಮತ್ತು ಪ್ರತ್ಯೇಕ ಸ್ವಾಧೀನ ಕೋರಿ ಈ ಮೇಲ್ಕಂಡ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 01.09.2023 ರಂದು ಇಯರಿಂಗ್ ಇರುತ್ತದೆ. ಸದರಿ ವಿಷಯಕ್ಕೆ ಸಂಬಂಧಪಟ್ಟಲ್ಲಿ ಅಥವಾ ಹಿತಾಸಕ್ತಿ ಇರುವವರು ಮಧ್ಯಾಹ್ನ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲಿ ಹಾಜರಾಗಿ ಖುದ್ದು ನೀವಾಗಲೀ ಅಥವಾ ನಿಮ್ಮ ವಕೀಲರ ಮೂಲಕವಾಗಲೀ ತಕರಾರು ಸಲ್ಲಿಸುವುದು ಇಲ್ಲದಿದ್ದರೆ ತಮ್ಮ ತಕರಾರು ಯಾವುದು ಇಲ್ಲ ಎಂದು ಪರಿಗಣಿಸಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು, ತಿಳಿಯುವುದು.

ಅನುಸೂಚಿ ಸ್ವತ್ತು

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಕಸಬಾ ಹೋಬಳಿ, ಕಿರಗಸೂರು ಗ್ರಾಮದ ಸ.ನಂ. 111/2 ರಲ್ಲಿ 1 ಎಕರೆ 39 ಗುಂಟೆ ಸ್ವತ್ತಿಗೆ ಚಕ್ಕುಬಂದಿ:
ಪೂರ್ವಕ್ಕೆ: ಯೇಸುರತ್ನ ಬಿನ್ ಪಾಂಡುರಾಜ್ ರವರ ಜಮೀನು; ಪಶ್ಚಿಮಕ್ಕೆ: ಯೇಸುದಾಸ್ ಬಿನ್ ದಿಲೀಪ್ ರವರ ಜಮೀನು; ಉತ್ತರಕ್ಕೆ: ಸರ್ಕಾರಿ ಗೋಮಾಳ; ದಕ್ಷಿಣಕ್ಕೆ: ದೊಳ್ಳೇಗೌಡ ಬಿನ್ ದೊರೆಸ್ವಾಮಿರವರ ಜಮೀನು.

ನ್ಯಾಯಾಲಯದ ಅಪ್ಪಣೆ ಮೇರೆಗೆ
ಸಹಿ/– ಶಿರಸ್ತೇದಾರರು
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಚಾಮರಾಜನಗರ

ವಾದಿಗಳ ಪರ ವಕೀಲರು
ಸಹಿ/– ರಂಗಸ್ವಾಮಿ, ಬಿ.ಎ.ಎಲ್.ಎಲ್.ಬಿ
ವಕೀಲರು
#23/293, 4ನೇ ಕ್ರಾಸ್, ಶಂಕರಪುರ
ಬಡಾವಣೆ, ಚಾಮರಾಜನಗರ ಟೌನ್.
ಮೊ: 9481817248

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಕೆಳಗೆ ನಮೂದಿಸಿರುವ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ಥಿರ ಸ್ವತ್ತನ್ನು ನನ್ನ ಕಕ್ಷಿದಾರರಾದ ಶ್ರೀಮತಿ ರಾಜೇಶ್ವರಿ ರವರು ಶ್ರೀಮತಿ ಕುಮಾರಿ ರವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಆದ್ದರಿಂದ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಮಾಲೀಕತ್ವ ಹಕ್ಕು, ಹಿತಾಸಕ್ತಿಗಳು ಇದ್ದಲ್ಲಿ ಅಂತಹವರು ಈ ಪ್ರಕಟಣೆಯ ದಿನಾಂಕದಿಂದ ಏಳು ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ನಮ್ಮ ಕಕ್ಷಿದಾರರನ್ನು ಕೆಳಕಂಡ ವಿಳಾಸದಲ್ಲಿ ನೇರವಾಗಿ ಸಂಪರ್ಕಿಸತಕ್ಕದ್ದು. ಇಲ್ಲವಾದಲ್ಲಿ, ಸದರಿ ಖರೀದಿ ಪ್ರಕ್ರಿಯೆಯಲ್ಲಿ ಮುಂದುವರೆಯಲು ನಮ್ಮ ಕಕ್ಷಿದಾರರು ಕಾನೂನುಬದ್ಧ ಹಕ್ಕು ಮತ್ತು ಅಧಿಕಾರ ಉಳ್ಳವರಾಗಿರುತ್ತಾರೆಂದು ತಿಳಿಯುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಸಿಟಿ, ಹೆಬ್ಬಾಳ್, ರೆವಿನ್ಯೂ ಬಡಾವಣೆ, ಸುಭಾಷ್ ನಗರ, ಸರ್ವೆ ನಂ.197ರಲ್ಲಿ ವಿಂಗಡಿಸಿರುವ ನಿವೇಶನ ಸಂಖ್ಯೆ 203ರ ವಿಸ್ತೀರ್ಣ 30 X 40 ಅಡಿಗಳ ನಿವೇಶನ ಹಾಗೂ ಅದರಲ್ಲಿ ಕಟ್ಟಿರುವ ಎ.ಸಿ.ಶೀಟಿನ 3 ಚದರದ ಮನೆ.

ಕಕ್ಷಿದಾರರ ವಿಳಾಸ :ವಿ.ರಾಜೇಶ್ವರಿ, ಕೋಂ ಲೇಟ್ ಶೇಖರ್ ಎಸ್. ನಂ.134, 4ನೇ ಕ್ರಾಸ್, ಹೆಬ್ಬಾಳ್ 1ನೇ ಹಂತ, ಮೈಸೂರು- 570016 (ಮೊ: 9986217399)

ಸಹಿ/- ಕೆ.ಆರ್. ಸುಬ್ರಮಣ್ಯ, ವಕೀಲರು.
#243/5. 1ನೇ ಮಹಡಿ , ಎಸ್.ಬಿ.ಐ.ಮುಖ್ಯ ರಸ್ತೆ, ಹೆಬ್ಬಾಳು 1ನೇ ಹಂತ, ಮೈಸೂರು
ದಿನಾಂಕ: 21.07.2023 9060769092

ಕರ್ನಾಟಕ ಸರ್ಕಾರ
ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಹಾಸನ
ದೂರವಾಣಿ ಸಂಖ್ಯೆ:08172–256013 mail ID:ddszphsn@gmail.com
ಸಂ:ರೇಉನಿ/ಹಾಜಿಪಂ/ಅಭಿ/ಹೊಗು/ಟೆ/53/2023–24 ದಿನಾಂಕ:20/07/2023.

:: ಇ.ಪ್ರೊಕ್ಯೂರ್‌ಮೆಂಟ್ ಇ–ಟೆಂಡರ್ ಪ್ರಕಟಣೆ ::

2023–24ನೇ ಸಾಲಿಗೆ ರೇಷ್ಮೆ ಇಲಾಖೆಯ ಹಾಸನ ವ್ಯಾಪ್ತಿಯ ಅಧೀನ ಸಂಸ್ಥೆಗಳ ಕಾರ್ಯಾಧಾರಿತ ಆಧಾರದ ಮೇಲೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಇ–ಟೆಂಡರ್ ಕರೆಯುವ ಬಗ್ಗೆ ಇ.ಪ್ರೊಕ್ಯೂರ್‌ಮೆಂಟ್ ::ಇ–ಟೆಂಡರ್ ಪ್ರಕಟಣೆ:: 1)ಟೆಂಡರ್ ಪ್ರಕಟಣೆ ದಿನಾಂಕ:20/07/2023 2)ಟೆಂಡರ್‌ಗೆ ಇಟ್ಟ ಅಂದಾಜು ಮೊತ್ತ: ರೂ 23,00,000/– 3)ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : ದಿನಾಂಕ: 03/08/2023 E procurement ಸಂಜೆ 3:00 ರವರೆಗೆ 4)ತಾಂತ್ರಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ: ದಿನಾಂಕ : 04/08/2023 ಸಂಜೆ: 04:00ಗಂಟೆಗೆ ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಡಿ.ಎಂ ಹಳ್ಳಿ ಬಿ.ಎಂ ರಸ್ತೆ, ಹಾಸನ 5)ಆರ್ಥಿಕ ಬಿಡ್ ತೆರೆಯುವ ವೇಳೆ ದಿನಾಂಕ ಮತ್ತು ಸ್ಥಳ: 10/08/2023 ಸಂಜೆ: 04:00ಗಂಟೆಗೆ ರೇಷ್ಮೆ ಉಪನಿರ್ದೇಶಕರ ಕಛೇರಿ, ಜಿಲ್ಲಾ ಪಂಚಾಯತ್, ಡಿ.ಎಂ ಹಳ್ಳಿ ಬಿ.ಎಂ ರಸ್ತೆ, ಹಾಸನ 6)ಟೆಂಡರ್ ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ. ಮೊತ್ತ: ರೂ.23,000/– 7)ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ರೇಷ್ಮೆ ಉಪನಿರ್ದೇಶಕರು,ಜಿಲ್ಲಾ ಪಂಚಾಯತ್, ಹಾಸನ ದೂರವಾಣಿ ಸಂಖ್ಯೆ: 08172–256013 ಟೆಂಡನರ್‌ನಲ್ಲಿ ಸಲ್ಲಿಸಬೇಕಾದ ದಾಖಲಾತಿಗಳ ಹಾಗೂ ಇನ್ನಿತರ ನಿಬಂಧನೆಗಳ ವಿವರಗಳನ್ನು ಇ–ಪೋರ್ಟಲ್ ನಲ್ಲಿ ಪಡೆಯಬಹುದು.

ಸಹಿ/– ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್,ಹಾಸನ
ವಾಸಾಸಂಇ/ಹಿಸನಿ/ಹಾಸನ/149/ಕೆಎಸ್‌ಎಂಸಿಎ/152/2023–24

ಕೇಂದ್ರೀಯ ವಿದ್ಯಾಲಯ ಮಾದಾಪುರ ಪೋಸ್ಟ್, ಚಾಮರಾಜನಗರ ೫೭೧೩೧೩
केंद्रीय विद्यालय, मादापुरा पोस्ट,चामराजनगर-५७१३१३
KENDRIYA VIDYALAYA CHAMARAJANAGAR
Madapura Post, Chamarajanagar, - 571313 (Karnataka)
E-mail: kvchamarajanagara@gmail.com Phone: 08226-297179
Website: https://chamrajnagar.kvs.ac.in

Azadi Ka Amrit Mahotsav

F.13.350/KVC/2022-23/ Date : 19.07.2023

ನೇರ ಸಂದರ್ಶನ/ तात्कालिक साक्षात्कार / Walk-in-interview

The interested & eligible candidates may appear for WALK-IN-INTERVIEW for the following posts purely on contractual basis for the academic year 2023-24. On 27.07.2023

ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು 2023-24ರ ಶೈಕ್ಷಣಿಕ ವರ್ಷಕ್ಕೆ ಗುತ್ತಿಗೆ ಆಧಾರದ ಮೇಲೆ ಈ ಕೆಳಗಿನ ಹುದ್ದೆಗಳಿಗೆ ನೇರ ಸಂದರ್ಶನಕ್ಕೆ ಹಾಜರಾಗಬಹುದು

1. Nursery ECCE trained Teachers shall be engaged by KV as per the qualification prescribed by NCTE:~ Secondary class (Class X or its equivalent) from a recognised board, minimum 18 years of age and should have induction training in pre-school Education. Or Any person possessing skill training / adequate training as prescribed by NIPCCD, NSDC or any other institution recognised by the central Government/ appropriate Government/ Recognised University , Monthly consolidated Pay : Rs. 21,250/- ,Pro-rata Basis

2. Nurse B.Sc nursing/3years Diploma with BLS Certificate.

Note: The verification and submission of documents - **09:30 AM to 10: 30 AM** on above date in the Vidyalaya Premises.

For Further information regarding eligibility, Bio-Data form etc. Log on to website : https://chamrajnagar.kvs.ac.in दिये गये पद अस्थायी है तथा नियम और शर्त के.वि.सं. के अनुसार हैं / The posts are purely contractual and other terms & conditions applicable as per KVS rules.

आवेदन, शैक्षणिक योग्यता और अन्य जानकारी को विस्तार से जानने के लिए हमारे वेबसाइट https://chamrajnagar.kvs.ac.in को देखे

Visit website: https://chamrajnagar.kvs.ac.in for downloading application, Educational Qualification & other details.

पूर्णरूप से भरे हुए आवेदन पत्र, संबंधित मूल दस्तावेजों और प्रतिलिपियों के साथ उपर्युक्त दिनांक एवं समय पर विद्यालय में उपस्थित हों। Duly Filled application form along with Original & Xerox copies of the documents should be brought on the interview date.

● साक्षात्कार में भाग लेने के लिए उम्मीदवारों को कोई टीए और डीए का भुगतान नहीं किया जाएगा
TA & DA will be paid to the candidates for attending the interview.

Phone : 08226-297179 Sd/- Principal